ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ

"ವಸುಧೇಂದ್ರರವರ ಆಯ್ದ ಸಣ್ಣಕಥೆಗಳು ಒಂದು ಅಧ್ಯಯನ"

ಮಾರ್ಗದರ್ಶಕರು

ಡಾ. ಗುರುಮೂರ್ತಿ.ಡಿ
ಮುಖ್ಯಸ್ಥರು, ಕನ್ನಡ ವಿಭಾಗ
ವಿಜಯ ಪದವಿ ಕಾಲೇಜು,
ಬಸವನಗುಡಿ, ಬೆಂಗಳೂರು- 560004

ಸಂಶೋಧನಾ ವಿದ್ಯಾರ್ಥಿ
ಎಂ.ಮನೋಜ್

ನೋಂದಣಿ ಸಂಖ್ಯೆ : BMSBK001 50701030034

ವರ್ಷ: 2015-16

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ

ನರಸಿಂಹರಾಜ ಕಾಲೋನಿ, ಬೆಂಗಳೂರು-560 004

(ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರುವ ಸ್ನಾತಕೋತ್ತರ ಕೇಂದ್ರ)

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ

"ವಸುಧೇಂದ್ರರವರ ಆಯ್ದ ಸಣ್ಣಕಥೆಗಳು ಒಂದು ಅಧ್ಯಯನ"

ನೋಂದಣಿ ಸಂಖ್ಯೆ :: 50701030034

ವರ್ಷ: 2015–16

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ

ನರಸಿಂಹರಾಜ ಕಾಲೋನಿ, ಬೆಂಗಳೂರು–560 004

(ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರುವ ಸ್ನಾತಕೋತ್ತರ ಕೇಂದ್ರ)

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ, ಬೆಂಗಳೂರು ಇವರ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2015–16ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ವಸುಧೇಂದ್ರರವರ ಆಯ್ದ ಸಣ್ಣಕಥೆಗಳು ಒಂದು ಅಧ್ಯಾಯನ"** ಎಂಬ ಶೀರ್ಷಿಕೆಯ ಈ ನಿಬಂಧವನ್ನು ಎಂ.ಮನೋಜ್ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ ಸಲ್ಲಿಸುತ್ತಿದ್ದಾರೆ.

ಈ ನಿಬಂಧವು ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು, ಇವರು ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸತ್ತೇನೆ.

ಸ್ಥಳ : ಬೆಂಗಳೂರು

ದಿನಾಂಕ : 19/08/2016

ಮಾರ್ಗದರ್ಶಕರು

ಡಾ. ಗುರುಮೂರ್ತಿ.ಡಿ
ಮುಖ್ಯಸ್ಥರು, ಕನ್ನಡ ವಿಭಾಗ
ವಿಜಯ ಪದವಿ ಕಾಲೇಜು,
ಬಸವನಗುಡಿ, ಬೆಂಗಳೂರು– 560004

ಮುಖ್ಯಸ್ಥರು
ಕನ್ನಡ ವಿಭಾಗ
ವಿಜಯ ಕಾಲೇಜು
ಬಸವನಗುಡಿ, ಬೆಂಗಳೂರು - 4

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ, ಬೆಂಗಳೂರು ಇವರ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2015–16ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ವಸುಧೇಂದ್ರರವರ ಆಯ್ದ ಸಣ್ಣಕಥೆಗಳು ಒಂದು ಅಧ್ಯಯನ"** ಎಂಬ ಶೀರ್ಷಿಕೆಯ ಈ ನಿಬಂಧವನ್ನು ಡಾ. ಗುರುಮೂರ್ತಿ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧವು ನನ್ನ ಸ್ವಂತ ಬರವಣಿಗೆಯಾಗಿದ್ದು, ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಬೆಂಗಳೂರು

ದಿನಾಂಕ : 19/08/2016

ಸಂಶೋಧನಾ ವಿದ್ಯಾರ್ಥಿ

Manojelle

(ಎಂ.ಮನೋಜ್)

ಪರಿವಿಡಿ

ಅಧ್ಯಯನದ ಉದೇಶ ಮತ್ತು ಸ್ವರೂಪದ ವ್ಯಾಪ್ತಿ:

ಜಾಗತೀಕ ಸಾಹಿತ್ಯದಲ್ಲೇ ಸಣ್ಣಕಥೆಯನ್ನು ಒಂದು ಮೈನರ್ ಸಾಹಿತ್ಯ ಪ್ರಕಾರವೆಂದು ನೋಡಲಾಗುತ್ತಿದೆ. ಆದರೆ ಕನ್ನಡದಲ್ಲಿ ಸಣ್ಣಕಥೆಯ ಸ್ಥಾನ ಯಾವ ಮೇಜರ್ ಪ್ರಕಾರಕ್ಕಿಂತಲೂ ಕಡಿಮೆಯದೇನಲ್ಲ. ಯಾವುದೇ ಚಳುವಳಿ ಇಲ್ಲದ ಈ ಕಾಲದಲ್ಲಿ ಕನ್ನಡದ ಕವಿಗಳು ತಮ್ಮದೇ ಆದ ತಾತ್ವಿಕ ಭಿತ್ತಿಯೊಂದನ್ನು ರೂಪಿಸಿಕೊಂಡು ಬರೆಯುತ್ತಿದ್ದಾರೆ. ಹೀಗೆ ಚಳುವಳಿ ಇಲ್ಲದಿದ್ದರ ಶಕ್ತಿ ಮತ್ತು ದೌರ್ಬಲ್ಯ ಎರಡನ್ನೂ ಒಳಗೊಂಡು ತಮ್ಮದೇ ಆದ ಆ ಕ್ಷಣದ ಹೊಳಹುಗಳನ್ನು ಕಟ್ಟಿಕೊಡುತ್ತಾ ಒಂದು ಬಗೆಯ ಸಮ್ಮಿಶ್ರ ರೂಪಕಗಳನ್ನು ಸೃಷ್ಟಿಸುತ್ತಿದ್ದಾರೆ ಹಾಗಾಗಿ ಸಂವೇದನಾಶೀಲತೆಯ ತೀವ್ರತೆಯ ಕೊರತೆ ಈ ಹೊತ್ತಿನ ಕಾವ್ಯದಲ್ಲಿ, ಹಾಗೂ ಕಥೆಗಳಲ್ಲಿ ಕಂಡು ಬರುತ್ತಿದೆ. ಒಳ್ಳೆಯ ಕವಿತೆ, ಕಥೆ ಬರೆಯಬೇಕೆನ್ನುವ ಉತ್ಕಟತೆಗಿಂತ, ಕವಿ ಅನ್ನಿಸಿಕೊಳ್ಳೊ ದಾವಂತಕ್ಕೆ ಕಟ್ಟುಬಿದ್ದು ಬರೆಯುತ್ತಿದ್ದಾನೆ. ಈ ಮಾತು ಕನ್ನಡದ ಯುವ ಲೇಖಕರನ್ನು ಕುರಿತಾದ್ದದು. ಇದು ಪೂರ್ಣ ನಿಜವಲ್ಲದಿದ್ದರೂ ಈ ನಿಟ್ಟಿನಲ್ಲಿ ಯೋಚಿಸುವ ಅಗತ್ಯವಿದೆ. ನಾನು ಮೊಟ್ಟಮೊದಲ ಬಾರಿಗೆ ಎಂ.ಫಿಲ್ ಅಧ್ಯಯನಕ್ಕೆಂದು ವಸುಧೇಂದ್ರ ಕಥಾಸಂಕಲನದಿಂದ ಕೆಲವು ಆಯ್ದ ಕಥೆಗಳನ್ನು ಮಾತ್ರ ಆಯ್ಕೆ ಮಾಡಿಕೊಂಡಿದ್ದೇನೆ. ನಮ್ಮ ನಡುವಿನ ಅಪರೂಪದ ಕತೆಗಾರ ವಸುಧೇಂದ್ರ ತಮ್ಮ ಕುಟುಂಬದಲ್ಲಿ ಸಾಹಿತ್ಯಿಕ ವಾತವರಣವಿಲ್ಲದ್ದಿದರೂ ತಾವು ಕತೆಗಾರರಾಗಿದ್ದಕ್ಕೆ ಸ್ಫೂರ್ತಿ ತಮ್ಮ ತಾಯಿ ಎನ್ನುತ್ತಾರೆ. ಕತೆ ಹೇಳುವುದು, ಬರೆಯುವುದು ಒಂದೇ ಉದ್ದೇಶದ ವಿಭಿನ್ನ ಅಭಿವ್ಯಕ್ತಿಗಳಷ್ಟೇ ಎಂದು ಹೇಳಬಹುದು.

ಇಂದು ಬರೆಯುತ್ತಿರುವ ಹಲವಾರು ಕ್ರಿಯಾಶೀಲ ಲೇಖಕರ ಪಟ್ಟಿಯಲ್ಲಿ ವಸುಧೇಂದ್ರರ ಹೆಸರೂ ಸೇರಿಕೊಳ್ಳುತ್ತದೆ. ನನ್ನ ಮಟ್ಟಿಗೆ ಹೇಳುವುದಾದರೆ ವಸುಧೇಂದ್ರರ ಸಾಹಿತ್ಯ ಬದಲಾವಣೆಯ ಸೂಚನೆಗಳನ್ನು ಹೊಂದಿದಂತಹುದು. ಈ ಬದಲಾವಣೆಯೆಂಬುದು ಕಥನದ ಮಾದರಿಯಲ್ಲೇ ಆಗಿರಬಹುದು. ಸಾಮಾಜಿಕ ಪಲ್ಲಟಗಳ ಸಂಕೇತವೇ ಆಗಿರಬಹುದು. ಅವರಷ್ಟೇ ಅಲ್ಲದೇ ಅವರ ಜೊತೆಗಾರ ಲೇಖಕರಲ್ಲಿಯೂ ಕಾಣುವ ಸಂದಿಗ್ಧತೆಯ ನೆರಳು ಅಂದರೆ, ಕಥನದ ಮಾದರಿಗಳನ್ನು ಅನುಸರಿಸಬೇಕೆ? ಬೇಡವೇ? ಎಂಬುದು. ಹಾಗೆಯೇ ಅನುಭವಗಳನ್ನು ನಿರೂಪಿಸುವ ಧಾಟಿಯೂ ಯಾವುದಾಗಿರಬೇಕು ಇತ್ಯಾದಿ. ಈ ಸಂದಿಗ್ಧತೆಯ ಕಾರಣದಿಂದಲೇ ಉಂಟಾಗುವ ಬಿರುಕುಗಳು ಅವರ ಸಾಹಿತ್ಯವನ್ನು ವಿಘಟಿತ ತುಣುಕುಗಳ ಅನುಭವ ಕಥನವೆಂಬುದನ್ನು ನಿರೂಪಿಸುತ್ತಿದೆ ಎಂಬುದು ನನ್ನ ಅನಿಸಿಕೆ.

ವಸುಧೇಂದ್ರರ ಕಥೆ /ಪ್ರಬಂಧಗಳು ಬೆರಳು ಮಾಡಿ ತೋರಿಸುವಂತೆ ಹೊಸ ನಿರೂಪಣೆಯ ಸಾಧ್ಯತೆಗಳು ಮತ್ತು ಬದಲಾವಣೆಯ ನಿರ್ದಿಷ್ಟ ಕಾಲಘಟ್ಟದಲ್ಲಿ ನಿಂತುನೋಡುವಾಗ ಉಂಟಾಗುವ ಸಾಂಸ್ಕೃತಿಕ ಕಂದರಗಳು ಮುಖ್ಯವಾಗುತ್ತವೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ವಸುಧೇಂದ್ರರ ಸಾಹಿತ್ಯವನ್ನು ನೋಡುವ ಪ್ರಯತ್ನವನ್ನು ಮಾಡಲಾಗಿದೆ. ಇಲ್ಲಿ ಬರೆಯುವುದೇ ಒಂದು ರೀತಿಯ ಬಂಡಾಯ ಅಥವಾ ಹಳೆಯದನ್ನು ಬಿಟ್ಟು ಹೊಸ ಸಮಾಜದ ನಿರ್ಮಾಣ ಪ್ರತಿ ಬರಹಗಾರನ ಆಶಯ ಎನ್ನಬಹುದಾದ ಸಾಮಾಜಿಕ ಚರಿತ್ರೆ ನಮ್ಮದು ಯಾಕೆಂದರೆ ಅಕ್ಷರ ಕಲಿಕೆಗೆ ಅನೇಕ ನಿಯಂತ್ರಕಗಳನ್ನು ಪಡೆದಿದ್ದ ಈ ಸಂಸ್ಕೃತಿಯಲ್ಲಿ ಅಸಂಖ್ಯಾತ ಜನ-ಜನಾಂಗಗಳು ಬರಹದಿಂದ ವಂಚಿತರಾಗಿದ್ದಾರೆ. ಬರಹ ಈ ಬದುಕಿನ ಭಾಗವಾಗುವುದು ಸಾಧ್ಯವಾದದ್ದೇ ಹೊಸ ಅನುಭವಗಳ ಬಾಗಿಲು ತೆರೆದ ಅಪೂರ್ವ ಸಂದರ್ಭವಾಗಿ, ಈ ಜನ-ಜನಾಂಗಗಳ ಸಂಸ್ಕೃತಿಗೆ ಒಂದು ಚಲನಶೀಲತೆಯನ್ನು ತಂದಿದ್ದಾರೆ. ಸಂಸ್ಕೃತಿಯಲ್ಲಿರುವ ಯಾವುದೇ ಒಂದು ಅಂಗದ ಬೆಳವಣಿಗೆ ಇಡೀ ಸಂಸ್ಕೃತಿಯ ಸಮಗ್ರ ಪದ್ಧತಿಯ ಮೇಲೆ ಪರಿಣಾಮವುಂಟು ಮಾಡುತ್ತದೆ. ಯಾಕೆಂದರೆ ಇಂಥ ವಿವಿಧ ಅಂಗಗಳ ನಡುವೆ ಉಂಟಾಗುವ ಹೊಂದಾಣಿಕೆಯೇ ಸಂಸ್ಕೃತಿಯ ಸಮಗ್ರ ಪದ್ಧತಿಯನ್ನು ರೂಪಿಸುತ್ತದೆ. ಹೀಗೆ ತನ್ನ ಜೀವನದ ಅತಿಸಣ್ಣ ವಿಷಯವನ್ನೂ ಮಹತ್ವದೆಂಬಂತೆ ಅನೇಕ ರಂಜನೀಯ ವಿಶೇಷಣಗಳೊಂದಿಗೆ ತನ್ನ ತಾಯಿ ಹೇಳುತ್ತಿದ್ದ ರೀತಿ ಯಾವ/ಕತೆಗಾರನಿಗೂ ಕಡಿಮೆ ಇರಲಿಲ್ಲ ಎಂದು ಹೇಳಬಹುದು. ಇವರ ಬರವಣಿಗೆಯ ಸರಳವಾದ ಶೈಲಿಯಲ್ಲಿ ಯಾವುದೇ ಮಡಿ-ಮೈಲಿಗೆ ಏನೂ ಇರದ ಬರವಣಿಗೆ ಆದರೆ ಪ್ರತಿ ಕಥೆಯಲೂ ನಮ್ಮ ನಡುವಿನ ಸಮಾಜದ ವ್ಯಕ್ತಿಗಳ ಅಂತರಳದ ಪ್ರಶ್ನೆಯನ್ನು ಹುಡುಕಾಟ, ಓದುಗನಿಗೆ ಕೆಲವು ಬಾರಿ ಯಕ್ಷಪ್ರಶ್ನೆಯಾಗಿಯೆ ಉಳಿಯುತ್ತದೆ.

ವಸಹತುಶಾಯಿಯ ಹಾಗೂ ನಗರೀಕರಣ, ಯಂತ್ರನಾಗರೀಕತೆಯ ಪ್ರಭಾವ ಭಾರತದ ಮೇಲೆ ಮಾತ್ರವಲ್ಲದೇ ಸಾಹಿತ್ಯದ ಮೇಲೂ ಬೀರಿತು. ಇವರು ತಮ್ಮ ಕಥೆಗಳಲ್ಲಿ ಈ ಪ್ರಭಾವದ ಮಣ್ಣಿನ ಭೂಮಿಯನ್ನೇ ಬಳಸಿಕೊಂಡು ಭಾಷೆಯೆಂಬ ಗೊಬ್ಬರದ ಬಳಕೆಯಿಂದ ತಮ್ಮದೇ ಆದ ವಿಭಿನ್ನ ರೀತಿಯಲ್ಲಿ ಬಳ್ಳಾರಿ ಜಿಲ್ಲೆಯ ಜನರ ಬದುಕು, ಒಂಟಿತನ, ಕಾಣದ ಮೌಲ್ಯಗಳನ್ನು ಸಾಧಿಸಲು ವ್ಯಕ್ತಿಗಳ ಪರದಾಟ ಸ್ತ್ರೀ ಸಂವೇದನೆ ಹೀಗೆ ಹಲವು ಮಗ್ಗಲುಗಳಲ್ಲಿ ನೋಡಬಹುದಾಗಿದೆ. ಹಾಗಾಗೀ ಇವರ ಕಥಾಸಂಕಲಗಳಾದ 'ಯುಗಾದಿ, ಚೇಳು, ಹಂಪಿಎಕ್ಸ್‌ಪ್ರೆಸ್, ಮನೀಷೆ, ಕೆಲವು ಆಯ್ದ ಕಥೆಗಳನ್ನು ಈ ಮೇಲಿನ ಹಿನ್ನಲೆಯಲ್ಲಿ ಒಂದು ವಿಶ್ಲೇಷಣೆ ನನ್ನ ಅಧ್ಯಾಯನದ ವಿಷಯ ವಸ್ತುವಾಗಿ ಆಯ್ಕೆ ಮಾಡಿಕೋಂಡಿರುತ್ತೇನೆ.

ಅಧ್ಯಾಯ–1

ಕನ್ನಡ ಸಾಹಿತ್ಯದಲ್ಲಿ ಸಣ್ಣಕಥಾ ಪ್ರಕಾರ ಬೆಳೆದು ಬಂದ ದಾರಿ

1.1 ಕನ್ನಡ ಸಾಹಿತ್ಯದಲ್ಲಿ ಸಣ್ಣಕಥಾ ಪ್ರಕಾರ ಬೆಳೆದು ಬಂದ ದಾರಿ

.1"ಕಾದಂಬರಿಯ ತರುವಾಯ ಸಣ್ಣಕಥೆಯೇ ಅತ್ಯಂತ ಜನಪ್ರಿಯವಾದ ಪ್ರಕಾರ. ಕನ್ನಡದಲ್ಲಿ ಸಣ್ಣಕಥೆ ಒಂದು ವಿಶಿಷ್ಟ ರೂಪವಾಗಿ ಜನ್ಮ ತಾಳಿದುದು ಸುಮಾರು ನೂರು ವರ್ಷಗಳ ಹಿಂದೆ. ಹೊಸಗನ್ನಡದಲ್ಲಿ ಈವರೆಗೆ ಬಂದಿರುವ ಕಥೆಗಾರರ ಸಣ್ಣಕಥೆಗಳ ಸಂಖ್ಯೆಯನ್ನು ಪಟ್ಟಿಮಾಡುವುದು ಪ್ರಯಾಸದ ಕೆಲಸ. ವಾರಪತ್ರಿಕೆ, ದಿನಪತ್ರಿಕೆ, ಮಾಸಪತ್ರಿಕೆಗಳಲ್ಲಿ ಹೊಸ-ಹೊಸ ಕಥೆಗಳು ಪ್ರಕಟವಾಗುತ್ತಲೇ ಇವೆ. ಇದರ ತಂತ್ರ, ವ್ಯಾಪ್ತಿ, ಬರವಣಿಗೆಯ ರೀತಿ, ಒಟ್ಟಾರೆಯ ಪರಿಣಾಮ, ರೂಪಗಳನ್ನು ಮಾತ್ರ ಇಲ್ಲಿ ಸ್ಥೂಲವಾಗಿ ಗಮನಿಸಲಾಗಿದೆ." .1

ಕನ್ನಡ ಸಣ್ಣಕಥೆಗೆ ಪ್ರೇರಣೆ ಪಶ್ಚಿಮದಿಂದ ದೊರೆತುದು ನಿಜವಾದರೂ ಅದರ ಬೇರುಗಳು ಭಾರತೀಯ ಪರಂಪರೆಯಲ್ಲಿ ಇರುವುದರಿಂದ ಸಣ್ಣಕಥೆಯನ್ನು ಕುರಿತಾದ ಪಾಶ್ಚಿಮಾತ್ಯ ಕಲ್ಪನೆಗಳು ನಮಗೆ ಪರ್ಯಾಪ್ತವಾಗಲಾರವು. ಜಗತ್ತಿನಲ್ಲಿ ಈ ಕಥನ ಸಾಹಿತ್ಯ ಒಂದೇ ಪರಿಯಲ್ಲಿ ಬೆಳೆದು ಬಂದಿತೆಂದು ಹೇಳಲಾಗುವುದಿಲ್ಲ. ಅದರಲ್ಲೂ ಭಾರತೀಯ ಸಂಸ್ಕೃತಿಯಲ್ಲಿ ಪ್ರಾಚೀನ ಕಾಲದಿಂದಲೂ ಕಥನ ಸಾಹಿತ್ಯಕ್ಕೆ ಬೇರೆ-ಬೇರೆ ಯಾವ ಸಂಸ್ಕೃತಿಯಲ್ಲೂ ಕಾಣದ ಪ್ರಾಶಸ್ತ್ಯ ದೊರೆಕಿದೆ. ಹಾಗೂ ಇಲ್ಲಿ ದೊರೆತಿರುವ ಪ್ರಮಾಣದಲ್ಲಿ ಕಥನ ಸಾಹಿತ್ಯದ ಪ್ರಕಾರಗಳು ಬೇರೆಲ್ಲಿಯೂ ದೊರೆಯಲಾರವು. ವೇದ-ಉಪನಿಷತ್ತುಗಳಲ್ಲಿ ಬರುವ ಕತೆಗಳು, ಭಾಗವತ ಮೊದಲಾದ ಪುರಾಣಗಳು, ರಾಮಾಯಣ, ಮಹಾಭಾರತದಂತಹ, ಇತಿಹಾಸ ಕಾವ್ಯಗಳು, ರಘುವಂಶದಂತಹ ಮಹಾಕಾವ್ಯಗಳು, ಪಂಚತಂತ್ರ, ಹಿತೋಪದೇಶದಂತಹ, ನೀತಿ ಕಥೆಗಳು, ಕಥಾ ಸರಿತ್ಸಾಗರ, ಶುಕ ಸಪ್ತಶತಿಗಳಂತಹ ಪರಿಕಥೆಗಳು, ಬುದ್ಧ ಜಾತಕ ಕಥೆಗಳು, ಜೈನ ಕಥಾ ಸಾಹಿತ್ಯ, ಭಾರತದ ಎಲ್ಲ ಭಾಷೆಗಳಲ್ಲಿಯೂ ದೊರೆಯುವ ಜಾನಪದ ಕಥೆಗಳು ಹೀಗೆ ಕಥನ ಪ್ರಪಂಚದ ವಿಸ್ತಾರವಿದೆ. ಇವೆಲ್ಲ ಕಥನದ ಬೇರೆ-ಬೇರೆ ಮಾದರಿಗಳಾದ್ದರಿಂದ ಈ ಕಥನ ಪ್ರಪಂಚ ವಿಸ್ತಾರದೊಡನೆ ವೈವಿಧ್ಯವನ್ನು ಹೊಂದಿದೆ.

ಕನ್ನಡದಲ್ಲಿ ಸಣ್ಣಕಥೆಗೆ ವಿಶಿಷ್ಟ ರೂಪ ಕೊಟ್ಟವರು ಹಾಗೂ ಚಾರಿತ್ರಿಕವಾಗಿ ಮೊಟ್ಟ ಮೊದಲು ಕಥೆಗಳನ್ನು ಬರೆದವರು ಯಾರು ಎಂಬ ಬಗ್ಗೆ ಜಿಜ್ಞಾಸೆಯಿದೆ. .2 ಪಂಜೆ ಮಂಗೇಶರಾಯರು, ಕೆರೂರು ವಸುದೇವಚಾರ್ಯರು, ಎಂ.ಎನ್.ಕಾಮತ್‌ರು ಇವರೆಲ್ಲ ಆರಂಭದಲ್ಲಿ ಸಣ್ಣಕಥೆಗಳನ್ನು ಬರೆದವರು. 'ಸುವಾಸಿನಿ' ಪತ್ರಿಕೆಯಲ್ಲಿ ಪ್ರಕಟವಾದ ಪಂಜೆಯವರ ನನ್ನ ಚಿಕ್ಕ ತಾಯಿ (1900) ಕನ್ನಡ ಮೊದಲ ಸಣ್ಣಕತೆ ಎಂದು

ಭಾವಿಸಲಾಗಿದೆ. ಅನಂತರದಲ್ಲಿ ಅವರು ನನ್ನ ಚಿಕ್ಕತಂದೆ, ಭಾರತ ಶ್ರವಣ, ಕಮಲಾಪುರದ ಹೋಟೆಲಿನಲ್ಲಿ ಮೊದಲಾದ ಉತ್ತಮ ಕಥೆಗಳನ್ನು ಪ್ರಕಟಿಸಿದರು.

ಆದರೆ ಇವರಾರೂ ಅದೊಂದು ಸಾಹಿತ್ಯ ಪ್ರಕಾರವೆಂಬ ಪ್ರಜ್ಞೆಯನ್ನು ಮೂಡಿಸಿರಲಿಲ್ಲ. ಆ ಪ್ರಜ್ಞೆಯನ್ನು ಮೂಡಿಸಿ ಅದನ್ನೇ ಮಾಧ್ಯಮವನ್ನಾಗಿ ಬಳಸಿದವರಲ್ಲಿ ಶ್ರೀನಿವಾಸ (ಮಾಸ್ತಿ) ಮೊದಲಿಗರು. ಇವರು ಸಣ್ಣಕಥೆಯ ಜನಕರೆಂಬ ಹೆಸರಿಗೆ ಪಾತ್ರರಾದವರು. ಇವರ ವಸ್ತುವಿನ ಆಯ್ಕೆ, ದೃಷ್ಟಿ, ತಿಳಿಹಾಸ್ಯ, ಸರಳ ಶೈಲಿ – ಇವು ಕನ್ನಡ ಕಥಾಲೋಕಕ್ಕೆ ಮಾರ್ಗದರ್ಶಕವಾಗಿವೆ. ರಂಗಪ್ಪನ ದೀಪಾವಳಿಯಿಂದ ಹಿಡಿದು ಇವರ ಕಥೆಗಳು ಅನೇಕ ಸಂಪುಟಗಳಲ್ಲಿವೆ. ಇವರ ಎಲ್ಲ ಕಥೆಗಳಲ್ಲೂ ಸಾಮಾನ್ಯ ಘಟನೆಗಳನ್ನು ಉತ್ಪ್ರೇಕ್ಷೆಯಿಲ್ಲದೆ ಹೇಳುವ ಕಲೆ ಹಾಗೂ ಇವರ ಕಥೆಗಳಲ್ಲಿ ಆವೇಶವಿಲ್ಲ, ಚಮತ್ಕಾರವಿಲ್ಲ, ವಿಸ್ಮಯವಿಲ್ಲ, ಉದಾತ್ತಗುಣಗಳಿಂದ ಕೂಡಿದ ಆತ್ಮದ ಒಂದು ಚೇತನವನ್ನು ಕಾಣುತ್ತೇವೆ. ವಸ್ತುವಿನ ಆಯ್ಕೆಯ ಅನನ್ಯತೆಯನ್ನು ಕಾಣಬಹುದು. ಇವೆ ಮಾರ್ಗದಲ್ಲಿಯೇ ಬೆಳೆದು ಬಂದ ಕಥೆಗಾರರಲ್ಲಿ ಆನಂದರು (ಎ.ಸೀತಾರಾಂ) 'ಭವತಿ ಭಿಕ್ಷಾಂದೇಹಿಂ' ಇವರ ಮೊದಲ ಕಥೆ, ವಾರದ ಹುಡುಗ ದುಃಖಮಯ ಜೀವನ ಇಲ್ಲಿ ಚಿತ್ರಿತವಾಗಿದೆ. ಆನಂದರು ಕಥೆಗಾರರೆಂದು ಹೆಸರಾದುದು ಶೃಂಗಾರ ಹಾಗೂ ಪ್ರಣಯ ಕಥೆಗಳಿಂದ ಹೆಂಡತಿಯ ಕಾಗದ, ಪದ್ಮಪಾಕ, ರಾಧೆಯ ಕ್ಷಮೆ, ನಾವು ಹಾಗೇಯೇ – ಇವು ಪ್ರಣಯ ಜೀವನದ ನಯನಾಜೂಕುಗಳನ್ನು ಚಿತ್ರಿಸುತ್ತವೆ. 'ನಾನು ಕೊಂದ ಹುಡುಗಿ' ಇವರ ಅತ್ಯುತ್ತಮ ಕೃತಿ.

ಎ.ಆರ್.ಕೃಷ್ಣಶಾಸ್ತ್ರಿಗಳ 'ಶ್ರೀಪತಿಯ ಕಥೆಗಳು' ಸೊಗಸಾದ ಕಥಾಸಂಕಲನ ಇವರ ಕಥೆಗಳಲ್ಲಿ ಜೀವನದ ಒಂದು ದರ್ಶನ, ಮೌಲ್ಯಗಳ ಸೂಚನೆ ಅಂತರ್ಗತವಾಗಿ ಬರುತ್ತದೆ. ಎಸ್.ಜಿ.ಶಾಸ್ತ್ರಿಗಳ ಕಥೆಗಳನ್ನು ಬೇರೊಂದು ಗುಂಪಿಗೆ ಸೇರಿಸಬಹುದು. ಮಧ್ಯಮ ವರ್ಗದವರ ಜೀವನ ಹೊಳಪು ಇವರ ಕಥೆಗಳಲ್ಲಿ ಎದ್ದು ಕಾಣುತ್ತದೆ. ಕಥೆಗಳ ಸೊಗಸು, ಭಾವಗಳು, ಚೆನ್ನಾಗಿ ಪ್ರಖರವಾಗಿವೆ. ಪರಪುರುಷದಲ್ಲಿ ರಚನಾ ವೈವಿಧ್ಯವನ್ನು ಕಾಣಬಹುದು. ತುಂಟಮರಿಯಲ್ಲಿ ಮನಕರಗಿಸುವ ಚಿತ್ರವಿದೆ. ಉತ್ತರ ಕರ್ನಾಟಕದ ಭಾಗದಿಂದಲೂ ಸಣ್ಣಕಥಾ ಸಾಹಿತ್ಯ ವಿಪುಲವಾಗಿ ಬೆಳೆಯಿತು. ಆನಂದಕಂದರ ಕಥೆಗಳು ಇಂದಿಗೂ ತನ್ನ ವೈಶಿಷ್ಟ್ಯವನ್ನು ಕಾಯ್ದುಕೊಂಡಿವೆ. ಅಲ್ಲಿನ ಹಳ್ಳಿಗಳಲ್ಲಿಯ ಜೀವನವೇ ಇವರ ಕಥಾವಸ್ತು.2 ಇವರ ಕಥೆಗಳಲ್ಲಿ ಭಾವನಾಪರವಶತೆ ಮಾಯವಾಗಿ ವಾಸ್ತವ ದೃಷ್ಟಿ ಹರಿದಿದೆ. ಇಬ್ಬಣದ ದಿಬ್ಬಣದಲ್ಲಿ ಶುದ್ದ ವಾಸ್ತವತೆಯನ್ನು ಕಾಣಬಹುದು. ರಂ.ಶ್ರೀ ಮುಗಳಿಯವರ ಕನಸಿನ ಕೆಳದಿ ಸಂಕಲನದಲ್ಲಿ ಉತ್ತಮವಾದ ಕಥೆಗಳಿವೆ. ಮಧ್ಯಮ ವರ್ಗದ ಜನರ ಅನೇಕ ತೊಂದರೆ ತೊಡಕುಗಳು ಹೃದಯಂಗಮವಾಗಿ ಚಿತ್ರಿತವಾಗಿದೆ. ವಿತಂತು ವೇಶ್ಯೆಯಲ್ಲಿ ಉತ್ತಮ ಕಥೆಯ ಎಲ್ಲ ಗುಣಗಳೂ ಇವೆ. ದುರ್ದೈವಿ ಹೆಣ್ಣೊಬ್ಬಳ ಹೃದಯ ವಿದ್ರಾವಕ ಚಿತ್ರಣ. ಗೊರೂರು

ರಾಮಸ್ವಾಮಿ ಅಯ್ಯಂಗಾರ್ ಹಾಗೂ ಪಡುಕೋಣೆ ರಮಾನಂದರಾಯರ ಕಥೆಗಳನ್ನು ಪ್ರತ್ಯೇಕವಾಗಿಯೇ ನೋಡಬೇಕು. ಇವರ ಬರಹಗಳಲ್ಲಿ ಸಣ್ಣಕಥೆಯ ಅಂಶಗಳು ಕಡಿಮೆಯಿದ್ದರೂ ಕಥನ ರೀತಿ ದೃಢವಾದುದು.

ಕೊಡಗಿನ ಗೌರಮ್ಮನವರ ಹೆಸರು ಸಣ್ಣಕತೆಯೊಂದಿಗೆ ನಿಕಟ ಸಂಬಂಧವನ್ನು ಬೆಸೆದುಕೊಂಡಿದೆ. ಹೆಣ್ಣಿನ ಬಾಳಿನ ನೋವು-ನಲಿವುಗಳನ್ನು ತಮ್ಮ ಕಥೆಗಳ ಮೂಲಕ (ಕಂಬನಿ) ಇವರು ಚಿತ್ರಿಸಿದ್ದಾರೆ. ಮಲ್ಲಿಕಾ ಅವರು ನಮ್ಮ ದೇಶದ ಹೆಣ್ಣಿನ ಬದುಕಿನಲ್ಲಿನ ದಾಸ್ಯದ ಸ್ಥಿತಿಯನ್ನು ಹೆಣ್ಣಿನ ಮೇಲಿನ ದೌರ್ಜನ್ಯವನ್ನು ಆರ್ಥಿಕ ದಾರಿದ್ರ್ಯ, ಅದಕ್ಕೆ ಕಾರಣವಾಗಿರುವ ಪುರುಷ ದೌರ್ಜನ್ಯ ಮುಂತಾದವುಗಳನ್ನು ಕಮಲಾಕ್ಷಿ ಕಥಾ, ಶ್ರೀಹರ್ಷ, ಫಾಲ್ಗುಣೀಪರ್ವ, ಕಥಾಸಂಕಲಗಳಲ್ಲಿ ಬರುವ ಕಥೆಗಳಲ್ಲಿ ಪ್ರಶ್ನಿಸಿದ್ದಾರೆ. ಸನ್ನಿವೇಶಗಳ ಯಥಾರ್ಥತೆಗಳಿಂದಾಗಿ ದೇವುಡು ಕತೆಗಳು ಮಹತ್ವದಾಗಿದೆ. ಕವಿಗಳಾದ ಕುವೆಂಪು, ಬೇಂದ್ರೆ, ಪು.ತಿ.ನ. ಇವರು ಕಥೆಗಳನ್ನು ಬರೆದಿದ್ದಾರೆ. ಬೇಂದ್ರೆಯವರ ಪಾಲಾಪ್ಯ, ಹಿರಿದ ಕತ್ತಿ, ಏಕಾಕಿನಿ ಉತ್ತಮವಾದ ಕತೆಗಳಾಗಿವೆ. ಇವರ ಶೈಲಿ ಈ ಕೃತಿಗಳಲ್ಲಿ ಸಂಗೀತದ ನಾದಲೋಲುಪತೆಯನ್ನು ಪಡೆದಿದೆ. ಆದರ್ಶವಾದ ಸಮಾಜವನ್ನು ತಿದ್ದುವ ಬಯಕೆ ಕುವೆಂಪು ಅವರಲ್ಲಿದ್ದರೂ ನಿಸರ್ಗಪ್ರಿಯರಾದ ಇವರ ಕಥೆಗಳಲ್ಲಿ ಸುಧಾರಣಾ ಮನೋಭಾವ ಹಿನ್ನೆಲೆಯಲ್ಲಿ ಉಳಿದಿದೆ. ನನ್ನ ದೇವರು, ಸನ್ಯಾಸಿ ಮುಂತಾದ ಕಥೆಗಳಲ್ಲಿ ಆದರ್ಶತ್ವವನ್ನು ಕಂಡಿದೆ. ಧನ್ವಂತರಿಯ ಚಿಕಿತ್ಸೆ ಎಂಬ ಕಥೆಯಲ್ಲಿ ಸಾಮಾಜಿಕ ಕಾಂತ್ರಿಯ ಒಲವನ್ನು ಕಾಣಬಹುದು. ಮೀನಾಕ್ಷಿಯ ಮನೆ ಮೇಷ್ಟ್ರು ಕಥೆಯಲ್ಲಿ ಕಥೆಗಾರರನ್ನು ಆಕರ್ಷಿಸುವ ವಸ್ತುವಿನ ವಿಶಿಷ್ಟ ನಿರೂಪಣೆಯನ್ನು ಕಾಣಬಹುದು. ಇಲ್ಲಿನ ವಸ್ತು ಚಿರಪರಿಚಿತ ಭಗ್ನ ಪ್ರಣಯ ಸುಂದರವಾಗಿ ನಿರೂಪಿತವಾಗಿದೆ. ಪು.ತಿ.ನ. ಅವರ ಧ್ವಜರಕ್ಷಣೆಯಲ್ಲಿ ಕೆಲವು ಸತ್ವಪೂರ್ಣ ಕಥೆಗಳಿವೆ. ಧ್ವಜರಕ್ಷಣೆಯ ವಸ್ತು ರಾಜಕೀಯಕ್ಕೆ ಸಂಬಂಧಿಸಿದ್ದರೂ ಆದರ್ಶಪ್ರಾಯ ಯುವಕನ ಅಂತರಂಗದ ತುಮುಲವನ್ನು ಚಿತ್ರಿಸುತ್ತದೆ.

1920-40ರ ನಂತರ ಅವಧಿಯ ಸಣ್ಣಕಥಾ ಸಾಹಿತ್ಯ ನಿರೀಕ್ಷಿಸಿದಷ್ಟು ಬೆಳೆಯಲಿಲ್ಲ. ಹೊಸಗನ್ನಡದ ಓದುಗರು ಕಾದಂಬರಿಗೆ ಮನತೆತ್ತರು. ಕಥೆಗಳಿಗಾಗಿಯೇ ಮೀಸಲಾದ ಪತ್ರಿಕೆಗಳು ಕ್ರಮೇಣ ನಿಂತುಹೋದವು. ಮೊದಲಿಗೆ ಮಿಂಚಿನಬಳ್ಳಿ ಪ್ರಕಾಶನ ಸಂಸ್ಥೆ ಕನ್ನಡದಲ್ಲಿ ಸತ್ವಶಾಲಿಯಾದ ಕಥೆಗಳು ಹೊರಬರಲು ಕಾರಣವಾಯಿತು. ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಿಂದ ಆಗ ಹೊರಡುತ್ತಿದ್ದ ಪ್ರಬುದ್ಧ ಕರ್ಣಾಟಕ ಹಾಗೂ ಅ.ನ. ಕೃಷ್ಣರಾಯರ ಕಥಾಂಜಲಿ ಅನೇಕ ತರುಣ ಕಥೆಗಾರರನ್ನು ಬೆಳಕಿಗೆ ತಂದಿತು. ಧಾರವಾಡದ ಜಯಂತಿ, ಜಯಕರ್ನಾಟಕ ವಿಪುಲವಾಗಿ ಸಣ್ಣಕಥೆಗಳನ್ನು ಪ್ರಕಟಿಸಿದುವು.

ಆಧುನಿಕ ಕನ್ನಡ ಸಾಹಿತ್ಯ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಹೀಗೆ ಅವಸ್ಥಾಂತರಗಳನ್ನು ಕಂಡಂತೆ ಕನ್ನಡ ಸಣ್ಣ ಕಥಾ ಪ್ರಪಂಚವೂ ಇದಕ್ಕೆ ಹೊಂದಿಕೊಂಡಂತೆ ವಿಸ್ತರಿಸುತ್ತಾ ಹೋಯಿತು. ಆಯಾ ಕಾಲದ ಸ್ಪಂದನಕ್ಕೆ ಜೀವಂತವಾಗಿ ಉಳಿಯಿತು. ಕನ್ನಡದ ಸಾಹಿತ್ಯದಲ್ಲಿ ಪ್ರಗತಿಶೀಲತೆ ಚಳುವಳಿ ಸಣ್ಣಕಥೆಯಿಂದಲೇ ಆರಂಭವಾಯಿತು ಎನ್ನಬೇಕು. 1936–42ರವರೆಗೆ ನಡೆದ ರಾಜಕೀಯ ಆಂದೋಲನಗಳು, ಪತ್ರಿಕೆಗಳಲ್ಲಿ ನಡೆಯುತ್ತಿದ್ದ ಪ್ರಗತಿಶೀಲತೆಯ ಪ್ರಚಾರ, ರಷ್ಯಾದ ಹಾಗೂ ಹಿಂದಿ ಕಥೆಗಳ ಅನುವಾದ ಇವೆಲ್ಲವೂಗಳ ಪ್ರಭಾವಗಳಿಂದ ಕನ್ನಡ ಸಾಹಿತ್ಯದಲ್ಲಿ ಹಲವು ಬದಲಾವಣೆಗಳುಂಟಾಗಿ ಬರಹಗಾರರು ಎಲ್ಲ ವಿಧದಲ್ಲೂ ಸತ್ವಯುತ ಸಾಹಿತ್ಯ ರಚನೆ ಮಾಡಿದರೆನ್ನುವ ಮಾತನ್ನು ಮರೆಯಲಾಗದು.

ಅ.ನ.ಕೃ. ಅವರ ನೇತೃತ್ವದಲ್ಲಿ ತ.ರಾ.ಸು., ನಿರಂಜನ, ಬಸವರಾಜು ಕಟ್ಟೀಮನಿ, ಚದುರಂಗ ಮುಂತಾದ ಲೇಖಕರು ತಮ್ಮ ಕಥೆಗಳಲ್ಲಿ ಪ್ರಗತಿಶೀಲತೆಯನ್ನು ತಂದರು. ದಲಿತ ವರ್ಗಗಳ ಬಗ್ಗೆ ಸಹಾನುಭೂತಿ, ಶೋಷಣೆಯ ವಿರುದ್ದ ಆಕ್ರೋಶ, ಸಾಮಾಜಿಕ ವೈಷಮ್ಯಗಳ ಬಗ್ಗೆ ಅಸಮಾಧಾನ ಇವರ ಪ್ರಮುಖ ದೃಷ್ಟಿಕೋನಗಳಾದವು. ನವೋದಯಯದ ಲೇಖಕರನ್ನು ಪ್ರತಿಗಾಮಿಗಳೆಂದು ಕರೆದು ಸಮಾಜದ ಡಂಭಾಚಾರವನ್ನು ಎತ್ತಿ ತೋರಿಸಿದರು. ವಾಸ್ತವತಾವಾದ ಇವರ ಕೈಯಲ್ಲಿ ಅತೀರೇಕಕ್ಕೆ ಹೋಯಿತು. ಕ್ರಮೇಣ ವೈಚಾರಿಕತೆ ಪ್ರಗತಿಶೀಲರ ಮನೋಧರ್ಮದಲ್ಲೇ ಸರಿಯಾಗಿ ಆಗಿದರೆ ಸ್ತಬ್ಧವಾಯಿತು. ಪರಸ್ಪರ ಕೊಳು–ಕೊಡುಗೆಗಳು ಹೆಚ್ಚಿದುದರಿಂದ ಪ್ರಗತಿಶೀಲರಿಗೂ ನವೋದಯ ಲೇಖಕರಿಗೂ ವಿಶೇಷ ಅಂತರವೇನೂ ಕಾಣಬರುವುದಿಲ್ಲ. ಅ.ನ.ಕೃ. ಅವರ ಪ್ರಗತಿಶೀಲತೆಯ ವಾದ ಉಳಿದವರ ಮೇಲೆ ಹೆಚ್ಚು ಪರಿಣಾಮದ ಪ್ರಭಾವದಿಂದ ಇವರ ಪ್ರಭಾವ 2–3 ಪೀಳಿಗೆಯ ಲೇಖಕರ ಮೇಲೆ ಬಿದ್ದಿದೆ. ತರಾಸು, ನಿರಂಜನ, ಚದುರಂಗ, ಬಸವರಾಜು ಕಟ್ಟೀಮನಿ, ಅರ್ಚಕ ವೆಂಕಟೇಶ, ವೆಂಕಟರಾಜ ಪಾನಸೆ – ಮೊದಲಾದವರು ಸಾಹಿತ್ಯವನ್ನು ಸಮಾಜದ ಕನ್ನಡಿಯಲ್ಲಿ ನೋಡಲು ಯತ್ನಿಸಿದರು. ಉದಾ: 0–0–0, ಕೊನೆಯ ಗಿರಾಕಿ (ಇದು ಹೆಣ್ಣನ್ನು ಭೋಗದ ವಸ್ತುವಾಗಿ ಅಸಹ್ಯವಾಗಿ, ಕ್ರೂರವಾಗಿ ಬಳಸಲೆತ್ನಿಸುವ ಜಗತ್ತಿನ ರೌದ್ರ ವಾಸ್ತವಿ ಕತೆ ಕಾಣಬಹುದು) ಗಿರಿಜಾ ಕಂಡ ಸಿನಿಮಾ, ಬೂಟ್ ಪಾಲಿಷ್ ಹೀಗೆ ಬಾಳಿನ ಪ್ರತಿ ಎಳೆಯನ್ನು ಬಿಡಿಸಿ ತೋರಿಸುವ ಶಕ್ತಿ ಇವರ ಕಥೆಗಳಲ್ಲಿ ಕಂಡು ಬರುತ್ತದೆ. ಅನೇಕ ಲೇಖಕಿಯರು ಉತ್ತಮ ಕಥೆಗಳನ್ನು ರಚಿಸಿದ್ದಾರೆ. ತ್ರಿವೇಣಿ, ವಾಣಿ, ಅನುಪಮ ನಿರಂಜನ್, ಆರ್ಯಾಂಬಾ ಪಟ್ಟಾಭಿ, ಗೀತಾ ಕುಲಕರ್ಣಿ, ವೀಣಾ ಶಾಂತೇಶ್ವರ, ಜಯಲಕ್ಷ್ಮಿ ಶ್ರೀನಿವಾಸನ್, ಎಂ.ಕೆ. ಜಯಲಕ್ಷ್ಮಿ, ಶಾಂತಾದೇವಿ ಕಣವಿ, ರಾಜಲಕ್ಷ್ಮಿ ಎನ್. ರಾವ್, ವೈದೇಹಿ, ಎಂ.ಎನ್. ವೇದಾ ಸಾರಾ ಅಬೂಬಕರ್, ಗೀತಾ ನಾಗಭೂಷಣ್, ಬಾನುಮುಷ್ತಕ್, ಹೇಮಾ ಪಟ್ಟಣಶೆಟ್ಟಿ ಮುಂತಾದವರು ಸೊಗಸಾದ ಕಥೆಗಳನ್ನು ರಚಿಸಿದ್ದಾರೆ.

ಸ್ವಾತಂತ್ರ್ಯ ಬಂದ ಕೆಲವೇ ವರ್ಷಗಳಲ್ಲಿ ಕನ್ನಡದಲ್ಲಿ ನವ್ಯ ಪಂಥವೊಂದು ಉದಯವಾಯಿತು. ನವೋದಯ, ಪ್ರಗತಿಶೀಲ ಪಂಥಕ್ಕೆ ಇವರು ಸ್ವಲ್ಪ ಭಿನ್ನರಾದರು. ಮನಸ್ಸಿನ ಬೆನ್ನು ಹತ್ತಿ ಅದರ ಸಂಕೀರ್ಣತೆಗಳನ್ನು ಬಿಚ್ಚಿ ತೋರಿಸುವ ಸಾಹಸ ಮಾಡಿದರು. ಇದರಿಂದಾಗಿ ಹಲವು ಮನೋವೈಜ್ಞಾನಿಕ ಕಥೆಗಳು ಹುಟ್ಟಿ ಬಂದವು. ಕಥಾ ಪ್ರಪಂಚದಲ್ಲೂ ನವ್ಯತೆ ಮೂಡಿತು. ಈ ದಿಶೆಯಲ್ಲಿ ರಾಮಚಂದ್ರ ಶರ್ಮರು ಸಂಗಮ, ಏಳನೇ ಜೀವ, ಸೆರಗಿನ ಕೆಂಡ ಇಂಥ ಕೆಲವು ಮಾದರಿಯ ನವ್ಯಕಥೆಗಳನ್ನು ಬರೆದರು. ನಂತರ ಯು.ಆರ್. ಅನಂತಮೂರ್ತಿ, ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ಪಿ. ಲಂಕೇಶ್, ಕೆ. ಸದಾಶಿವ, ಟಿ.ಜಿ. ರಾಘವ, ಗಿರಡ್ಡಿ ಗೋವಿಂದರಾಜ, ಪೂರ್ಣಚಂದ್ರ ತೇಜಸ್ವಿ ಮುಂತಾದವರು ಹಲವಾರು ಉತ್ತಮ ನವ್ಯ ಕಥೆಗಳನ್ನು ನೀಡಿದ್ದಾರೆ.

80ರ ದಶಕದಲ್ಲಿ ಕನ್ನಡ ಕಥಾದಿಗಂತ ವಿಸ್ತರಿಸಿದ ಕಾಲವಾಗಿದ್ದು, ಈ ಅವಧಿಯಲ್ಲಿ ಅನೇಕ ಉತ್ತಮ ಕಥೆಗಾರರು ಸೃಷ್ಟಿಯಾದರು. ನವ್ಯ ಕಥೆಯ ಮುಂದುವರಿದ ಕೊಂಡಿಯಾಗಿ ಅದಕ್ಕಿಂತ ಭಿನ್ನವಾಗಿ ಸಣ್ಣಕಥೆ ರೂಪತಾಳತೊಡಗಿತು. ಇಂದಿನ ಹೆಚ್ಚು ಕಥೆಗಳು ಶೃಂಗಾರ ಹಾಗೂ ಪ್ರಣಯ ಜೀವನಕ್ಕೆ ಸಂಬಂಧಿಸಿದವು. ವಸ್ತುವಿನ ಆಯ್ಕೆಯಲ್ಲಿ ಸಮತೂಕವಿಲ್ಲ ಎಂಬ ಮಾತು ಇದೆ. ಅದರೊಂದಿಗೆ ಅನೇಕ ಕಥೆಗಳು ಅನುವಾದವಾಗಿ ಬರುತ್ತಿರುವುದು ಒಂದು ಸಂತೋಷದಾಯಕ ಸಂಗತಿ.

ನವ್ಯ ಕಾಲದ ಕನ್ನಡ ಸಣ್ಣಕತೆಗಳ ವಸ್ತು, ಶೈಲಿ, ತಂತ್ರದಲ್ಲೂ ಬದಲಾವಣೆ ಮೂಡಿಸಿತು. ಭಾಷೆಯ ಬಳಕೆಯ ದೃಷ್ಟಿಯಿಂದ ಈ ಬರಹಗಾರರು ಆಗಾಧವಾದ ಕೆಲಸ ಮಾಡಿದ್ದಾರೆ. ಅನುಭಾವವನ್ನು ಅರಗಿಸಿಕೊಂಡು ಅದರಿಂದ ದೂರ ನಿಂತು ಒಂದು ರೀತಿಯಾ ತಾದಾತ್ಮ್ಯವನ್ನು ಸಾಧಿಸಿ, ವಿಮರ್ಶಕ ಪ್ರಜ್ಞೆಯನ್ನು ಇಟ್ಟು ಕೊಂಡಿದ್ದರು. ನವೋದಯ ಪ್ರಗತಿಶಿಲ ಕಥೆಗಾರರಿಗಿದ್ದಂತೆ ಇವರಿಗೆ ಯವುದೇ ನಿಶ್ಚಿತ ಮೌಲ್ಯಗಳಿರಲಿಲ್ಲ. ಜೀವನದ ಸಾಮಾಜಿಕ ಸಮಸ್ಯೆಗಳಿಗಿಂದ ವೈಯಕ್ತಿಕ ಸಮಸ್ಯೆಗಳೇ ಹೆಚ್ಚು ಎಂದು ಹೇಳಬಹುದು. ವ್ಯಕ್ತಿಯ ಮನಸ್ಸಿನ ಹೊಯ್ದಾಟ, ತೂಯ್ದಾಟಗಳ ರಹಸ್ಯಗಳನ್ನು ಸಂಕೋಚವಿಲ್ಲದೆ ಚಿತ್ರಿಸಿದರು. ಇಂಥಹ ಸೂಕ್ಷ್ಮ ಹಾಗೂ ಸಂಕೀರ್ಣ ಉದ್ದೇಶಗಳಿಗೆ ತೆರೆದುಕೊಂಡು ಬರವಣಿಗೆ ಒಮ್ಮೊಮ್ಮೆ ಜಟಿಲತೆಯನ್ನು ಪಡೆದುಕೊಂಡಿತು. ಕೆಲವು ಬಾರಿ ನವ್ಯ ಕಥೆಗಾರರು ತಮ್ಮ ಅನುಭವ ಕ್ಷೇತ್ರಗಳನ್ನು ಸಂಕುಚಿತಗೊಳಿಸುತ್ತಾ ಕಾಮಕ್ಕೆ ಅವಾಸ್ತವ ಮಹತ್ವ ಕೊಟ್ಟು ಅಶ್ಲೀಲವಾಗಿ ಬರೆಯುವರೆಂದು, ಇವರ ಕಥೆಗಳು ಅರ್ಥವಾಗುವುದಿಲ್ಲ ಎಂದು ಟೀಕೆಗಳು ಸಹ ಬಂದವು.

ದೇವನೂರು ಮಹಾದೇವ ಅವರ ದ್ಯಾವನೂರು ಕಥಾ ಸಂಕಲನದ ಪ್ರಕಟಣೆಯ ಅನಂತರ ದಲಿತ ಸಂವೇದನೆಗಳಿಗೆ ಒಂದು ಹೊಸ ದನಿಯೊಂದು ಕನ್ನಡದ ಸಣ್ಣ ಕಥಾವಾಹಿನಿಗೆ ಸೇರ್ಪಡೆಯಾಯಿತು. ಕನ್ನಡ ಸಾಹಿತ್ಯದಲ್ಲಿ ದಲಿತ ಪ್ರಜ್ಞೆಯ ತುಳಿತಕ್ಕೊಳಗಾದವರ, ಅದುವರೆಗೂ ಅನಾವರಣವಾಗದಿದ್ದ ಬದುಕು, ಅದರ ಸಂಕೀರ್ಣತೆಗಳು ಕತೆಯಲ್ಲಿ ಮೈಪಡೆಯ ತೊಡಗಿದವು.

ಹೊಸ ಸಂವೇದನೆಗಳು, ಹೊಸ ಅನುಭವಗಳು, ವಿಶಿಷ್ಟವಾದ ದೇಸಿಯ ಅಭಿವ್ಯಕ್ತಿ, ಆಡುಭಾಷೆಯ ಬಳಕೆಯಿಂದಾಗಿ ಸಣ್ಣಕಥೆ ಹೊಸ ಆಯಾಮವನ್ನು ಪಡೆದುಕೊಂಡಿತು. ಕುಂ. ವೀರಭದ್ರಪ್ಪ, ಮೊಗಳ್ಳಿ ಗಣೇಶ್, ಅಮರೇಶ ನುಗಡೋಣಿ ಮೊದಲಾದವರು ಉತ್ತಮ ಕಥೆಗಳನ್ನು ನೀಡಿದರು. ದಲಿತ ಸಂವೇದನೆಯ ಇನ್ನೊಂದು ಮುಖವಾಗಿ ಬಂಡಾಯದ ಸಂವೇದನೆ ನಂತರ ಮುಸ್ಲಿಂ ಸಂವೇದನೆ, ಮಹಿಳಾ ಸಂವೇದನೆಗಳು ಅದರ ಕವಲುಗಳಂತೆ ಟಿಸಿಲೊಡೆದು ಬೆಳೆದು ಬಂದವು. ಹೀಗೆ ಕನ್ನಡ ಸಣ್ಣಕಥಾ ಪ್ರಪಂಚ ಹೊಸ ಸಂವೇದನೆಗಳನ್ನು ಆಯಾ ಕಾಲ ಸಂದರ್ಭದ ಯುಗ ಧರ್ಮವನ್ನು ಒಳಗೊಳ್ಳುತ್ತಾ ಶ್ರೀಮಂತವಾಗುತ್ತಾ ಸಾಗಿದೆ.

ಅಡಿಟಿಪ್ಪಣಿ:

1. ಸಾಹಿತ್ಯ ಕೃತಿ : ನರಹಳ್ಳಿ ಸುಬ್ರಮಣ್ಯ, ಸಾಹಿತ್ಯ ನಡೆದು ಬಂದ ಹಾದಿ – ಪುಟ ಸಂಖ್ಯೆ–11
2. ಕಲ್ಪಿತ ವಾಸ್ತವ ಕಥೆಗಳು : ಡಾ. ಗಿರಡ್ಡಿ ಗೋವಿಂದರಾಜ, ಸಾಹಿತ್ಯ ಪ್ರಕಾಶನ 2009 ಪುಟ ಸಂಖ್ಯೆ–14,17
3. ಕನ್ನಡ ಸಾಹಿತ್ಯ ವಾಹಿನಿ: ತುಷಾರ ಸಂಚಿಕೆ ಮುದ್ರಣ–1993

ಅಧ್ಯಾಯ–2

ಬಳ್ಳಾರಿ ಜಿಲ್ಲೆಯ ಸಾಹಿತ್ಯ ಮತ್ತು ವಸುಧೇಂದ್ರ

ಬಳ್ಳಾರಿ ಜಿಲ್ಲೆಯ ಸಾಹಿತ್ಯ ಮತ್ತು ವಸುಧೇಂದ್ರ :

ಬಳ್ಳಾರಿ ಜಿಲ್ಲೆ ವಡ್ಡಾರಾಧನೆಯ ಶಿವಕೋಟ್ಯಚಾರ್ಯರಿಂದ ಇಂದಿನ ದೈತ್ಯ ಕಥೆಗಾರ ಕುಂ.ವಿ ವರೆಗೂ ಸಾಹಿತ್ಯವಲಯ ಸೂಕ್ಷ್ಮತೆಯನ್ನು ಕಾಪಾಡಿಕೊಂಡು ಬಂದಿಂದೆ. ಕಾಲ-ಕಾಲಕ್ಕೆ ಬಳ್ಳಾರಿ ಜಿಲ್ಲೆಯಲ್ಲಿ ಹೊಸ ಬರಹಗಾರರು ತಮ್ಮದೇ ಆದ ಸೃಜನಶೀಲ ಹುಡುಕಾಟ ಮಾಡಿಕೊಂಡು ಬಂದವರೆ ಆಗಿದ್ದಾರೆ. ಸದ್ಯಕ್ಕೆ ಬಳ್ಳಾರಿ ಜಿಲ್ಲೆಯನ್ನು ಪ್ರತಿನಿಧಿಸಿ ಬರೆವ ಬರಹಗಾರಾರ ಸಂಖ್ಯೆ ದೊಡ್ಡದಿದೆ. ಅಂತಹ ಕೆಲವು ಬರಹಗಾರರನ್ನು ಪರಿಚಯಿಸುವ ಹಾಗೂ ನನ್ನ ಓದಿಗೆ ಸಿಕ್ಕ ಸಾಹಿತ್ಯದ ಹೊಸ ತಲೆಮಾರಿನ ಒಂದು ಚಿತ್ರವನ್ನು ಕಟ್ಟಿಕೊಡಲು ಇಲ್ಲಿ ಪ್ರಯತ್ನಿಸಿದ್ದೇನೆ.

ಕನ್ನಡದಲ್ಲಿ ಹೊಸ ತಲೆಮಾರು:

ಕನ್ನಡದಲ್ಲಿ ಹೊಸ ತಲೆಮಾರು ತುಂಬಾ ಕ್ರಿಯಾಶೀಲವಾಗಿದೆ. ಮುಖ್ಯವಾಗಿ ಕನ್ನಡದ ಹೊಸ ತಲೆಮಾರನ್ನು ಗುರುತಿಸುವ ಮತ್ತು ಚರ್ಚಿಸುವ ವಾತಾವರಣ ಉಂಟಾಗಿದೆ. ಅದು ತುಂಬಾ ಗಂಭೀರವವಾದ ವಿಷಯವೂ ಹೌದು. ಪ್ರೊ. ರಹಮತ್ ತರೀಕೆರೆ ಅವರು "ಹೊಸ ತಲೆಮಾರಿನ ತಲ್ಲಣ" ಎನ್ನುವ ಒಂದು ಪುಸ್ತಕವನ್ನೇ ಸಂಪಾದಿಸಿದರು. ಅಲ್ಲಿ ಕನ್ನಡದ ಬಹುಮುಖ್ಯ ಯುವ ಬರಹಗಾರರು ತಮ್ಮ ಬರಹದ ತಲ್ಲಣಗಳನ್ನು ಹಂಚಿಕೊಂಡಿದ್ದಾರೆ. ತರೀಕೆರೆಯವರು ಯುವ ಬರಹಗಾರರನ್ನು ಕುರಿತು ಹೇಳುವ ಮಾತು ಹೀಗಿದೆ. "ಹೆಚ್ಚಿನವರು ಪ್ರಾಮಾಣಿಕವಾಗಿ ಗಂಭೀರವಾಗಿ ಜೀವನೋತ್ಸಾಹ, ಶ್ರದ್ಧೆ ಮತ್ತು ಸೂಕ್ಷ್ಮತೆಗಳಿಂದ ಬರೆಯುತ್ತಿದ್ದಾರೆ. ತಮ್ಮ ಸುತ್ತಣದ ವಿದ್ಯಮಾನಗಳ ಜತೆ ಕುತೂಹಲ, ಅವನ್ನು ಪರಿಶೀಲಿಸುವ ಎಚ್ಚರ, ಅವುಗಳ ಒಳಗಿನ ವೈರುಧ್ಯಗಳನ್ನು ಗಮನಿಸುವ ಸೂಕ್ಷ್ಮತೆ ಹಾಗೂ ಅವನ್ನು ಮೌಲ್ಯಮಾಪನಕ್ಕೆ ಒಳಪಡಿಸುವ ನಿಷ್ಠುರತೆ ಅವರಲ್ಲಿದೆ. ಕೆಲವರು ಈಗಷ್ಟೇ ಮೊದಲ ಬರಹದಲ್ಲೇ ಪ್ರತಿಭೆ ಪ್ರಕಟಿಸಿರುವವರು. ಕೆಲವರು ತಮ್ಮ ಅಸ್ಮಿತೆಯನ್ನು ಹುಡುಕೊಳ್ಳುತ್ತಿರುವರು. ಈ ಲೇಖಕರು ಪ್ರಕಟಿಸುತ್ತಿರುವ ಲೋಕದೃಷ್ಟಿ ಒಂದೇ ಅಲ್ಲ ಹಲವು ಆದರೆ ಹೆಚ್ಚಿನದೆಲ್ಲವೂ ಕನ್ನಡದ ಮಾನವತಾವಾದಿ ಪರಂಪರೆಯ ಚೌಕಟ್ಟಿನೊಳಗಿದೆ. ಅತ್ಯುತ್ತಮ ಮನುಷ್ಯನ ಹುಡುಕಾಟ ಮತ್ತು ಅತ್ಯುತ್ತಮ ಸಮಾಜದ ಸೃಷ್ಟಿಯ ಹಂಬಲ ಇವರ ಬರಹದ ಆಶಯವಾಗಿದೆ.

ತಲ್ಲಣ, ಅಸ್ಪಷ್ಟತೆ, ಹುಡುಕಾಟ, ಉತ್ಸಾಹ, ಉಮೇದುಗಳೆಲ್ಲವೂ ಸೇರಿದಂತಹ ಒಂದು ಸಂಕೀರ್ಣ ಸನ್ನಿವೇಶದಲ್ಲಿ ಬರೆಯುತ್ತಿರುವ ಹೊಸತಲೆಮಾರಿನ ಲೇಖಕರ ಬರಹದ ಮೂಲಕ, ಕನ್ನಡ ಸಾಹಿತ್ಯವು 21ನೇ ಶತಮಾನದ ಈ ಮೊದಲ ಹೆಜ್ಜೆಯ, ಹೊಸ ಹೊರಳಿಕೆಯನ್ನು ಪಡೆಯಲು ಯತ್ನಿಸುತ್ತಿದೆ. ಈ ತಲೆಮಾರಿನ ಬರಹ ದೊಡ್ಡ ಸಾಧನೆ ಮಾಡುವ ಸಾಧ್ಯತೆಗಳನ್ನಂತೂ ಪ್ರಕಟಿಸಿದೆ. ನಿಸ್ಸಂಶಯವಾಗಿ ಹೊಸತಾದುದು ಹುಟ್ಟುವ ಸಾಧ್ಯತೆಯಿರುವುದು ಈ ತಲೆಮಾರಿನಿಂದಲೇ ಹೀಗೆ ಸಾಹಿತ್ಯದ ಹೊಸ ತಲೆಮಾರನ್ನು ಗುರುತಿಸಲು ಸಾಧ್ಯವಿದೆ" ಎನ್ನುತ್ತಾರೆ. ಈ ಮಾತುಗಳು ಕನ್ನಡ ಸಾಹಿತ್ಯದ ಹೊಸ ತಲೆಮಾರಿನ ಒಂದು ಲಕ್ಷಣವನ್ನು ಹೇಳುತ್ತಿವೆ. ಅಂತೆಯೇ ನಟರಾಜ ಹುಳಿಯಾರ ಅವರ ಸಂಪಾದಕತ್ವದಲ್ಲಿ ಬಂದ ಕನ್ನಡ ಟೈಮ್ಸ್ ಪತ್ರಿಕೆಯಲ್ಲಿಯೂ "ಹೊಸ ತಲೆಮಾರು" ಎಂದು ವಿಶೇಷ ಸಂಚಿಕೆಯನ್ನು ರೂಪಿಸಿ ಇಂತದ್ದೇ ಮಾತುಗಳನ್ನು ಆಡಿದ್ದರು.

1."ಕರ್ನಾಟಕದಲ್ಲಿ ಹೊಸ ತಲೆಮಾರೊಂದು ತುಂಬಾ ಶಕ್ತಿಯುತವಾಗಿ ಬರೆಯುತ್ತಾರೆ. ಪೀರ್ ಭಾಷಾ, ವಿಕ್ರಮ ವಿಸಾಜಿ, ಚಿದಾನಂದಸಾಲಿ, ಕಲಿಗಣನಾಥ ಗುಡದೂರು, ತುರುವಿಹಾಳ ಚಂದ್ರು, ತಾರಿಣಿ ಶುಭದಾಯಿನಿ, ಕೆ. ಅಕ್ಷತಾ, ಅರವಿಂದ ಚೊಕ್ಕಾಡಿ, ಶಶಿ ಸಂಪಳ್ಳಿ, ವಿನಯಾ ವಕ್ಕುಂದ, ಎಂ.ಡಿ. ಒಕ್ಕುಂದ, ಸುನಂದಾ ಪ್ರಕಾಶ ಕಡಮೆ, ಚ. ಹ. ರಘುನಾಥ, ಸರ್ಜಾಶಂಕರ ಹರಳೀಮಠ, ರಮೇಶ್ ಅರೋಲಿ, ನಾಗಣ್ಣ ಕಿಲಾರಿ, ದೇವು ಪತ್ತಾರ, ಚಿದಾನಂದ ಕಮ್ಮಾರ್, ವಸುದೇಂದ್ರ, ಬಿ. ಶ್ರೀನಿವಾಸ, ಮಾಧವಿ ಭಂಡಾರಿ, ಶ್ರೀದೇವಿ ಕೆರೆಮನೆ, ಶಿವರಾಜ ಬೆಟ್ಟದೂರು, ಗಣೇಶ್ ಹೊಸಮನೆ, ಸಂದೀಪ ನಾಯಕ, ನಾಗಮಂಗಲ ಕೃಷ್ಣಮೂರ್ತಿ, ಟೀನಾ ಶಶಿಕಾಂತ, ವಿಕಾಸ ನೇಗಿಲೋಣಿ, ಕೆ. ಕರಿಸ್ವಾಮಿ, ಆರಿಫ್ ರಾಜಾ, ವೀರಣ್ಣ ಮಡಿವಾಳರ, ರೂಪಾ ಹಾಸನ, ಜ್ಯೋತಿ ಗುರುಪ್ರಸಾದ್, ಅನಸೂಯ ಕಾಂಬಳೆ ಹೀಗೆ ಹೇಳುತ್ತಾ ಹೋದರೆ ದೊಡ್ಡ ಪಡೆಯೇ ಇದೆ. ಇಲ್ಲಿ ಕಾವ್ಯ, ಕಥೆ, ಪ್ರಬಂಧ ಮುಂತಾದ ಪ್ರಕಾರಗಳಲ್ಲಿ ಒಂದು ಪ್ರಯೋಗ ನಡೆಯುತ್ತಿದೆ.".1

ಈ ಪ್ರಬಂಧದಲ್ಲಿ ಬಳ್ಳಾರಿ ಜಿಲ್ಲೆಯ ಯುವ ಬರಹಗಾರರನ್ನಿಟ್ಟುಕೊಂಡು ಟಿಪ್ಪಣಿ ಮಾಡಿದ್ದೇನೆ. ಯಾಕೆಂದರೆ, ಎಷ್ಟೋ ಬಾರಿ ರಾಜ್ಯದ ಯುವ ಬರಹಗಾರರು ಎಂದಾಗ ಕೆಲವರು ಮಾತ್ರ ಪರಿಗಣಿಸಲ್ಪಟ್ಟು ಬಹುತೇಕರು ಕಡೆಗಣಿಸಲ್ಪಡುತ್ತಾರೆ. ಹಾಗಾಗಿ ಬಳ್ಳಾರಿ ಜಿಲ್ಲೆಯ ಯುವ ಬರಹಗಾರರು ಇಂದು ಏನನ್ನು ಬರೆಯುತ್ತಿದ್ದಾರೆ? ಈ ಬರಹದ ಮೂಲಕ ನಾಡಿನ ಹೊಸ

ತಲೆಮಾರಿಗೆ ಏನನ್ನು ಸೇರಿಸುತ್ತಿದ್ದಾರೆ? ಎನ್ನುವುದನ್ನು ಮುಖ್ಯವಾಗಿಟ್ಟುಕೊಂಡಿದ್ದೇನೆ. ಇಲ್ಲಿ ಸಾಧ್ಯವಾದಷ್ಟು ಬಳ್ಳಾರಿ ಜಿಲ್ಲೆಯ ಬರಹಗಾರರನ್ನು ಗಮನಹರಿಸಲು ಪ್ರಯತ್ನಿಸಿದ್ದೇನೆ.

1."ಬಳ್ಳಾರಿ ಜಿಲ್ಲೆಯಲ್ಲಿ ಕವಿಗಳ ಸಂಖ್ಯೆ ಹೆಚ್ಚಿದೆ. ಬಿ. ಪೀರ್ ಭಾಷಾ, ಮಲ್ಲಿಕಾರ್ಜುನಗೌಡ ತೂಲಹಳ್ಳಿ, ವೆಂಕಟಗಿರಿ ದಳವಾಯಿ, ಸಿದ್ಧರಾಮ ಹಿರೇಮಠ, ಕಂಪ್ಲಿ ಶಿವಕುಮಾರ್, ಸಿದ್ಧು ದೇವರಮನಿ, ಅಕ್ಕಿ ಬಸವೇಶ, ರಾಮಪ್ಪ ಮಾದರ, ಅಂಬಿಗರ ಮಂಜುನಾಥ, ಎಸ್. ಮಂಜುರ್ನಾ, ಕೆ. ಶಿವಲಿಂಗಪ್ಪ ಹಂದಿಹಾಳು, ಅಜಯ್ ಬಣಕಾರ್, ನಾಗರಾಜ ಬಣಕಾರ್, ಸೈಫ್ ಜಾನ್ಸೆ ಕೊಟ್ಟೂರು, ಸುಧಾ ಚಿದಾನಂದಗೌಡ, ಸುಜಾತ ಅಕ್ಕಿ, ಟಿ.ಎಂ. ಉಷಾರಾಣಿ, ಛಾಯಾ ಭಗವತಿ, ಪದ್ಮಾ ಜಾಗಟಗೇರಿ, ಗಿರಿಜಾ ಬೂದೂರು, ನಾಗಮಂಜುಳಾ ಜೈನ್ ಮುಂತಾದವರನ್ನು ಪ್ರಮುಖವಾಗಿ ಗುರುತಿಸಬಹುದು. 1.

1. ಬಿ. ಪೀರ್ ಭಾಷಾ ಬಳ್ಳಾರಿ ಜಿಲ್ಲೆಯನ್ನು ಪ್ರತಿನಿಧಿಸುವ ತುಂಬಾ ಶಕ್ತಿಯುತವಾದ ಕವಿ. ಸಮಾಜವಾದಿ ಹೋರಾಟಗಾರರ ಸಂದರ್ಶನದ ಎರಡು ಸಂಪುಟಗಳನ್ನು ಪ್ರಕಟಿಸುವ ಮೂಲಕ ಸಂಶೋಧನೆ ವಿಮರ್ಶೆಯಲ್ಲಿಯೂ ಗಂಭೀರ ಕೆಲಸ ಮಾಡುತ್ತಿದ್ದಾರೆ. ಜೀವಬಂತು ಹಾದಿಗೆ, ಜಾಲಿ ಹೂಗಳ ನಡುವೆ, ದೇವರುಗಳೆಲ್ಲಾ ಮನುಷ್ಯರಾದ ದಿನ, ಈಚೆಗೆ ಅಕ್ಕ ಸೀತಾ ನೀನು ನನ್ನಂತೆ ಶಂಕಿತ ಎನ್ನುವ ಸಂಕಲನಗಳ ಮೂಲಕ ಕನ್ನಡ ಕಾವ್ಯಕ್ಕೆ ಬೇರೆಯದೇ ಆದ ಶಕ್ತಿಯನ್ನು ತುಂಬಿದರು. ಅಕ್ಕ ಸೀತಾ ನಿನ್ನಂತೆ ನಾನೂ ಶಂಕಿತ ಎನ್ನುವ ಪದ್ಯದಲ್ಲಿ ಹೌದು ಅಕ್ಕ ಸೀತಾ ನಿನ್ನಂತೆ ನಾನೂ ಶಂಕಿತ ನಿನ್ನ ಪಾತಿವ್ರತ್ಯದಂತೆಯೇ ನನ್ನ ದೇಶಭಕ್ತಿ ಸಾಬೀತುಪಡಿಸುವುದಾದರೂ ಹೇಗೆ ಹೇಳು ಶೀಲ? ಯಾವ ಸಾಕ್ಷಿಗಳನ್ನು ತರುವುದು ಎಲ್ಲಿಂದ, ನಮ್ಮ ಮನೆಯಲ್ಲಿಯೇ ನಾವು ನಿರಾಶ್ರಿತರು, ತುಂಬಿದ ನಾಡೊಳಗೆ ಪರಕೀಯರು, ನಮ್ಮ ನೆತ್ತರಿನಿಂದ ಅವರು ನಮ್ಮ ನೆಮ್ಮದಿಯನ್ನು ಕಿತ್ತುಕೊಂಡಿದ್ದಾರೆ, ಅಪವಾದದ ಅಸ್ತ್ರಗಳಿಂದ ಹೃದಯ ಗಾಯಗೊಳಿಸಿದ್ದಾರೆ. 1.

ಅಕ್ಕ ಸೀತಾ, ನಾವು ಈ ನೆಲದ ಮಕ್ಕಳು, ಪರೀಕ್ಷೆಯೆಂಬ ಪಿತೂರಿಯ, ಬೆಂಕಿಯಲ್ಲೇಕೆ ನಾವು ಬೇಯಬೇಕು, ಬೆನ್ನಿಗೆ ಬಾಣ ಬಿಡು ಕ್ರೌರ್ಯವೇಕೆ ನಮ್ಮನ್ನಾಳಬೇಕು ಎಂದು ಸೂಕ್ಷ್ಮವಾಗಿ ಪ್ರಶ್ನಿಸುತ್ತಾರೆ. ಈ ಸಂಕಲನದ ಅಷ್ಟೂ ಕವಿತೆಗಳು ನಮ್ಮ ಕಾಲದ ವರ್ತಮಾನದ ಬಿಕ್ಕಟ್ಟುಗಳನ್ನು ಭಿನ್ನವಾಗಿ ತೋರಿಸುತ್ತಿವೆ.

ಮಲ್ಲಿಕಾರ್ಜುನ ಗೌಡ ತೂಲಹಳ್ಳಿ ನಮ್ಮ ನಡುವಿನ ಒಳ್ಳೆಯ ಕವಿ. ಅವರ ಶರೀಫನ ಬೊಗಸೆ ಮೂಲಕ ಹೊಸ ನುಡಿಗಟ್ಟುಗಳ ಶೋಧದಲ್ಲಿ ತೊಡಗಿದ್ದಾರೆ. ಕಣ್ಣಕದವಿಕ್ಕಿಕೊಂಡು ಅಳುತ್ತಿರುವ ಹೃದಯಗಳೇ, ಬನ್ನಿ ನಿಮ್ಮೆಲ್ಲರಿಗೆ ಶರೀಫನ ಬೊಗಸೆಯಾಗುವೆ. ಪ್ರೇಮ ವಂಚನೆಗೊಂಡು, ಬೇಯುತ್ತಿರುವ ಮನಸ್ಸುಗಳೇ, ಬನ್ನಿ ನಿಮ್ಮೆಲ್ಲರಿಗೆ ಅಕ್ಕನ ದಾರಿ ತೋರುವೆ ಎಂದು ಬರೆಯುತ್ತಾರೆ.

ವೆಂಕಟಗಿರಿದಳವಾಯಿ ವಿಮರ್ಶೆ ಸಂಶೋಧನೆಯಲ್ಲಿ ಗುರುತಿಸಿಕೊಂಡಿದ್ದಾರೆ. ಅವರ "ಅಪಮಾನಗಳಿಗಿಲ್ಲ ವಿರಾಮ" ಎನ್ನುವ ಮೊದಲ ಕಾವ್ಯ ಸಂಕಲನ ಒಂದು ಉತ್ತಮ ಪ್ರಯತ್ನವಾಗಿದೆ. "ಸ್ಥಾವರಕ್ಕಳಿವುಂಟು" ಎನ್ನುವ ಕವನದಲ್ಲಿ ಸ್ಮರಣೆಯ ನಾಲಿಗೆಗೆ ನೆಟ್ಟ ಮುಳ್ಳನು, ಕಣ್ಣಿಂದ ಕೀಳಬೇಕಿದೆ ಹೂವಿನಂತೆ, ಅಲ್ಲಮನ ಬಯಲು, ಕನಕನ ಕೋಣನ ಭಕ್ತಿ, ಶರೀಫನ ಸತೀತನಕ್ಕೆ ತೊಡಕಾಗುವ, ಮುನ್ನ ಸುಡಬೇಕಿದೆ ಈ ಮುಳ್ಳನು ಬೇರು ಸಮೇತ. ಹೀಗೆ ಸ್ಥಾಪಿನ ನಂಬಿಕೆಗಳನ್ನು ಒಡೆಯುವ ಪ್ರಯತ್ನ ಮಾಡುತ್ತಾರೆ.

ಕೂಡ್ಲಿಗಿಯ ಸಿದ್ಧರಾಮ ಹಿರೇಮಠ ಅವರು ಅವರ "ಮೂವತ್ತೈದು ಗಜಲುಗಳು 45 ಹೈಕುಗಳು" ಎನ್ನುವ ಸಂಕಲನದಲ್ಲಿ ಗಜಲ್ ಪ್ರಕಾರವನ್ನು ಭಿನ್ನವಾಗಿ ದುಡಿಸಿಕೊಂಡಿದ್ದಾರೆ. ಬಂದೂಕಿನ ಬಾಯಲ್ಲಿ ಗುಂಡು ಸಿಡಿದರೂ ಗುಬ್ಬಿ ಗೂಡು ಕಟ್ಟಿದರೂ, ಬೆನ್ನು ಬಾಗಿಸಿ ಬೂಟು ಒರೆಸುವುದು ಇನ್ನೂ ತಪ್ಪಿಲ್ಲ ಈ ಕನಸುಗಳೇ ಹೀಗೆ, ಪ್ರತಿ ಮನೆಯಲ್ಲೂ ಕಂಬನಿದುಂಬಿದ ಕಣ್ಣುಗಳಿವೆ, ಕಣ್ಣೊರೆಸುವ ಬಗೆಯ ತಿಳಿಯದಿರುವೆ ಹೇಗೆ ತೊಡೆಯಲಿ ಸಾಕಿ, ಎನ್ನುತ್ತಾ ಗಝಲ್ ಪ್ರಕಾರಕ್ಕೆ ತಮ್ಮದೇ ಆದ ವಿಶಿಷ್ಟತೆಯನ್ನು ಸೇರಿಸಿದ್ದಾರೆ.

ಸಿರುಗುಪ್ಪ ಭಾಗದ ವಿ. ಹರಿನಾಥ ಬಾಬು ಕಾವ್ಯವನ್ನು ನಿರಂತರವಾಗಿ ಬರೆಯುತ್ತಿದ್ದಾರೆ. ಅವರ ಬೆಳಕ ಹೆಜ್ಜೆಯನರಸಿ ಸಂಕಲನ ಕಾವ್ಯಾಸಕ್ತರ ಗಮನ ಸೆಳೆದಿದೆ. ಬರೆಯಲಾರೆ ಮಗು ಕ್ಷಮಿಸು, ನಿನ್ನ ನಗು ಅಳುವಿಗಿಂತ ದೊಡ್ಡ ಕವಿತೆ ಎಂದು ವಿನಯದಿಂದಲೇ ಕೇಳುವ ಕವಿ ಸೂರ್ಯ ನಿನ್ನದೆಂಥ ಬಿಸಿಲು, ನಮ್ಮ ಹೊಟ್ಟೆಯ ಹಸಿವಿನ ಮುಂದೆ? ಮೋಡಗಳೇ ನಿಮ್ಮದೆಂಥ ಮಳೆಯೋ, ನಮ್ಮ ಬಡತನದ ಕಣ್ಣೀರ ಮುಂದೆ? ಎಂದು ತಣ್ಣಗೆ ಪ್ರಶ್ನಿಸುತ್ತಲೇ ಸಮಾಜದ ನಿಜ ಬದುಕನ್ನು ಕಾಣಿಸುತ್ತಾರೆ.

1.“ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ಬಂಡ್ರಿ ಸಮೀಪದ ಜೋಗಿನಕಲ್ಲು ಗ್ರಾಮದ ಬಿ. ಶ್ರೀನಿವಾಸ ಅವರು ‘ಉರಿವ ಒಲೆಯ ಮುಂದೆ’ ಸಂಕಲನ ಪ್ರಕಟಿಸಿ ಕಾವ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಸಾಲು ಸಾಲು ಪರದೆಗಳ ಹಿಂದೆ, ಅದೆಷ್ಟು ಸವಾಲುಗಳಿವೆ? ಜಾಹೀರಾತಿನ ಪರದೆಯ ಹಿಂದ, ಅದೆಷ್ಟು ಜೋಪಡಿಗಳಿವೆ? ಇಂತಹ ಸೂಕ್ಷ್ಮ ಸೆಳಕುಗಳು ಅವರ ಕಾವ್ಯದಲ್ಲಿದೆ. ಬಿ. ಶ್ರೀನಿವಾಸ್ ಕಥೆಗಾರರೂ ಕೂಡ. ಅವರ ಕಾಣದಾಯಿತೋ ಊರುಕೇರಿ ಸಂಕಲನದಲ್ಲಿ ಗಂಭೀರ ಕಥೆಗಳಿವೆ.

ಅಗ್ನಿ ಕಿರೀಟ ಕವನ ಸಂಕಲನದ ಮೂಲಕ ಗಮನ ಸೆಳೆದ ಶಿವಕುಮಾರ ಕಂಪ್ಲಿ ಅವರ ಒಂದು ಪದ್ಯ

ಸಾಲಿಗೆ ಸೊಲ್ಲಾಗಿ
ಬೆಳಕಾದರೂನೂ ಬೆತ್ತಲೆ ಬಯಸುವ ಕಣ್ಣಿರುವಾಗ
ಗುಡಿಯಾದರೇನಂತೆ ರವಿಕೆ
ಸರಿಯಾಗಿದೆಯೇ ಇಣುಕಬೇಕು
ಹೆಣ್ಣ ಬಣ್ಣಗಳೆಲ್ಲಾ ಜಾಗತೀಕರಣಕೆ ಸರಕು
ಚರಿತೆ ಸರಿದರೂ ಮತ್ತೆ ಬಡಜನರೇ ಬೇಕು ಬಲಿಗೆ॥

ಕಾಡು, ನೆಲ, ನೀರೆಲ್ಲಾ ಯಂತ್ರಗಳ ಕೈಸೇರಿ
ದುಡಿದು ತಿನ್ನುವ ಜನರು ಗುಳೆ ಎದ್ದು ಹೋದಾಗ
ಒಂಟಿ ಬಾಣತಿ ಕೂಸು ನಾಯಿ ಬಾಯಿಯ ತುತ್ತು
ಜೀವ ಹನಿಹನಿಯಾಗಿ ಕೆರೆ ಹಳ್ಳ ನಡುಗಿತ್ತು॥

ಡಾ. ಜಾಜಿ ದೇವೇಂದ್ರಪ್ಪ ಬಾನಬೆಡಗು ಎಂಬ ಕಾವ್ಯ ಸಂಕಲನವನ್ನೂ, ವಿಜಲುಗಳು ಎಂಬ ಗಝಲ್ ಮಾದರಿಯ ಕವನ ಸಂಕಲನವನ್ನೂ ತಂದಿದ್ದಾರೆ. ದೇವೇಂದ್ರಪ್ಪ ಸಂಶೋಧನೆ ಮತ್ತು ಅನುವಾದದಲ್ಲಿ ತಮ್ಮ ಸೃಜನಶೀಲ ಹುಡುಕಾಟವನ್ನು ಮುಂದುವರೆಸಿದ್ದಾರೆ. ವ್ಯಕ್ತಿನಾಮಗಳ ಬಗ್ಗೆ ಒಂದು ಗಂಭೀರ ಸಂಶೋಧನೆ ಮಾಡಿದ್ದಾರೆ.

ಕಂಚ ಐಲಯ್ಯ ಅವರ ಪುಸ್ತಕವೊಂದನ್ನು ಅನುವಾದಿಸುತ್ತಿದ್ದಾರೆ. “ಬರುವ ನಾಳೆಗಳಿಗೆ ರಾತ್ರಿಗಳೇ ಇರುವುದಿಲ್ಲ” ಸಂಕಲನದ ಮೂಲಕ ತನ್ನದೇ ಆದ ಒಂದು ವಿಶಿಷ್ಟ ಲಯನ್ನು ಕಂಡುಕೊಂಡವರು. ಸಿದ್ದು ದೇವರಮನಿ ಒಂದು ಅಂಗಡಿಯಲ್ಲಿ ಕೂತು ಈ ಜಗತ್ತನ್ನು ಗ್ರಹಿಸಿದ

ಒಬ್ಬರ ಗ್ರಹಿಕೆಗಳಾಗಿ ನನಗೆ ಸಿದ್ದು ಅವರ ಕಾವ್ಯ ಕಾಣುತ್ತದೆ. ಬರದ ಭ್ರಮೆಗಳು ಎನ್ನುವ ಕವನದ ಸಾಲುಗಳು ಹೀಗಿವೆ.

"ಅಲ್ಲೊಲ್ಲೋ........ ಓಡುವ ಮೋಡ ನಿಂತು ಮಿಂಚಿದಂತೆ
ಅವಮಾನದ ಹಸಿವು ಮತ್ತೊಮ್ಮೆ ಕುಂತು ಹೊಂಚಿದಂತೆ
ಗುಡಿ ಮೆಟ್ಟಿಲ ಹೆಣ್ಣು ಜೀವಕ್ಕೆ ಮರೆಯಾದ ಗಂಡನಲ್ಲದಿದ್ದರೂ
ಹನಿ ಮಳೆಯಾದರೂ ಬಂದೀತೆಂಬ ನಿರೀಕ್ಷೆ!
ಕೂಳು ಕಾದ ಕಂಗಳ ದ್ರವ ಜೀವಗಳೆಲ್ಲವು
ಕಾಣದ ಕತ್ತಲೆಯ ಮುಕ್ತಿಗೆ ಸೋಲಬೇಕೆಂದು ಸಾಲು ನಿಂತಿವೆ!
ಹರಿದ ತಾಳಿ ಒಡತಿಯ ಕಣ್ಣೀಗಿಎ, ಬಿಸಿಲಲ್ಲದೆ
ಜೀವನದ ಯಾವ ಜಾದುವೂ ಜರ್ರಾ ಸಹಾಯಕ್ಕೆ ಬಂದ ನೆನಪಿಲ್ಲ!"

ಹೀಗೆ ಕಾವ್ಯದ ಯಾವ ಪಟ್ಟುಗಳನ್ನು ಕಲಿಯದೆ ಸಹಜವಾಗಿ ಕಾವ್ಯ ಬರೆದು ಗಮನ ಸೆಳೆದಿದ್ದಾರೆ,.

ಹಗರಿಬೊಮ್ಮನಹಳ್ಳಿಯ ಭಾಗದಲ್ಲೊಂದು ಯುವ ಬರಹಗಾರರ ಪಡೆಯೇ ಸಿದ್ಧಗೊಳ್ಳುತ್ತಿದೆ. ಅಕ್ಕಿ ಬಸವೇಶ ಈ ಭಾಗದ ಗಮನ ಸೆಳೆಯುವಂತಹ ಕವಿ 'ಕೊಲ್ಲಬಹುದು ಯಾರಾದರೂ ಕವಿಯನ್ನು, ಆದರೆ ಸಾಯಬಲ್ಲವೆ ಅವನ ಕವಿತೆಗಳು' ಎಂದು ಕೇಳುವ ಬಸವೇಶ 'ನಿಜದ ಬೆಳಗು' ಸಂಕಲನದ ಮೂಲಕ ಕಾವ್ಯಾಸಕ್ತರ ಗಮನ ಸೆಳೆದಿದ್ದಾರೆ. ಬಸವೇಶ ಮೂಲತಃ ಪ್ರೇಮಕವಿ. ಆತನ ಕಾವ್ಯಗಳಲ್ಲಿ ಪ್ರೀತಿಯ ನವಿರಾದ ಸೆಳಕುಗಳು ಕಾಣುತ್ತವೆ." 1.

ಅಂಬಿಗರ ಮಂಜುನಾಥ ಈಚೆಗೆ ಕೆಂಪು, ದೀಪ ಎನ್ನುವ ಸಂಕಲನವನ್ನು ತಂದಿದ್ದಾರೆ. ವಿಳಾಸವಿಲ್ಲದವರು, ನನ್ನ ತಂಗಿಯನ್ನು ಕೊಂದರು ಎನ್ನುವ ಸಂಕಲನ ಗ್ರಾಮೀಣ ಪ್ರದೇಶದಲ್ಲಿ ಈಗಲೂ ಜೀವಂತವಾಗಿರುವ ಗೌಡಿಕೆಯ ದಬ್ಬಾಳಿಕೆಯನ್ನು ಹಳ್ಳಿಗಳಲ್ಲಿ ದಲಿತರ ಅಸಹಾಯಕತೆಯನ್ನು ತೋರಿಸುತ್ತಿದೆ.

ಕೊಟ್ಟೂರಿನ ಬಣಕಾರ ಸಹೋದರರಾದ ನಾಗರಾಜ, ಅಜಯ ಕಾವ್ಯ ಕಟ್ಟುವ ಕೆಲಸದಲ್ಲಿ ನಿರತರಾದವರು. ನಾಗರಾಜ 'ಕನಸು ಕರಗುವ ಸಮಯ' ಸಂಕಲನದಲ್ಲಿ ಭರವಸೆ ಮೂಡಿಸುತ್ತಾರೆ. ಪ್ರೀತಿ ಪದ್ಯಗಳನ್ನು ನವಿರಾಗಿ ಬರೆವ ನಾಗರಾಜ ಅವರು, ಆದರ್ಶ, ನೆನಪು, ಮಾತು ಎಲ್ಲವೂ ಬರಿ ನೆಪ ಮಾತ್ರ ಅವಳ ಮೌನ ಪ್ರೀತಿಯ ಮುಂದೆ ಎನ್ನುತ್ತಾರೆ. ರೋಡ್ ಅಗಲೀಕರಣದ

ಭರಾಟೆಯಲ್ಲಿ ಕಾವ್ಯದಲ್ಲಿ ರಸ್ತೆ ಅಗಲೀಕರಣದ ಅಮಾನವೀಯ ಮುಖವೊಂದನ್ನು ಚೆನ್ನಾಗಿ ಹಿಡಿದಿದ್ದಾರೆ ಹಾಗೂ ಹೊಸ ಹೊಳವುಗಳನ್ನು ಕಾಣಿಸಿದ್ದಾರೆ.

ಕವಿಯತ್ರಿಯರು:

ಬಳ್ಳಾರಿ ಜಿಲ್ಲೆಯ ಮಹಿಳಾ ಕಾವ್ಯಕ್ಕೆ ಒಂದು ಪರಂಪರೆ ಇದೆ. ಬೆಳಗೆರೆ ಪಾರ್ವತಮ್ಮ, ಹಗರಿಬೊಮ್ಮನಹಳ್ಳಿಯ ಪದ್ಮಾ ವಿಠಲ, ಎಂ.ಡಿ. ವೆಂಕಮ್ಮ, ಸುಶೀಲ ಶಿರೂರು, ಸುಧಾ ಚಿದಾನಂದ ಗೌಡ, ಡಾ. ಟಿ.ಎಂ. ಉಷಾರಾಣಿ, ಛಾಯಾ ಭಗವತಿ, ಪದ್ಮಾ ಜಾಗಟಗೇರಿ, ಡಾ. ಗಿರಿಜಾ ಬೂದೂರ್ (ವಸಂತ ಬಂದನು ಕವನ ಸಂಕಲನ), ನಾಗಮಂಜುಳ ಜೈನ್, ನಿರ್ಮಲಾ ಶಿವನಗುತ್ತಿ ಮುಂತಾದವರನ್ನು ಹೆಸರಿಸಬಹುದು.

ಸುಜಾತ ಅಕ್ಕಿ ಕವಿಯತ್ರಿಯಾಗಿ, ಸಂಶೋಧಕಿಯಾಗಿ ಕೆಲಸ ಮಾಡಿದ್ದಾರೆ. ಬಳ್ಳಾರಿ ಜಿಲ್ಲೆಯ ರಂಗ ನಟಿಯರ ಬಗ್ಗೆ ಅವರ ಸಂಶೋಧನೆ ಒಳ್ಳೆಯ ಮಾಹಿತಿ ಸಂಗ್ರಹವಾಗಿದೆ. ಸಾರತಿ ಎನ್ನು ಭಿನ್ನ ಕೃತಿಯನ್ನು ರಚಿಸಿದ್ದಾರೆ. ಈಚೆಗೆ ಚಾಮ ಚೆಲುವೆ ಎನ್ನುವ ನಾಟಕ ಬರೆದು ಗಮನ ಸೆಳೆದಿದ್ದಾರೆ. ಇದನ್ನು ಮಂಡ್ಯ ರಮೇಶ್ ಅವರ ತಂಡ ನಾಟಕ ಮಾಡಿಯೂ ಗಮನಸೆಳೆದಿದೆ.

ಸುಧಾ ಅವರ ಷೇಕ್ಸ್‌ಪಿಯರ್ ಸೃಷ್ಟಿಸಿದ ಅನನ್ಯಯರು ಒಂದು ಉತ್ತಮ ಸಂಶೋಧನೆ. ಷೇಕ್ಸ್‌ಪಿಯರ್ ಅವರು ಸೃಷ್ಟಿಸಿದ ಮಹಿಳಾ ಪಾತ್ರಗಳನ್ನು ತುಂಬಾ ಭಿನ್ನವಾಗಿ ನೋಡಿದ್ದಾರೆ. ಈ ಕಾರಣಕ್ಕೆ ಸುಧಾ ಅವರು ಕತೆಗಾರ್ತಿ, ಕವಯಿತ್ರಿ ಮಾತ್ರವಲ್ಲದೆ ಸಂಶೋಧಕಿಯೂ ಕೂಡ. ಈಚೆಗೆ ಸುಧಾ ಅವರ ಮೂರನೇ ಕಥಾ ಸಂಕಲನ 'ಕನ್ನಡಿಯನ್ನು ನೋಡಲಾರೆ' ಪ್ರಕಟಿಸಿದ್ದಾರೆ. ಈ ಕೃತಿಗೆ ಅಮ್ಮ ಪ್ರಶಸ್ತಿಯೂ ಲಭಿಸಿದೆ.

ಸೂಕ್ಷ್ಮವಾಗಿ ಬರವಣಿಗೆ ಬರೆಯುತ್ತಾ ಗುರುತಿಸಿಕೊಂಡ ಉಷಾರಾಣಿಯು ಸಂಶೋಧಕಿಯೂ ಕೂಡ. ಮಹಿಳಾ ಸಾಹಿತ್ಯದ ಅಭಿವ್ಯಕ್ತಿ ನೆಲೆಗಳು ಕುರಿತಂತೆ ತುಂಬಾ ಗಂಭೀರವಾಗಿ ಸಂಶೋಧನೆಯನ್ನು ಮಾಡಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ ಮಕ್ಕಳಿಗೆ ಕಲಿಸುವಿಕೆಯಲ್ಲಿ ತಮ್ಮ ಸೃಜನಶೀಲತೆಯನ್ನು ಬಳಸಿಕೊಳ್ಳುತ್ತಿದ್ದಾರೆ.

ಕಥೆಗಾರರು:

ಕೊಟ್ಟೂರಿನ ವಿಶ್ವನಾಥ ಅಡಿಗ ಅವರು 'ಕೇಳದೆ ನಿಮಗೀಗ' ಎನ್ನುವ ಕಥಾ ಸಂಕಲನವನ್ನು ಪ್ರಕಟಿಸಿ ಗಮನ ಸೆಳೆದಿದ್ದಾರೆ. ಅವರ ಮತ್ತೊಂದು ಸಂಕಲನವೂ ಪ್ರಕಟವಾಗಿದೆ. ಕೊಟ್ಟೂರಿನ ಬೆಣ್ಣೆ ಪ್ರಭು, ಪದ್ಮಾ ಜಾಗಟಗೆರೆ ಬಿಡಿ ಬಿಡಿಯಾಗಿ ಕಥೆಗಳನ್ನು ಬರೆದು ಪ್ರಕಟಿಸುತ್ತಿದ್ದಾರೆ.

ಹಗರಿ ದಂಡೆ ಕಥಾ ಸಂಕಲನದ ಮೂಲಕ ಕಥಾ ಜಗತ್ತನ್ನು ಪ್ರವೇಶಿಸಿದ ವೆಂಕಟೇಶ್ ಉಪ್ಪಾರ ಅವರು ಗಮನ ಸೆಳೆದಿದ್ದಾರೆ. ಹಲವು ವಿಮರ್ಶಕರಿಂದ ಮೆಚ್ಚುಗೆಗೆ ಪಾತ್ರವಾಗಿದ್ದಾರೆ. ಅವರ ಅವಶೇಷ ಎನ್ನುವ ಎರಡನೇ ಕಥಾಸಂಕಲನವೂ ಪ್ರಕಟವಾಗಿದೆ. ಸದ್ಯಕ್ಕೆ ನಾವಿಲ್ಲದ ನದಿ ಎನ್ನುವ ಕಾದಂಬರಿ ಬರೆವ ತಯಾರಿಯಲ್ಲಿದ್ದಾರೆ. ಇವರ ಗದ್ಯದಲ್ಲಿ ಬಳ್ಳಾರಿ ಭಾಗದ ಹಗರಿ ದಂಡೆಯ ಭಾಷೆಯ ವೈಶಿಷ್ಟ್ಯತೆ ಇದೆ.

ಸಂಪಿಗೆ ನಾಗರಾಜ ಅವರ ಕಥಾ ಸಂಕಲನ 'ಖಾಲ ಕಣ್ಣಿನ ನಾನು' ಮೂಲಕ ಕಥೆಗಾರರಾಗಿ ಭರವಸೆ ಹುಟ್ಟಿಸಿದ್ದಾರೆ. ನಾಗರಾಜ ಅವರು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಇಪ್ಪತ್ತನೆ ಶತಮಾನದ ಕೊನೆಯ ದಶಕಗಳಲ್ಲಿ ಸಾಂಸ್ಕೃತಿಕ ಪ್ರಶ್ನೆ' (ಸಣ್ಣ ಕಥೆಗಳನ್ನು ಆಧರಿಸಿ) ಸಂಶೋಧನಾ ಪ್ರಬಂಧಕ್ಕೆ ಪಿಹೆಚ್.ಡಿ. ಪದವಿಯನ್ನೂ ಪಡೆದಿದ್ದಾರೆ. ಸಿರಿಗೇರಿಯ ಅನ್ನಪೂರ್ಣ ಪ್ರಕಾಶನ ಪುಸ್ತಕಗಳನ್ನು ಪ್ರಕಟಿಸುತ್ತಾ, ಸಾಹಿತ್ಯ ಕಾರ್ಯಕ್ರಮಗಳನ್ನು ರೂಪಿಸುತ್ತಾ ಸಾಹಿತ್ಯ ಚಟುವಟಿಕೆಗಳನ್ನು ಕ್ರಿಯಾಶೀಲವಾಗಿಡುವ ಪ್ರಯತ್ನ ನಡೆದಿದೆ.

ಮೂಲತಃ ಸಂಡೂರಿನವರಾದ ವಸುದೇಂದ್ರ ಅವರು ತಮ್ಮದೆ ಆದ ಕಥಾ ಲಯವೊಂದನ್ನು ಕಂಡುಕೊಂಡಿದ್ದಾರೆ. ಅವರ ಯುಗಾದಿ, ಚೇಳು ಹಂಪಿ ಎಕ್ಸ್‌ಪ್ರೆಸ್ ಮುಂತಾದ ಕಥಾ ಸಂಕಲನಗಳು ವಿಶಿಷ್ಟವಾಗಿದೆ. ವಸುದೇಂದ್ರ ಅವರು ಪ್ರಬಂಧ ಸಾಹಿತ್ಯದಲ್ಲಿಯೂ ಪ್ರಯೋಗ ಮಾಡಿದ್ದಾರೆ. ನಮ್ಮಮ್ಮ ಅಂದ್ರೆ ನಂಗಿಷ್ಟ ಪ್ರಬಂಧ ಸಂಕಲನ ತುಂಬಾ ಭಿನ್ನವಾಗಿದೆ. ಅವರ ಒಟ್ಟು ಬರಹ ಲಹರಿರೂಪದ್ದಾಗಿರುವುದೇ ಹೆಚ್ಚು. ಅವರ ಛಂದ ಪ್ರಕಾಶನದಿಂದ ಸ್ಪರ್ಧೆ ಏರ್ಪಡಿಸುವುದು, ಪುಸ್ತಕ ಪ್ರಕಟಿಸುವುದೂ ಇದೆ.

ಸಂಡೂರು ಭಾಗದ ಕಲಾವಿದ ಸೃಜನ್ ಕೂಡ ಬಳ್ಳಾರಿ ಜಿಲ್ಲೆಯ ಸಾಹಿತ್ಯ ವಲಯದಲ್ಲಿ ಗಮನಿಸಬೇಕಾದ ಹೆಸರು. ತಮ್ಮ ಕಲಾಕೃತಿಗಳ ಮೂಲಕ ನಾಡಿನ ಹಿರಿ ಕಿರಿಯ ಸಾಹಿತಿಗಳ ಕಾವ್ಯ, ಕಥೆ, ಪುಸ್ತಕಗಳಿಗೆ ತಮ್ಮದೇ ಆದ ವಿಶಿಷ್ಟ ಕಲೆಯ ಮೂಲಕ ಜೀವಂತಿಕೆಯನ್ನು ತಂದಿದ್ದಾರೆ.

ಈಚೆಗೆ ತೆಲುಗಿನಿಂದ ಅನುವಾದಗಳನ್ನು ಮಾಡುತ್ತಿದ್ದಾರೆ. ಭಾರತದ ಪ್ರಸಿದ್ಧ ಚಲನಚಿತ್ರ ನಿರ್ದೇಶಕರಾದ ರಾಮ್‌ಗೋಪಾಲ್ ವರ್ಮಾ ಅವರ ಆತ್ಮ ಕಥನವನ್ನು ಕನ್ನಡಕ್ಕೆ ತರುತ್ತಿದ್ದಾರೆ.

ಮೂಲತಃ ಬಳ್ಳಾರಿ ಜಿಲ್ಲೆಯವರಾದ ಅನೇಕ ಬರಹಗಾರರು ಬದುಕಿನ ಅನಿವಾರ್ಯತೆಗೆ ಬೇರೆ ಬೇರೆಡೆ ನೆಲೆಸಿರುವುದೂ ಇದೆ. ಕನ್ನಡದ ಬಹುದೊಡ್ಡ ಇತಿಹಾಸಕಾರರಾದ ಷ.ಶೆಟ್ಟರ್ ಅವರೂ ಕುಡ ಹಗರಿಬೊಮ್ಮನಹಳ್ಳಿ ತಾಲೂಕಿನವರು. ಹೀಗೆ ಅನೇಕರನ್ನು ಗುರುತಿಸಬಹುದು. ಇಲ್ಲಿ ಮುಖ್ಯವಾಗಿ ಯುವ ಬರಹಗಾರರನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ. ನನ್ನ ಗಮನಕ್ಕೆ ಬರದ ಬರಹಗಾರರ ಹೆಸರು ಬಿಟ್ಟುಹೋಗಿರುವ ಸಾಧ್ಯತೆಯೂ ಇದೆ.

ವಸುಧೇಂದ್ರರವರ ಬದುಕು ಹಾಗೂ ಸಾಹಿತ್ಯ

2."ಕನ್ನಡದಲ್ಲಿ ಸಣ್ಣಕಥೆ ಅತಂತ್ಯ ಹುಲುಸಾಗಿ ಬೆಳೆದ ಸಾಹಿತ್ಯ ಪ್ರಕಾರವಾಗಿದೆ. ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬೆಳೆಯುತ್ತಾ ತನ್ನನ್ನು ಹೂಸ ಆಹ್ವಾನಗಳಿಗೆ ಒಡ್ಡಿಕೊಳುತ್ತಾ ತನ್ನ ಜೀವಂತಿಕೆಯನ್ನು ಕಾಪಡಿಕೊಂಡು ಬಂದಿದೆ. ಜಾಗತೀಕ ಸಾಹಿತ್ಯದಲೇ ಸಣ್ಣಕತೆ ಒಂದು "ಮೈನರ್" ಸಾಹಿತ್ಯ ಪ್ರಕಾರವೆಂದು ನೋಡಲಾಗುತ್ತಿದೆ. ಆದರೆ ಕನ್ನಡದಲ್ಲಿ ಸಣ್ಣಕಥೆಯ ಸ್ಥಾನ ಯಾವ ಮೇಜರ್ ಸಾಹಿತ್ಯ ಪ್ರಕಾರಕ್ಕಿಂತಲೂ ಕಡಿಮೆಯಿದೇನಲ್ಲವೇಬುಂದು ಸಾಹಿತಿಗಳ ಅಭಿಪ್ರಾಯ ಸಮರ್ಪಕವಾದುದಾಗಿದೆ. ಆಧುನಿಕ ಸಾಹಿತ್ಯದ ಪ್ರಧಾನ ಘಟಗಳಾದ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಈ ಎಲ್ಲ ಹಂತಗಳಲ್ಲಿ ಪ್ರತಿಭಾವಂತ ಸೃಜನಶೀಲ ಮನಸ್ಸುಗಳು ಸಣ್ಣಕತೆ ಪ್ರಕಾರಗದಲ್ಲಿ ತಮ್ಮನ್ನು ಗಂಭೀರವಾಗಿ ತೋಡಗಿಸಿ ಕೊಂಡಿರುವುದನ್ನು ಕಾಣಬಹುದು."2.

ವಸುಧೇಂದ್ರ ಆಧುನಿಕ ಬರಹಗಾರರರಲ್ಲಿ ಒಬ್ಬರು, ಇವರು ಮೂಲತಃ ಬಳ್ಳಾರಿಯ ಸಂಡೂರಿನವರು, ಸಾಫ್ಟ್‌ವೇರ್ ವೃತ್ತಿ ಪ್ರಪಂಚದಲ್ಲಿ ಕೆಲಸ ಹಲವು ವರ್ಷಗಳ ಕಾಲ ದೇಶ-ವಿದೇಶಗಳ್ಲಿ ಈ ಒಂದು ಔದ್ಯೋಗಿಕ ಕ್ಷೇತ್ರದಲ್ಲಿ ತೋಡಗಿಸಿಕೊಂಡ ಇವರಿಗೆ ಕೈಬಿಸಿ ತನ್ನೋಂದಿಗೆ ತೋಡಗಿಸಿಕೋಳ್ಳುವಂತೆ ಮಾಡಿದ್ದು ಈ ಸಾಹಿತ್ಯ ಕ್ಷೇತ್ರವಾಗಿದೆ.

ತಮ್ಮ ಬಾಲ್ಯದಲ್ಲಿ ತನ್ನ ತಾಯಿಯೂ ಹೇಳುತ್ತಿದ್ದ ಕತೆಗಳು ಅವರಿಗೆ ಕೇವಲ ಕಾಲ್ಪನಿಕ ಕತೆಗಳಾಗಿ ಉಳಿಯದೆ ಬದುಕುನ್ನು ಕಟ್ಟಿಕೊಳ್ಳಲು ನೆರವಾಯಿತು ಎಂದು ತಾವೇ ಹೇಳಿದ್ದಾರೆ.

ಮೊದ-ಮೊದಲು ಇವರ ರಚನೆ ಪ್ರರಂಭವಾದದ್ದು ಸಣ್ಣ-ಸಣ್ಣ ಪ್ರಬಂದಗಳ ಮೂಲಕವೇ ಇವರ ಸಂಕಲನಗಳಾದ "ಕೋತಿಗಳು ಸಾರ್ ಕೋತಿಗಳು", "ವರ್ಣಮಯ", "ರಕ್ಷಕ ಅನಾಥ", "ನಮ್ಮಮ್ಮ ಅಂದ್ರೇ ನಂಗಿಷ್ಟ" ಇವು ಅವರ ಪ್ರಬಂಧ ಸಂಕಲನಗಳು. ಅದರಲೂ ನಮ್ಮಮ್ಮ ಅಂದ್ರೇ ನಂಗೀಷ್ಟ ಎಂಬ ಪ್ರಬಂಧಗಳಲ್ಲಿ ಕತೆಗಳು ತಾಯಿಯ ಪ್ರೀತಿಯನ್ನು ಆಕೆಯ ಬದುಕಿನೊಂದಿಗೆ ಬೆಸೆದ ಬಾಂಧವ್ಯ ಎಲ್ಲವನ್ನು ಕೋಡ ಸಹಜವಾಗಿ ತಿಳಿಯ ಪಡಿಸಿ ಜನ ಮನ್ನಣೆಯನ್ನುಗಳಿಸಿದ್ದಾರೆ.

ಈ ಪ್ರತಿ ಪ್ರಬಂಧ ಸಂಕಲನಗಳು ತಮ್ಮ ನಡುವಿನ ಆಸು-ಪಾಸಿನ ಜನರ ಜೀವನ ಕೊಡುವುದರ ಮೂಲಕ ಓದುಗರ ಮನಸ್ಸನ್ನು ಸೆಳೆದಿದ್ದಾರೆ. ಇವುಗಳ ಜೊತೆಯಲ್ಲಿ "ಹರಿಚಿತ್ತ ಸತ್ಯ" ಎಂಬ ಕಾದಂಬರಿ ಹಾಗೂ "ಮಿಥುನ" ಎಂಬ ಶ್ರೀರಮಣರ ತೆಲುಗು ಅನುವಾದದ ಕಥೆಗಳ ಸಂಕಲನಳನ್ನು ಸಹ ರಚಿಸಿದ್ದಾರೆ. ಈ ರೀತಿಯ ಹೊಸ ತಲೆಮಾರಿನ ಬರಹಗಾರರಾದ ಇವರು ಕಥಸಂಕಲನಗಳನ್ನು ಸಹ ರಚನೆ ಮಾಡಿದ್ದಾರೆ. ಅವುಗಳೆಂದರೆ "ಯುಗಾದಿ", "ಚೇಳು", "ಮನೀಷೇ" "ಹಂಪಿ ಎಕ್ಸ್‌ಪ್ರೆಸ್".


ವಸುಧೇಂದ್ರರವರು ಬರೆದ ಈ ಕಥಾ ಸಂಕಲನದಲ್ಲಿ ಕೆಲವು ಆಯ್ದ ಕಥೆಗಳನ್ನು ಇಲ್ಲಿ ಪ್ರಸ್ತಾಪಿಸಲು ಇಚ್ಚಿಸುತ್ತೇನೆ. ಓದುಗನು ಪ್ರತಿ ಬರಃಗಾರರ ಕೃತಿಯನ್ನು ಓದಿದಾಗ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಹೀಗೆ ಕಥೆಗಳಲ್ಲಿ ಅಥವಾ ಕೃತಿಯಲಿ ಬರುವ ಅವನ ಸಮಾಜದ ನಿಲುವಿನ ಹಿಂದಿನ ಶಕ್ತಿಯ ತಿಳೂವಳಿಕೆಯಲ್ಲಿ ಸ್ಪಷ್ಟವಾಗುತ್ತಾ ಸಾಗುತ್ತದೆ.

ಇವರ ಕಥೆಗಳಲ್ಲಿ ನಗರೀಕರಣದ ಬರದಲ್ಲಿ ವಾಸ್ತವ ಬದುಕಿನ ಹೆಜ್ಜೆಯನ್ನು ಕತ್ತಲೆಯತ್ತ ದೂಡಿಕೊಳ್ಳುತ್ತಿರುವ ಕ್ರಿಯೆಯನ್ನು ಕತೆಗಳಲ್ಲಿ ಕಾಣಬಹುದು. ಕಳೆದುಕೊಳ್ಳುತ್ತಿರುವ ಜೀವನ ಮೌಲ್ಯಗಳು ಹಿರಿಯ ತಲೆಮಾರಿನ ತಳಮಳ, ಯಾತನೆ, ಸಂಕಷ್ಟಗಳು, ಸಮಾಜದಲ್ಲಿನ ನೆಡೆಯುವ ಮೌಢ್ಯತೆಯ ಚಿತ್ರಣದೊಂದಿಗೆ ಕಥೆಗಳಲ್ಲಿ ಕಾಣಬಹುದು ಕಥೆಯಲ್ಲಿ ಏಕಮುಖತೆ ಇರುವುದರಿಂದ ಭಾಷೆ, ನಿರೂಪಣಾ ಶೈಲಿ ಸರಳವಾಗಿ ಚಿತ್ರಿತವಾಗಿದೆ. ಉದಾ:- ಯುಗಾದಿ ಕತೆಯಲಿ ಬರುವ ಬೋಪ್ಪಣ ಮೇಷ್ಟ್ರು ಹಾಗೂ ಮಗ ಪ್ರಹ್ಲಾದ ಪಾತ್ರಗಳು ಮೊದಲನೆ ತಲೆಮಾರಿನ ವೇದನೆ ಭಾವನಾತ್ಮಕ ಸಂಬಂಧಗಳ ಅರಿವು, ಮಗನಾದ ಪ್ರಹ್ಲಾದನಲ್ಲಿ ಅದು ವಿರೋಧದ ಧೋರಣೆಯಲಿ ಚಿತ್ರಿತವಾಗಿದೆ. ಹಾಗೇ "ಚೇಳು" ಕಥೆಯಲ್ಲಿ ಬರುವ ವೆಂಕಮ್ಮ ಚಿತ್ರಣಗಳು ತಾನು ನಂಬಿದ ಮೌಲ್ಯಗಳು ಜಡತ್ವವೆನಿಸಿಕೊಳ್ಳಲು ಆರಂಭಿಸಿದಾಗ ತನ್ನ ಒಳಮನಸ್ಸಿನ ತುಯ್ದಾಟಗಳನ್ನ ಕಾಣುತ್ತೇವೆ.

"ಅನಘ" ಕಥೆಯಲ್ಲಿ ಬರುವ ಕಲ್ಲೇಶಿಯ ಸಲಿಂಗ ಕಾಮದ ಚಿತ್ರಣ ಸಾಧಾರಣವೆನ್ನುವಂತಯೆ ಬಿಂಬಿಸಿದ್ದಾರೆ.

ವಸುಧೇಂದ್ರರವರ ಬಹುತೇಕ ಎಲ್ಲಾ ಕಥೆಗಳು ಸಾಫ್ಟ್‌ವೇರ್ ವಲಯ ಬದುಕಿನ ಚಿತ್ರಣ, ಮೌಢ್ಯತೆಯ ಆಚರಣೆಯಲ್ಲಿಯೇ ತನ್ನ ಜೀವನದ ಅರ್ಥ ಹುಡುಕಾಟ, ಮಾನವೀಯತೆಯ ಕಲ್ಪನೆ ಕಾಣುತ್ತೇವೆ. ಮಡಿ–ಮಲಿಗೆ ಇಲ್ಲಿ ಒಂದು ವ್ಯವಸ್ಥೆಯಲ್ಲಿ ಎಷ್ಟೇ ಕೆಡುಕು ಅಥವಾ ಕೆಟ್ಟಿದರೂ ವ್ಯಕ್ತಿಗಳು ಒಳ್ಳೆಯವರಾಗಿರುತ್ತಾರೆ. ಮಾನವೀಯ ಸಂಬಂಧಗಳು ಆ ವ್ಯವಸ್ಥೆಯ ಒಳಗೂ ಹೊರಗೂ ಆರ್ಥಿಕವಾಗಿ ಬೆಳೆಯಬಲ್ಲ ಸಾಧ್ಯತೆಯನ್ನು ಕತೆ ಸೂಚಿಸುತ್ತದೆ. ನೌಕರರ ಮೌಲ್ಯರಹಿತವಾದ ದಾಹ ಹಾಗೂ ಇತರೇ ಕಂಪನಿಗಳ ಮೌಲ್ಯರಹಿತವಾದ ಸ್ಪರ್ಧೆ, ನಿರೀಕ್ಷೆ ಮತ್ತು ವಾಸ್ತವಗಳ ನಡುವಿನ ಅಂತರ ತನ್ನ ಉತ್ಕಟತೆಯಿಂದಾಗಿ ಅತ್ಯಂತ ಪರಿಣಾಮಕಾರಿಯಾಗಿಸಿದ್ದಾರೆ.

ಹೀಗಾಗಿ ವಸುಧೇಂದ್ರರವರ ಕಥೆಗಳಲ್ಲಿ ಸೂಕ್ಷ್ಮ ಉದ್ದೇಶಗಳಿಗೆ ಅನುಗುಣವಾಗಿ, ಸಣ್ಣಕಥೆ ಕಾವ್ಯದ ಗುಣಗಳಿಗೆ ಹೆಚ್ಚು ಹೆಚ್ಚು ಸಮೀಪ ಬರತೊಡಗಿದೆ ಹಾಗೂ ಪರಿಸರ ಪಾತ್ರಗಳ ವಿವರಗಳನ್ನೆಲ್ಲ ಒಂದು ಸಾಂಕೇತಿಕ ಯೋಜನೆಯ ಅಂಶಗಳಾಗಿ ಬಳಸಿಕೊಳ್ಳುತ್ತಾ ಅನುಭವದ ಸ್ಪಷ್ಟತೆಯ ಆಳ, ಸಾರ್ವತ್ರಿಕತೆಯನ್ನು ತರುವ ಪ್ರಯತ್ನ ನೆಡೆಸಿದ್ದಾರೆಂದು ಹೇಳಬಹುದು.



ಅಡಿಟಿಪ್ಪಣಿ:

1. ಮೂಲ: ಅಂತರ್ಜಾಲ ಕೃಪೆ : ಬಳ್ಳಾರಿ ಜಿಲ್ಲಾ ಸಾಹಿತ್ಯ
2. ಸಣ್ಣಕಥೆಯ ಹೊಸ ಒಲವುಗಳು : ಗಿರಡ್ಡಿ ಗೋವಿಂದರಾಜ ಸಾಹಿತ್ಯಭಂಡಾರ ಹುಬ್ಬಳಿ ಪ್ರಕಾಶನ 1965

ಅಧ್ಯಾಯ–3

ವಸುಧೇಂದ್ರ ಸಣ್ಣ ಕಥಾ ಸಾಹಿತ್ಯ (ಪ್ರಾತಿನಿಧಿಕ)

1.1 ಮನೀಷೆ

1. ನಮ್ಮ ವಾಜಿಯನ್ನು ಆಟಕ್ಕೆ ಸೇರಿಸಿಕ್ಕೋಳ್ರೋ
2. ಮೌಢ್ಯೋಪಾಸನೆ
3. ಹುಲಿಗೆವ್ವ

1.2 ಯುಗಾದಿ

1. ಯುಗಾದಿ
2. ಹೆಂಡ್ ಹಂಟರ್
3. ಹುಲಿಗೆ ಕಾಡೇ ರಕ್ಷೆ, ಕಾಡಿಗೆ ಹುಲಿಯೇ ರಕ್ಷೆ

3.3 ಚೇಳು

1. ಚೇಳು
2. ಕ್ಷಿತಿಯ ಹಿಡಿಯ ಹೋರಟವರು
3. ಶ್ರೀದೇವಿ ಮಹತ್ಮೆ

3.4 ಹಂಪಿ ಎಕ್ಸ್‌ಪ್ರೆಕ್ಸ್

1. ಸೀಳು ಲೋಟ
2. ಕೆಂಪು ಗಿಳಿ
3. ಕೆಂಧೂಳಿ

ವಸುಧೇಂದ್ರರ ಸಣ್ಣಕಥಾ ಸಾಹಿತ್ಯ ಪ್ರಾತಿನಿಧಿಕ

(ಮನೀಷೆ ಕಥಾ ಸಂಕಲನದಿಂದ)

ವಸುಧೇಂದ್ರರವರ ಪ್ರಥಮ ಕಥಾ ಸಂಕಲನವಾದ 'ಮನೀಷೆ' ಕೃತಿಯೂ ಒಂದು ವಿಶಿಷ್ಟವಾದ ಅನುಭವ ಹಂದರವನ್ನು ಓದುಗನಲ್ಲಿ ಸೃಷ್ಟಿ ಮಾಡುತ್ತದೆ. ಈ ಕಥಾ ಸಂಕಲನದಲ್ಲಿ ಸಮಾಜದ ಮೌಢ್ಯತೆಗೆ ಬದುಕನ್ನು ಬಲಿಕೊಟ್ಟ ಮಡಿ ಹೆಂಗಸರ ಚಿತ್ರಣ ಕಾಣಬಹುದು. ಹಾಗೂ ಸುಬ್ಬುವಿನ ಸಂಗೀತ ಜ್ಞಾನ ಆತನ ಬದುಕಿನಲ್ಲಿ ತನ್ನ ನೆಲೆಯನ್ನು ಕಂಡಕೊಂಡಿದ್ದ. ನಗರೀಕರಣ, ಹಣದ ಹಿಂದೆ ಬಿದ್ದ ಸುಬ್ಬುವಿನ ಸ್ನೇಹಿತ ತನ್ನ ನೆಲೆಯನ್ನು ಕಂಡುಕೊಳ್ಳಲಾರದೆ ಯಾವುದೋ ಒಂದು ಪರತಂತ್ರದಲ್ಲಿ ನರಳುವ ಸ್ಥಿತಿಯನ್ನು ಕಾಣಬಹುದು. ಪರಂಪರೆ, ಜಾತೀಯತೆ, ಮಡಿ–ಮೈಲಿಗೆಯ ಸಮಾಜಕ್ಕೆ ಛಾಟಿ ಏಟನ್ನು ಕೊಡುವಂತಹ ಹಾಗೂ ಅದು ಸಾಧ್ಯವಾಗದೇ ಹೋದಾಗ, ಅದರೊಂದಿಗಿನ ಅನುಸಂಧಾನದ ರೀತಿಯಲ್ಲಿ ಕಥೆಯಲ್ಲಿ ಎಳೆಗಳು ಚಿತ್ರಿತವಾಗಿವೆ. ಮೌಢ್ಯೋಪಾಸನೆಯ ಕಥೆಯಲ್ಲಿ ಅಜ್ಜಿಯ ನಂಬುಗೆಗಳು, ತಾಯಿಯ ನಂಬುಗೆಗಳು ಇವರೆಡರ ನಡುವೆ ಬೆಳೆದ ಮಗಳ ಮೌಲ್ಯಗಳು, ಅರ್ಥಹೀನವಾದಾಗ ಅವುಗಳನ್ನು ಸಾಧಿಸಸಲು ಯತ್ನಿಸುವ ಶ್ರೇಷ್ಠತೆಯ ವ್ಯಸನತೆಯನ್ನು ಕಾಣುತ್ತೇವೆ ಹಾಗೂ ದಲಿತ ಹೆಣ್ಣು ಮಗಳೊಬ್ಬಳು ಹೇಗೆ ಸಮಾಜದ ಕ್ರೌರ್ಯತೆಯ ಒಳಗಾಗಿ ತನ್ನನ್ನು ತಾನು ಒಂದು ನೆಲೆಯನ್ನು ಕಂಡುಕೊಂಡ ಬಗೆಯನ್ನು ತಿಳಿಸಿಕೊಡುತ್ತದೆ.

ನಮ್ಮ ವಾಜೀನ್ನೂ ಆಟಕ್ಕೆ ಸೇರಿಸ್ಕೋಳ್ರೋ

ಈ ಕಥೆಯ ಮೂಲಕ ಬಳ್ಳಾರಿ ಜಿಲ್ಲೆಯಲ್ಲಿನ ಬ್ರಾಹ್ಮಣಿಕೆ ಕುಟುಂಬದ ನೈಜ ಚಿತ್ರಣವನ್ನು ಓದುಗನಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಮಾಡಿದ್ದಾರೆ. ಕಾಲ ಎಷ್ಟೇ ಬದಲಾದರೂ ಜನರಲ್ಲಿ ಜಾತೀಯತೆಯ ಮನೋಭಾವನೆ ಬಿಟ್ಟುಹೋಗಲಾರದು ಎಂದು ಕಮಲಕ್ಕನ ಪಾತ್ರದ ಮೂಲಕ ಮನವರಿಗೆ ಮಾಡಿಕೊಡುತ್ತಾ ಹಾಗೇ ಅದೇ ರೀತಿಯಲ್ಲಿ ವಾಜಿಯಲ್ಲಿ ಕಂಡು ಬರುವ ತೊನ್ನುರೋಗ. ಅದು ಆತನಿಗೆ ಮಾತ್ರವಲ್ಲ ಇಡೀ ವ್ಯವಸ್ಥೆಗೆ ಹಿಡಿದ ಖಾಯಿಲೆ ಎಂದು ಗುರುತಿಸಿದ್ದಾರೆ.

"ಜಾತಿ ವಿಜಾತಿ ಎನಬೇಡ, ದೇವನೊಲಿದಾತನೆ ಜಾತ ಸರ್ವಜ್ಞ" ಎಂದು ಹೇಳುವ ಸಮಾಜದಲ್ಲಿ ಅಥವಾ ಈ ಕಥಾ ಹಂದರದಲ್ಲಿ ರಾಯರ ಮಠದಿಂದ ಹುಡುಗನನ್ನು ಹೊರದಬ್ಬುವ ಹಾಗೂ ಮಡಿ ಅಡಿಗೆ ಮಾಡಿ ತನ್ನ ಮಗನ ಕೈಯಲ್ಲಿ ಬಡಿಸಬೇಕೆಂಬ ಆಸೆಗೆ ತಣ್ಣೀರು ಎರಚುವ ಚಿತ್ರಣಗಳು, ಇಲ್ಲಿ ಜಾತಿವಾದಿ ಮನುಷ್ಯನ ಕೈವಾಡ ಎಲ್ಲಾ ಕಾಲದಲ್ಲೂ ಇರುತ್ತದೆ ಎಂಬುದನ್ನು ತಿಳಿಯಪಡಿಸಿದ್ದಾನೆ.

ಈಗಾಗಲೇ ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿರುವ ಹರಪ್ಪನಹಳ್ಳಿ ಬಳ್ಳಾರಿ, ಸಂಡೂರು ಗ್ರಾಮಗಳ ಸಾಮಾಜಿಕ ಬದುಕಿನಲ್ಲಿ ಬಸ್ಸು ಆಕರ್ಷಣೆಯನ್ನುಂಟು ಮಾಡುವ ವಸ್ತುವಾಗಿ ಉಳಿದಿಲ್ಲ. ಇಲ್ಲಿಯ ಜನರು ಮತ್ತು ಬಸ್ಸಿನ ನಡುವೆ ಬಹುದಿನದ ಪರಿಚಯವಿದ್ದು, ಸೀಟಿಗಾಗಿ ಜಾತಿ, ಧರ್ಮಗಳನ್ನು ಮೀರಿ ನೂಕಾಡುತ್ತಾರೆನ್ನುವಾಗಲೇ ಸಮಾಜದ ಶ್ರೇಣೀಕರಣದಲ್ಲುಂಟಾಗಿರುವ ಪಲ್ಲಟಗಳು ನಮಗರಿವಾಗುತ್ತವೆ. ಬಳ್ಳಾರಿಯ ಸೊಸೆಯಾಗಿ ಕಮಲಕ್ಕ ತವರು ಮನೆ ಸಂಡೂರಿಗೆ ಹೋಗುವುದರೊಂದಿಗೆ ಆರಂಭವಾಗುವ ಕತೆಯು ಸಂಡೂರಿನಿಂದ ಬಳ್ಳಾರಿಗೆ ಹಿಂದಿರುಗುವುದರೊಂದಿಗೆ ಮುಕ್ತಾಯವಾಗುತ್ತದೆಯಾದರೂ ಈ ನಡುವೆ ಬ್ರಾಹ್ಮಣ ಸಮಾಜದ ಅನೇಕ ವೈರುಧ್ಯಗಳ ಪರಿಚಯವಾಗುತ್ತದೆ. ಬ್ರಾಹ್ಮಣ ಸಮಾಜದಲ್ಲಿ ತನ್ನ ಮಗನನ್ನು ಸ್ಥಿರಗೊಳಿಸುವ ಉದ್ದೇಶ ಹೊಂದಿರುವ ಕಮಲಕ್ಕ, ಮಗನ ತೊನ್ನಿನ ನಿವಾರಣೆಗಾಗಿ ಆಸ್ಪತ್ರೆ, ದೇವರು ದೆವ್ವದ ಪೂಜೆಯನ್ನು ಮಾಡಿ, ಮಗನ ತೊನ್ನನ್ನು ತೊನ್ನೇ ಸಮಾಜದಲ್ಲಿ ಸಮರ್ಥಿಸುವುದು ನಿಜಕ್ಕೂ ಅಸಮಾನ್ಯವಾದುದು. ಇಡೀ ಕತೆಯಲ್ಲಿ ಕಮಲಕ್ಕ ಒಂದು ಕಡೆಯಾದರೆ, ಉಳಿದೆಲ್ಲಾ ಪಾತ್ರಗಳು ಇವಳ ವಿರುದ್ಧ ಪಾತ್ರಗಳಾಗಿಯೇ ನಿರೂಪಿತವಾಗುತ್ತವೆ.

ಬ್ರಾಹ್ಮಣ ಸಮಾಜ ತನ್ನ ಸಮುದಾಯದಲ್ಲಿ ಮಡಿವಂತಿಕೆಯನ್ನು ಸ್ಥಿರಗೊಳಿಸಲು ಮಾಡುವ ಆಚರಣೆಗಳು, ಅವುಗಳಲ್ಲಿ ಅಡಗಿರುವ ಕಾರ್ಯ, ಕ್ರೌರ್ಯ ಕುತಂತ್ರ ಮತ್ತು ಮೋಸದ ವಿವಿಧ ಆಯಾಮಗಳನ್ನು ಇಲ್ಲಿ ಕಾಣಬಹುದಾಗಿದೆ. ಮಠದ ಸ್ವಾಮೀಜಿ ಮುದ್ರೆಯಾಕುವಾಗ ತೊನ್ನಿನ ವಾಜಿಯನ್ನು ನಡೆಸಿಕೊಳ್ಳುವ ಅಮಾನವೀಯತೆ, ಕೂಡ್ಲಗಿ ಸೂಳೇಯರ ಸಹವಾಸ ಮಾಡಿರುವ ಗೋವಿಂದಾಬೀರ್‌ನನ್ನು ಒಪ್ಪಿಕೊಳ್ಳುವುದು, ಐವತ್ತು ರೂಪಾಯಿಗೆ ತಮ್ಮ ಸಂಪ್ರದಾಯ ಆಚರಣೆಗಳನ್ನು ಸಡಿಲಿಸಿಕೊಳ್ಳವುದು. ತೆಂಗಿನ ಕಾಯಿಗಾಗಿ ಪೂಜಾರಿಗಳಲ್ಲಿ ಉಂಟಾಗುವ ಜಗಳಗಳು, ಬ್ರಾಹ್ಮಣ ಸಮುದಾಯದ ಬಿರುಕು ಮತ್ತು ಪಲ್ಲಟವನ್ನ ಹೇಳುವ ಮೂಲಕ ನಿರೂಪಕ ಕಮಲಕ್ಕನ ಹೋರಾಟ ಮತ್ತು ಪರಂಪರೆಯ ಆಚರಣೆಗಳನ್ನು ಮುಖಾಮುಖಿಯಾಗಿಸುತ್ತಾನೆ.

ಕಮಲಕ್ಕ ಮತ್ತು ರುಕ್ಮಿಣಮ್ಮನ ನಡುವಿನ ಸಂಭಾಷಣೆಯಲ್ಲಿ ಅಳಿಯನಾಗಿದ್ದವನು ವಾಜಿ ಎಂದು ಬದಲಾಗುವುದು, ರಾಧಕ್ಕ ವಾಜಿಯನ್ನು 'ಶಾಲೆಗೆ ಚಕ್ಕರ್' ಎಂದು ಕೇಳುವಲ್ಲಿಯ ನಿರೂಪಣ ಶೈಲಿ ಇಡೀ ಕತೆಯ ಪಾತ್ರಗಳ ಮನಸ್ಥಿತಿಯನ್ನು ಅರಿಯಲು ಸಹಕಾರಿಯಾಗುತ್ತದೆ. ರಾಧಕ್ಕ ತನ್ನ ಓತ್ತಲಿನಿಂದ ಬಸಿರು ಹಂದಿಯನ್ನು ಓಡಿಸುವುದು ಅಮಾನವೀಯವಾದುದು. ಕಪ್ಪು ಚರ್ಮದ

ಹಂದಿಯ ಮೈಯಲ್ಲಿ ಕೆಂಪು ರಕ್ತ ಎಂದು ಹೇಳುವಾಗಲೂ ಸಹ ಶ್ರೇಣೀಕರಣ ವ್ಯವಸ್ಥೆಯ ಶೋಷಣೆಯನ್ನು ಕತೆ ವಿಡಂಬಿಸುತ್ತದೆಯೇ ವಿನಹ ಪ್ರತಿಭಟಿಸುವುದಿಲ್ಲ. ಕಮಲಕ್ಕ ಹಂದಿಗೆ ಗೇಟು ತೆಗೆಯುವುದು, ಬಸಿರು ಸರಾಗವಾಗಿ ಇಳಿಯಲಿ ಎಂದು ಪ್ರಾರ್ಥಿಸುವುದು ಬ್ರಾಹ್ಮಣ ಸಮುದಾಯದಲ್ಲಿ ತನ್ನ ಮಗನಿಗೆ ಜಾಗ ಸಿಗಲಿಲ್ಲ ಎಂಬ ಸಿಟ್ಟಿನಲ್ಲಿಯೇ ಹೊರತು ಯಾವುದೇ ಸಾಮಾಜಿಕ ಕಾಳಜಿಯಿಂದಲ್ಲ ಎಂಬ ಅರಿವಿರಬೇಕು.

ಇಡೀ ಕತೆಯಲ್ಲಿ ನಿರೂಪಕ ಕಮಲಕ್ಕನ ಪಾತ್ರವನ್ನು ಬಹಳ ಎಚ್ಚರಿಕೆಯಿಂದ ಕಟ್ಟಿಕೊಡುತ್ತಾನೆ. ಮಡಿಯನ್ನು ಒಪ್ಪುವ ಕಮಲಕ್ಕ ವಾಜಿಯನ್ನು ಅಲಂಕಾರ ಬ್ರಾಹ್ಮಣರಿಗೆ ಬಡಿಸಲು ತನ್ನ ಸಮುದಾಯ ಒಪ್ಪದಿದ್ದಾಗ ಮಾತ್ರ ವಿರೋಧಿಸುತ್ತಾಳೆ. ಅಲ್ಲದೇ, ತನ್ನ ಮಗನನ್ನು ಹೊಲೆಯ ಮಾದಿಗರಂತೆ ಕಾಣುತ್ತೀರಿ ಎಂದು ವಿಡಂಬಿಸುತ್ತಾಳೆ. ಇವಳ ಹೋರಾಟದ ಎದುರು ಗೋವಿಂದಾಚಾರ್ಯನ ಕುತಂತ್ರ ಗೆಲುವು ಸಾಧಿಸುವುದು ಮಡಿವಂತಿಕೆಯ ಗೆಲುವೇ ವಿನಹ ತೊನ್ನು ಅಂಟುರೋಗ ಅಲ್ಲ ಎಂಬ ವೈಚಾರಿಕತೆಯ ಗೆಲುವಲ್ಲ. ಅಲ್ಲದೇ ಬ್ರಾಹ್ಮಣರ ಎಂಜಲೆಲೆಯ ಮೇಲೆ ಮಕ್ಕಳನ್ನು ಹೊರಳುಡಿಸುವುದರಿಂದ ಚರ್ಮರೋಗ ಗುಣವಾಗುತ್ತದೆಂಬ ನಂಬಿಕೆಯಿಂದ ಹೆಂಗಸರು ತಮ್ಮ ಕಂದಗಳನ್ನು ಹೊರಳಾಡಿಸಿದರು ಎಂದು ಹೇಳುವಾಗ ಯಾವ ಸಮುದಾಯದ ಹೆಂಗಸರು ಎಂದು ಹೇಳುವುದನ್ನು ಕತೆ ಮುಗಿಯುತ್ತದೆ. ಕೊನೆಗೆ ಹಸಿವು ಮತ್ತು ಅವಮಾನದಿಂದ ವಾಜಿಗೆ ಸೀಟು ಹಿಡಿಯಲು ಸಾಧ್ಯವಾಗುವುದು ಸಂಶಯ ಎಂದು ಹೇಳುವುದು ಕಮಲಕ್ಕ ಬಳ್ಳಾರಿಯ ಸಮುದಾಯದಲ್ಲಿ ವಾಜಿಯನ್ನು ಬ್ರಾಹ್ಮಣ ಸಮಾಜದಲ್ಲಿ ನೆಲೆನಿಲ್ಲಿಸುತ್ತಾಳೆ ಎಂಬುದು ಸಂಶಯ ಎಂಬ ಅರ್ಥವನ್ನೇ ಈ ಕತೆ ಧ್ವನಿಸುತ್ತದೆ.

.1"ವಾಜಿಗೂ ಮುದ್ರಾಧಾರಣ ಆಗ್ಲಿ" ಅಂತ ಅಂದ್ಕೊಂಡು, ಅವನು ಶಾಲೆಗೆ ಹೋಗುವುದನ್ನು ತಪ್ಪಿಸಿ ಮಠಕ್ಕೆ ಕಮಲಕ್ಕ ವಾಜಿಯನ್ನು ಕರೆದುಕೊಂಡು ಮಾಡಿದಳು. ಸ್ವಾಮಿಗಳು ರುದ್ರಾವತಾರವನ್ನೇ ತಾಳಿ, "ಹುಚ್ಚು ರಂಡೆ, ಮೂಲ ರಾಮದೇವರನ್ನು ಪೂಜೆ ಮಾಡಿದ ಕೈಲಿ ತೊನ್ನು ಮೈಯವನಿಗೆ ಮುದ್ರೆ ಹಾಕಿಸಿ ನರಕಕ್ಕೆ ಕಳಿಸಬೇಕಂತ ಮಾಡಿಯೇನು?.1 ಎಂದು ಗುಡುಗಿದರು. ಇಲ್ಲಿ ಜಾತಿಯತೆಯ ಭೇದ ಕಾಣುತ್ತೇವೆ. ಆದರೆ, ಅದನ್ನು ವಿರೋಧಿಸುವ ಮನೋಭಾವ ಇದ್ದರೂ ಅದನ್ನು ಸಂಭಾಳಿಸಿಕೊಂಡು ಹೋಗುವ ಮನೋಭಾವ ಕಮಲಕ್ಕನಲ್ಲಿ ಕಾಣುತ್ತೇವೆ ಆದರೂ ಪಟ್ಟು ಬಿಡದೆ ಮಗನಿಗೆ ಮುದ್ರಧಾರಣದ ಪ್ರಯತ್ನ ವಿಫಲವಾಗುತ್ತದೆ. ನಮ್ಮ

ಇತಿಹಾಸದ ಪುಟಗಳನ್ನು ತಿರುವಿದಾಗ ಬ್ರಾಹ್ಮಣನಿಗೆ ಎಂಬುದು ಹೇಗೆ ನಮ್ಮ ಸಮಾಜವನ್ನು ನಲುಗಿಸಿದೆ. ಅದರ ಕೆನ್ನಾಲಿಗೆಯಲ್ಲಿ ಯಾರನ್ನೂ ಸಹ ಬಿಟ್ಟಿಲ್ಲ ಎನ್ನಬಹುದು. ಅದು ಕೇವಲ ಬಾಹ್ಯ ಪ್ರಭಾವವಾಗಿರದೇ ಮನುಷ್ಯನ ಬುದ್ದಿಗೆ ಪಾರ್ಶ್ವವಾಯು ಹಿಡಿದಂತೆ ಸ್ವಸ್ಥತೆಯನ್ನು ಕಳೆದುಕೊಂಡಿದೆ. ಮಡಿ–ಮೈಲಿಗೆಗಳ ಸಂಘರ್ಷಗಳಲ್ಲಿ ಸಾಮನ್ಯ ವರ್ಗದ ಜನರು ಬದುಕನ್ನೇ ಬಲಿಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಒಮ್ಮೆ ಕಮಲಕ್ಕ ವಾಜಿಗೆ ಮಠದ ಸ್ವಾಮಿಗಳಿಂದ ಮೈಮೇಲೆ ಮುದ್ರೆ ಹಾಕಿಸಲು ಬಂದಾಗ ಸ್ವಾಮಿಗಳು ಅವನ ಕೆನ್ನೆಯನ್ನು ನೋಡಿದ್ದೇ "ತಳ್ರೋ ಈ ಚಾಂಡಾಲನ್ನ ಹೊರಗೆ, ತಳ್ರೋ' ಅಂತ ಹೇಳಿದರು. ಸ್ವಾಮಿಗಳು ರುದ್ರಾವತಾರವನ್ನೇ ತಾಳಿ "ಹುಚ್ಚು ರಂಡೆ, ಮೂಲ ರಾಮದೇವರನ್ನು ಪೂಜೆ ಮಾಡಿದ ಕೈಲೆ ತೊನ್ನು ಮೈಯವನಿಗೆ ಮುದ್ರೆ ಹಾಕಿಸಿ ನರಕಕ್ಕೆ ಕಳಿಸಬೇಕಂತ ಮಾಡಿಯೇನು? ಎಂದು ಗುಡುಗಿದ್ದರು ಇದರಿಂದ ಕಮಲಕ್ಕನ ಬಾಯಿ ಕಟ್ಟಿ ಹೋಗಿತ್ತು. ಒಂದು ಮಾತಾಡದೆ ಮನೆಗೆ ಬಂದು ಬಿಟ್ಟಿದ್ದಳು. 1."ತನ್ನ ಮನದಲ್ಲಿ ಕೂಡ್ಲಿಗೆ ಸೂಳೀನ ಪಕ್ಕ ಮಲ್ಕೊಂಡು ಬರೋ ಗುಡೇ ಕೋಟಿ ಗೋವಿಂದಚಾರ್‌ಗೆ ಮುದ್ರೆ ಹಾಕ್ತೀರಿ ಬುದ್ದಿ, ನನ್ನ ಕೂಸು ಮಾಡಿರೋ ತಪ್ಪಾದ್ರು ಏನು? ಅಂತ ಅಂದುಕೊಳ್ಳುತ್ತಿದ್ದಳು. ಆದರೆ, ಪರಿಸ್ಥಿತಿಗೆ ಅನುಗುಣಕ್ಕೆ ಒಗ್ಗಿಕೊಂಡು ಸುಮ್ಮನಾಗುತ್ತಿದ್ದಳು. 1.

ತನ್ನ ಅಣ್ಣನಾದ ಗೋಪಣ್ಣನವರ ಮನೆಯಲ್ಲಿ ಪ್ರತಿ ವರ್ಷವೂ ರಾಯರ ಆರಾಧನೆಯಂತೆ ಈ ಬಾರಿಯೂ ಸಹ ಅಣ್ಣನ ಮನೆಗೆ ಬಂದಿದ್ದಳು. ಆಗ ತನ್ನ ಅಣ್ಣ ಮನೆಯ ಹಿತ್ತಲಿಗೆ ಬಂದಿದ್ದ ಹಂದಿಗಳನ್ನು ಓಣಿಯ ಎಲ್ಲ ಹುಡುಗರು ಹಾಗೂ ವಾಜಿಯೂ ಸಹ ಅದರಲ್ಲಿ ಸೇರಿಕೊಂಡಿದ್ದ. ಇಲ್ಲಿ ಹಂದಿಗಳು ಊರ ಕೊಳಕನ್ನು ಹೊಲಸನ್ನು ತಿಂದು ಜೀವನ ಮಾಡೋ ಇವುಗಳನ್ನು ಹೊರಗೆ ಓಡಿಸುತ್ತೇವೆ. ಆದರೆ, ಮನಸ್ಸಿನಲ್ಲಿ ಹೊಲಸು ತುಂಬಿರೋ ಜನರು ಮಡಿ ಮೈಲಿಗೆಯಲ್ಲಿ ಕೊಂಪೆಯಲ್ಲಿ ಇನ್ನೂ ಇದ್ದಾರೆಂದು ಆಕೆಗೆ ಭಾಸವಾಯಿತು. ಆದರೂ, ಅಣ್ಣನ ಮನೆಯ ರಾಯರ ಆರಾಧನೆ ಎಂದ ಮೇಲೆ ಸಾಕಷ್ಟು ಮಡಿ ಶುದ್ಧತೆಯಿಂದ ಸಿದ್ಧತೆ ಮಾಡಿದ ಮನೆಯಲ್ಲಿ ಎಲ್ಲಿ ತನ್ನ ತಂಗಿಯ ಮಗನ ಕೈಯಲ್ಲಿ ಊಟ ಬಡಿಸಿ ಮೈಲಿಗೆ ಮಾಡುವಳೋ ಈ ಕಮ್ಲೀ ಎಂದು ಸಂಚನ್ನು ರೂಪಿಕೊಂಡ. ರಾಧಕ್ಕ ಇತ್ತ ಕಮಲಕ್ಕ ರಾಯರ ಮಠಕ್ಕೆ ಹೋದಾ ಇನ್ನೇನು ಮಡಿಯಲ್ಲಿ ಅಡಿಗೆ ಮಾಡಿ ಬ್ರಾಹ್ಮಣರಿಗೆ ಬಡಿಸಬೇಕು ಎನ್ನುವಷ್ಟರಲ್ಲಿ ಅಲ್ಲೇ ಇದ್ದ ಚಿಕ್ಕ ಹುಡುಗಿಯ ಮುಟ್ಟಿಕೊಂಡೆ ಎಂದು ಸಣ್ಣ ಕಾರಣದಿಂದ ಅತ್ಯಂತ ನಯವಾಗಿ ಹೋಗಿ ಮಡಿ ಸ್ನಾನ ಮಾಡಿ ಬಾ ಎಂದು ಹೇಳಿ

ಆ ದಿನದ ಪೂಜೆಯನ್ನು ವಾಜಿಯ ಕೈಯಲ್ಲಿ ಮಾಡದಂತೆ ನೋಡಿಕೊಂಡು ಯಶಸ್ವಿಯಾಗಿಬಿಟ್ಟಳು. ನಂತರ ಅಲ್ಲಿಂದ ತನ್ನ ಮಗನನ್ನು ಕರೆದುಕೊಂಡು ಊರಿಗೆ ಹೊರಟು ಬಿಟ್ಟಳು. ಯಾವುದೇ ಅಬ್ಬರವಿಲ್ಲದೇ ಶಾಸ್ತ್ರ–ಮುಟ್ಟು–ಜಾತಿ–ಮೈಲಿಗೆಯನ್ನು ವಿರೋಧಿಸುವ ಚಿತ್ರಣ ಮನ ಕಲಕುವಂತಿದೆ ಎಂದು ಹೇಳಬಹುದು.

ಮೌಢ್ಯೋಪಾಸನೆ:

ಈ ಕಥೆಯಲ್ಲಿ ಧರ್ಮ ಜಾತಿ ಹಾಗೂ ಬದುಕಿನ ನಡುವಿನ ತೂಗು ಉಯ್ಯಾಲೆಯಂತೆ ಕಂಡು ಬರುವುದು. ಎಷ್ಟೋ ಬಾರಿ ನಮ್ಮ ನಂಬಿಕೆಗಳು, ಮೌಲ್ಯಿಕ ವಾಸ್ತವದಲ್ಲಿ ಇತರರೊಂದಿಗೆ ಹೋಲಿಕೆ ಮಾಡಿದಾಗ ಯಾವುದೇ ಹುಸಿ ನಂಬಿಕೆಯ ಮೇಲೆ ಜೀವನ ಸಾಗಿಸುವಂತೆ ಕಂಡು ಬರುವುದು. ಇಲ್ಲಿ ಸಮಾಜದ ಮೌಢ್ಯತೆಯು ಬದುಕನ್ನು ಬಲಿಕೊಟ್ಟ ಎಲ್ಲ ಮಡಿ ಹೆಂಗಸರ ಧಾರುಣ ಕಥೆಯಾಗಿದೆ.

ಈ ಕಥೆಯು ಆರಂಭದ ವೇಳೆಗಾಗಲೇ ಅಜ್ಜಿ–ಅಮ್ಮ ಇಬ್ಬರೂ ಮಡಿ ಹೆಂಗಸರಾಗಿರುತ್ತಾರೆ. ಆದರೆ, ಇಲ್ಲಿ ಕಥಾನಾಯಕ ಯಾರೂ ಎಂಬ ಸುಳಿವು ಕೊಡದಂತೆ ಕಥೆಗಾರ ನಿರೂಪಣೆ ಮಾಡಿದ್ದಾರೆ. ಅಜ್ಜಿ ಮಗ ಸೈನ್ಯದಲ್ಲಿ ವೈದ್ಯನಾಗಿದ್ದು, ಹೆಂಡತಿಯ ಕಣ್ಣು ತಪ್ಪಿಸಿ, ತನ್ನ ತಾಯಿ, ತಂಗಿ ಹಾಗೂ ಮಕ್ಕಳನ್ನು ಪ್ರೀತಿಯಿಂದ ನೋಡಿಕೊಳ್ಳುವವ. ಆದರೆ ಎಷ್ಟು ದಿನ ತಾನೆ ಆತನಿಂದ ಜೀವನಾಧಾರಕ್ಕೆ ಬೇಕಾದ ನಿರಂತರ ವರಮಾನವನ್ನು ನಿರೀಕ್ಷಿಸುವುದು. ಅದು ಅಸಾಧ್ಯವಾಗಿತ್ತು. ಅಜ್ಜನ ಆಸ್ತಿ ಸಾಕಷ್ಟಿದ್ದರೂ ಅದು ಕರ್ಪೂರದಂತೆ ಕರಗಲಾರಂಭಿಸಿತು.

ಕಾಲ ಕಳೆಯುತ್ತಿದ್ದಂತೆ ಅಮ್ಮನಿಗೆ ಕಿವಿ ನೋವಿನಿಂದ ಪ್ರಾರಂಭವಾದ ನೋವು ಅದು ಕ್ಯಾನ್ಸರ್‌ಗೆ ತಿರುಗಿತು. ಅದನ್ನು ಗುಣಪಡಿಸಿಕೊಳ್ಳಲು ಆಸ್ಪತ್ರೆಗೆ ಕರೆದುಕೊಂಡು ಬಂದಾಗ ತಾಯಿಯೂ ತನ್ನ ನಂಬಿ, ಮಡಿವಂತಿಕೆ ಎಲ್ಲವೂ ಇಲ್ಲಿ ಹಾಳಾಗುವುದು ಎಂದು ಅಮ್ಮ ಅವ್ವ (ಅಜ್ಜಿಯ) ನಿಷ್ಠೆಯಿಂದ ಮಡಿ–ಮೈಲಿಗೆ ಮಡಿಕೊಂಡಿದ್ದವರಲ್ಲವೆ. ಅದನ್ನೇ ನಂಬಿಕೊಂಡಿದ್ದವರು. ಡಾಕ್ಟರ್‌ರೊಬ್ಬರು 2."ಹಾಗೆಲ್ಲಾ ಹಠ ಮಾಡಬಾರದಮ್ಮ, ಆಸ್ಪತ್ರೆ ಅಂದ್ರೆ ದೇವರ ಗುಡಿ ಇದ್ದಂಗೆ ಇಲ್ಲಿ ಮೈಲಿಗಿ ಅನ್ನೊದು ಇರಂಗಿಲ್ಲ ಡಾಕ್ಟರುಗಳೇ ಇಲ್ಲಿ ದೇವರು, ಅವರು ಹೇಳಿದಾಂಗ ನೀವು ಕೇಳಿಬೇಕು. ನಾಳೆ ಮನಿಗೋದ್ಮೇಲೆ ನಿಮಗಿಷ್ಟು ಮಡಿ ಬೇಕೋ ಅಷ್ಟು ಮಡಿ ಮಾಡ್ಕೊಳ್ವಂತ್ರಿ" ಹೇಳಿದ ನಂತರ ಗುಣಮುಖಳಾದಳು. ಆದರೆ, ಮನೆಗೆ ಬಂದ ಅವ್ವನ ಮೇಲೆ ಅಜ್ಜಿ ಹರಿಹಾಯ್ದಳು. ಆದರೆ ತನ್ನ ಮನದಲ್ಲೇ ನೊಂದುಕೊಂಡಿದ್ದಳು. ಆದರೆ ಅದೇ ಸ್ಥಿತಿಗೆ ಅಜ್ಜಿ ಬಂದಾಗ ಮೊಮ್ಮಗಳಿಗೆ "ಆಕಿ ನಿಂಗೆ ತಾಯಾದ್ರೆ ನಾನು ಆಕಿನ್ನ ಹಡದ ತಾಯಿ ಇದ್ದೀನಿ, ಆಕೆಯೇನೂ

ನನ್ನ ವೈರಿ ಅಲ್ಲ. ನಾಲ್ಕು ಮನಿ ಮಡಿ ಅಡಿಗೆ ಮಾಡಿ ಜೀವನ ಮಾಡ್ತಿದ್ದೋರು ನಾವು. ತಮ್ಮ ಮನಸ್ಸಿಗೆ ತೋಚಿದಂಗೆ ಮಾಡ್ಲಿಕ್ಕೆ ಆಗಂಗಿಲ್ಲ, ಜನಕ್ಕಂಜಿ ತಗ್ಗಿ–ಬಗ್ಗಿ ನಡಿಬೇಕಾಗತ್ತ" ಅಂತ ಹೇಳಿ ಅತ್ತುಬಿಟ್ಟಳು. 2.

ಇಲ್ಲಿ ಅಜ್ಜಿಗೆ ತಾನು ಮಾಡಿಕೊಂಡು ಬಂದ ಮೌಲ್ಯಗಳೇ ಹೆಚ್ಚಾಗುತ್ತದೆ. ಏಕೆಂದರೆ, ಶತಮಾನಗಳಿಂದಲೂ ಪುರುಷ ಪ್ರಧಾನ ಸಮಾಜವೂ ಹೆಣ್ಣು ಹೀಗೆ ಬದುಕಬೇಕು ಎಂದು ರೀತಿ ನಿಯಮಾವಳಿಯನ್ನು ಮಾಡಿಟ್ಟು ಅವರು ಅದೇ ಚೌಕಟ್ಟಿನ ಒಳಗೆ ಬದುಕುವಂತೆ ಮಾಡಿ ಅವರ ಬುದ್ಧಿಗೆ ಸಂಕೋಲೆಗಳನ್ನುಹಾಕಿ ಬಂಧಿಸಿದ್ದಾರೆ. ಇಲ್ಲಿ ಸ್ತ್ರೀ ಸಂವೇದನಾ ನೆಲೆಯಲ್ಲಿ ಗುರುತಿಸುವುದಾದರೆ ಈ ಕಟ್ಟುಪಾಡುಗಳನ್ನು ಬಿಟ್ಟು ಸಮಾಜಮುಖಿಯಾಗಿ ಬದುಕುವ ಧೋರಣೆಗಿಂತ ಸಮಾಜದೊಂದಿಗೆ ಹೆದರಿ ಅದರೊಂದಿಗೆ ಅನುಸಂಧಾನ ಮಾಡಿಕೊಂಡು ಬದುಕುವ ಪಾತ್ರಗಳನ್ನು ಇಲ್ಲಿ ಕಾಣುತ್ತೇವೆ. ಪಾತ್ರಗಳಲ್ಲಿ ಸರಳತೆ ಕಂಡು ಬಂದರೂ ಅವುಗಳ ಮನಸ್ಸಿನಾಳದ ತೊಯ್ದಾಟ ಹೇಳಲಾಗದ ಇವುಗಳ ನಡುವೆ ಬೆಳೆದ ಮೊಮ್ಮಗಳಿಗೆ ಈ ಘಟನೆ ನಡೆದು 40 ವರ್ಷಗಳೇ ಕಳೆದಿವೆ. ಆದರೆ, ವರ್ತಮಾನದಲ್ಲಿ ತಾಯಿಯ ನಿರ್ಧಾರ ನೋಡಿ ನೆನೆದಾಗ ಅದು ಸರಿ ಅಥವಾ ತಪ್ಪೇ ಎಂದು ನಿರ್ಧರಿಸಲು ಸಾಧ್ಯವಾಗದು. ಕಾರಣ ಈ ಕಥೆಯಲ್ಲಿ ಮಡಿಯನ್ನೇ ಜೀವನದ ಪರಮೋಧ್ಯೇಯವೆಂದು ನಂಬಿದ್ದ ಅಜ್ಜಿಯನ್ನು ನೋಡಿದಾಗ ಒಂದು ರೀತಿಯ ಆಶ್ಚರ್ಯವೇ ಸರಿ. ಕಾರಣ ತನಗಾದ ಅನ್ಯಾಯದ ಅರಿವಿಲ್ಲದೆ ಆ ರೀತಿಯ ಮೌಲ್ಯಗಳ ಜೊತೆಯಲ್ಲಿ ಮೌಢ್ಯವನ್ನು ಜೀವನ ರೀತಿಯನ್ನಾಗಿ ಅವರು ನಂಬುವಂತೆ ಮಾಡಿದ ಸಮಾಜದ ಮೇಲೆ ಅಸಹ್ಯದ ಭಾವ ಎಂತವರಿಗಾದರೂ ಮೂಡುವಂತೆ ಆಗದಿರದು. ಇಂದು ಕಾಲ ಬದಲಾಗಿದೆ. ಗಂಡ ಸತ್ತ ಹೆಣ್ಣಿಗೆ ಮಡಿ ಮಾಡುವ ಅನಿಷ್ಟ ಸಂಪ್ರದಾಯ ಕಾಣದಾಗಿದೆ. ಆದರೆ, ಕಥೆಯ ನೆಲೆಯಲ್ಲಿ ನಿಂತು ನೋಡಿದಾಗ ಮಡಿಯನ್ನೇ ಜೀವನವೆಂದು ನಂಬಿ, ಸ್ವಂತ ಮಗಳಿಂದಲೂ ನಿಷ್ಟುರ ಕಟ್ಟಿಕೊಂಡು ತನ್ನ ಪ್ರಾಣವನ್ನು ಲೆಕ್ಕಿಸದೆ ಬಾಳಿದ ಅಜ್ಜಿಯ ಬದುಕಿನ ಅರ್ಥದ ಹುಡುಕಾಟಕ್ಕಾಗಿ ಅನ್ವೇಷಣೆಯನ್ನು ನಡೆಸುತ್ತಿರುವಂತೆ.

ಹುಲಿಗೆವ್ವ :

ಈ ಕಥೆಯ ಮೂಲಕ ನಿರೂಪಕನು ದಲಿತ ಸಂವೇದನೆಯನ್ನು ಕಥೆಯಲ್ಲಿ ಮಿಳಿತ ಮಾಡಿದ್ದರೂ ಸ್ತ್ರೀಯೊಬ್ಬಳ ಸಂವೇದನೆ ಅದರಲ್ಲಿ ದಲಿತ ಸ್ತ್ರೀ ಅಥವಾ ಹೆಣ್ಣು ಮಗಳೊಬ್ಬಳ ಕಥಾ ಹಂದರವನ್ನು ಒಳಗೊಂಡಿದೆ. ದಲಿತ ಕುಟುಂಬದಲ್ಲಿ ಹುಟ್ಟಿದರೂ ದೊಡ್ಡ ಪ್ರಾಜೆಕ್ಟ್ ಮ್ಯಾನೇಜರ್ ಆಗಿ ಬದಲಾಗುವ ಹುಲಿಗೆವ್ವನ ವಿಶೇಷ ಕಥೆಯಾಗಿದೆ. ಇಲ್ಲಿ ಲೇಖಕರು ತಮ್ಮ ಸ್ವಂತ ಅನುಭವವನ್ನು ಹೇಳಿಕೊಳ್ಳುವ ರೀತಿಯಲ್ಲಿ ಕಥೆಯೂ ಅವಲೋಕಿತವಾಗುತ್ತದೆ. ಹೆಸರೇ ಸೂಚಿಸುವಂತೆ ಬಳ್ಳಾರಿ ಜಿಲ್ಲೆಯ ಗ್ರಾಮದ ಹತ್ತಿರವೋ ಅಥವಾ ಊರ ಹತ್ತಿರದಲ್ಲೇ ಇರುವ ದೇವಿಯ ಹೆಸರು "ಹುಲಿಗೆವ್ವ" ಸಾಮಾನ್ಯವಾಗಿ ಈ ರೀತಿಯ ಹೆಸರುಗಳು

ಕೆಳವರ್ಗದಲ್ಲಿ ಹೆಚ್ಚು ಕಂಡು ಬರುತ್ತಿತ್ತು. ಈ ಕಥೆಯ ಹುಲಿಗೆವ್ವನು ಸಹ ಊರ ದಲಿತ ಕೇರಿಯ ಕುರುಡು ದಾಸಪ್ಪನ ಮಗಳು. ಜೊತೆಗೆ ಮನೆ ಮನೆಯ ಭಿಕ್ಷೆ ಬೇಡಲು ಬರುತ್ತಿದ್ದಳು. ಆರಂಭದಲ್ಲಿ ತಂದೆಯೊಂದಿಗೆ ಭಿಕ್ಷೆ ಬೇಡುತ್ತಿದ್ದಳು. ತಂದೆಯ ಸಾವಿನ ನಂತರ ಬದುಕಿನ ದಾರಿಗಳೆಲ್ಲವೂ ನಂದಿ ಹೋಗುತ್ತವೆ ಎಂದು ಕೊಂಡಿದ್ದ ಆಕೆಗೆ ಆಸರೆಯಾದವನು "ರಾಜು" ಎಂಬ ಹುಡುಗ ಎಂದು ಹೇಳಬಹುದು. .3 ಬಾಲ್ಯದಲ್ಲಿ ಶಾಲೆಯಲ್ಲಿ ಗಣಿತವೆಂದರೆ ಭಯದಲ್ಲಿ ಇದ್ದ ಈಕೆಗೆ ಕಂಪ್ಯೂಟರ್ ಕಲಿತು ತನ್ನ ಬುದ್ಧಿಯನ್ನು ಕಂಪ್ಯೂಟರ್‌ನೊಂದಿಗೆ ಕೆಲಸ ಮಾಡಲು ಶುರು ಮಾಡಿತು.3 ಜಾಗತೀಕರಣದ ಕೆನ್ನಾಲಿಗೆ ನಗರಕ್ಕಷ್ಟೇ ಸೀಮಿತವಾಗಿರದೆ ಹಳ್ಳಿಗಳಿಗೂ ಚಾಚಿಕೊಂಡಾಗ ಗ್ರಾಮೀಣ ಬದುಕಿನಲ್ಲಾದ ಬದಲಾವಣೆಗೆ ಮುಖ ಮಾಡಿದಾಗ ಬದುಕು ವಿಮುಖವಾದ ಸೂಕ್ಷ್ಮತೆಯನ್ನು ಚಿತ್ರಿಸಿದ್ದಾರೆ. ಈ ಕಥೆಯಲ್ಲಿ ಬರುವ ಹಯವದನ, ಹುಲಿಗೆವ್ವನ ಬಾಲ್ಯ ಸ್ನೇಹಿತ. ಹಲವಾರು ವರ್ಷಗಳ ನಂತರದಲ್ಲಿ ಅವಳ ಅನಿರೀಕ್ಷಿತ ಭೇಟಿ ಆತನಲ್ಲಿ ಅನೇಕ ಪ್ರಶ್ನೆಗಳ ಮನೆ ಮಾಡಿವೆ. ಜೊತೆಗೆ ನಗರೀಕರಣದ ಪ್ರಭಾವಕ್ಕೆ ಉದ್ಯೋಗ ಅರಸಿ, ಹಳ್ಳಿಯ ಬದುಕಿಗೆ ವಿಮುಖನಾಗಿ ಬ್ರಾಹ್ಮಣನಾಗಿದ್ದರೂ ನಗರದ ಗಾಳಿಗೆ ಸಿಲುಕಿದ ತರಗೆಲೆಯಂತೆ ಎಲ್ಲವನ್ನು ಬಿಟ್ಟು ಯಂತ್ರಗಳೊಂದಿಗೆ ಯಂತ್ರವಾಗಿದ್ದವನು.

ಇತ್ತ ಹುಲಿಗೆವ್ವನು ಸಹ ರಾಜುವಿನಿಂದ ಸಹಾಯ ಪಡೆದರೂ ಈ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಹೇಗೆ ಶೋಷಣೆಗೆ ಒಳಗಾಗುವಳೋ ಅದೇ ರೀತಿಯಲ್ಲಿ ಮುಂಬೈ ಎಂಬ ದೊಡ್ಡ ನಗರೀ. ಅವಕಾಶವನ್ನು ಒದಗಿಸಿಕೊಟ್ಟಿತು. ಊರು, ಮನೆ ಬಿಟ್ಟ ಹೆಣ್ಣು. ತಾನು ಇಲ್ಲಿ ಎಲ್ಲವನ್ನು ತ್ಯಾಗ ಮಾಡುವ ಮೂಲಕ ತನ್ನ ಗುರಿ ಹಣ್ಣಾಗಿದ್ದರೆ ಸಾಕು ಎನ್ನುವ ಮನಸ್ಥಿತಿ ಹುಲಿಗೆವ್ವನದು. ನಂತರದಲ್ಲಿ ಆಕೆಯಲ್ಲಿ ಮನುಷ್ಯರನ್ನು ನಂಬುದಕ್ಕಿಂತ ಹೆಚ್ಚು ಮೆಷಿನ್ ನಂಬುವುದೇ ಸೂಕ್ತ. ಏಕೆಂದರೆ ಅವು ನಂಬಿಕೆಗೆ ದ್ರೋಹ ಮಾಡೋದಿಲ್ಲ ಎನ್ನೋ ಮನಸ್ಥಿತಿ ಇವಳದು. ತನ್ನ ಗುರಿಯನ್ನು ತಲುಪುವ ವೇಳೆಗೆ ಎಲ್ಲವನ್ನು ಪಡೆದರೂ, ಯಾರು ಇಲ್ಲದ ಪರಿಸ್ಥಿತಿಯಲ್ಲಿ ಸಾಮಾನ್ಯ ಮಹಿಳೆಯಾಗಿ ಕಾಣಸಿಗುತ್ತಾಳೆ. ಕಥೆಯಲ್ಲಿ ಯಾವುದೇ ರೀತಿಯ ತಳಮಳವಿಲ್ಲದೇ ಸಾಧಾರಣವಾಗಿ ನಿರೂಪಕ ನಿರೂಪಿಸಿದ್ದಾರೆ ಎನ್ನಬಹುದು.

ಅಡಿಟಿಪ್ಪಣಿ:

1. ವಸುಧೇಂದ್ರ : ಮನೀಷೆ (ಕಥಾ ಸಂಕಲನ) ಛಂದ ಪುಸ್ತಕ ಪ್ರಕಾಶನ ಮುದ್ರಣ 1998.
2. ನಮ್ಮ ವಾಜಿಯನ್ನು ಆಟಕ್ಕೆ ಸೇರಿಸ್ಕೊಳ್ರೋ: ಪುಟ 12,13
3. ಮೌಢ್ಯೋಪಾಸನ : :ಪುಟ 97,98
4. ಹುಲಿಗೆವ್ವ :ಪುಟ 107

(ಯುಗಾದಿ ಕಥಾ ಸಂಕಲನದಿಂದ)

ವಸುಧೇಂದ್ರರವರ 2ನೇ ಕಥಾ ಸಂಕಲನವಾದ 'ಯುಗಾದಿ' ಕೃತಿಯೂ ಕೌಟುಂಬಿಕ ತಳಮಳ, ನಗರೀಕರಣದಿಂದ, ಕೌಟುಂಬಿಕ ವಿಘಟನೆ, ನಗರ ಜೀವನದ ಒತ್ತಡದ ಬದುಕು, ಸಾಫ್ಟ್‌ವೇರ್ ವಲಯದ ತೊಡಕುಗಳು ಹೀಗೆ ಕೆಲವು ಕಥೆಗಳಲ್ಲಿ ತಿಳಿಹಾಸ್ಯದ ಛಾಯೆ ಕಥೆಗಳಲ್ಲಿ ಕಂಡು ಬಂದರೂ ಅವುಗಳಲ್ಲಿ ವಾಸ್ತವದ ಚಿತ್ರಗಳು, ಪ್ರಸ್ತುತ ಬದುಕಿನ ಮಟಗಳನ್ನು ಕನ್ನಡಿಯಲ್ಲಿನ ಪ್ರತಿಬಿಂಬದಂತೆ ಎದುರುಗೊಳ್ಳುವುದು. ಇವರ ಯುಗಾದಿ ಕಥಾ ಸಂಕಲನದಲ್ಲಿ ಹಲವರು ಆತಂಕಗಳ ನಡುವೆಯೇ ಸಮಸ್ಯೆಗಳಿಗೆ ಮುಖಾಮುಖಿಯಾಗುವ ಪಾತ್ರಗಳಾಗಿವೆ. ಇವೆಲ್ಲವೂ ಕೇವಲ ತಾತ್ಕಾಲಿಕವಲ್ಲ ಹಾಗೂ ಸಮಸ್ಯೆಗಳನ್ನು ಸಮರ್ಪಕವಾಗಿ ಎದುರಿಸುವ ಪಾತ್ರಗಳಾದೆ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡು ಜೀವಪರ ಕಾಳಜಿಗೆ ವಿಮುಖವಾಗುವ ಪಾತ್ರಗಳಾಗಿ ಚಿತ್ರಿತವಾಗಿವೆ.

ಯುಗಾದಿ:

ಸ್ಥಳೀಯತೆಗಳಿಗೆ ಮಹತ್ವ ಕಡಿಮೆಯಾಗುತ್ತಿದ್ದು, ವಿದೇಶಿ ತಂತ್ರಜ್ಞಾನ, ಆಚರಣೆ, ಅನುಕರಣೆಗಳು ಅತಿಯಾಗಿ ಅಳವಡಿಕೆಯಾಗುತ್ತಿರುವ ಇಂದಿನ ಸಂದರ್ಭಗಳಲ್ಲಿ ತೃಪ್ತಿ ಎಂಬುದು ಗೌಣವಾಗುತ್ತಿದ್ದು, ಸಂಪಾದನೆ ತನ್ನ ಹೆಚ್ಚುಗಾರಿಕೆಯನ್ನು ಎಲ್ಲೆಡೆ ಮೆರೆಯುತ್ತಿದೆ. ಹಣದ ಅಟ್ಟಹಾಸಕ್ಕೆ ಮರುಳಾದ ಯುವ ಜನಾಂಗ ವಿದೇಶಿ ಪದ್ಧತಿಯ ಮೋಜು-ಮಸ್ತಿಗಳ ಹಿಂದೆ ಬಿದ್ದು ಪ್ರಾದೇಶಿಕತೆಯನ್ನು ಕಡೆಗಣಿಸಿ ಕೊನೆಗೆ ಎಲ್ಲಾ ಮುಗಿದ ಮೇಲೆ ಸ್ಥಳೀಯ ಸಂಸ್ಕೃತಿಯ ಮಹತ್ವ ಅರಿವಾಗುತ್ತದೆ. ಹಾಗೆಯೇ ಶಿಕ್ಷಕ ವೃತ್ತಿಯ ಗೌರವ ಆದರೆ, ಸಾಫ್ಟ್‌ವೇರ್ ವೃತ್ತಿಯ ಗಳಿಕೆಯ ಮದವನ್ನು ಈ ಕಥೆಯಲ್ಲಿ ಕಾಣುತ್ತೇವೆ. ಹಾಗೂ ಬದುಕಿನ ಬಾಂಧವ್ಯ ಹೊತ್ತ ಸ್ಥಳೀಯತೆಯನ್ನು ಈ ಕಥೆಯಲ್ಲಿ ಬಹಳ ಸೊಗಸಾಗಿ ಮೂಡಿ ಬಂದಿದೆ.

ಗೋಪಣ್ಣ ಮಾಸ್ತರರು ಊರಿನಲ್ಲಿ ಇರುವವರೆಗೂ ಎದುರಿಗೆ ನೋಡಿದಾಕ್ಷಣ ಗೌರವ ಆದರದಿಂದ ಮಾತನಾಡುತ್ತಿದ್ದ ವ್ಯಕ್ತಿತ್ವ. ಆದರೆ, ಈಗ ಗೋಪಣ್ಣ ನಿವೃತ್ತ ಶಾಲಾ ಶಿಕ್ಷಕ. ಅವರು ತಮ್ಮ ವೃತ್ತಿ ಜೀವನದಲ್ಲಿ ಹಣ ಕಂಡಿರದಿದ್ದರೂ ಬದುಕಿನಲ್ಲಿ ಸಾರ್ಥಕತೆ ಕಂಡವರು. ತಮ್ಮ ಮಗನೇ ಆಗಿದ್ದರೂ ಶಾಲೆಯಲ್ಲಿನ ಉಳಿದ ಮಕ್ಕಳಂತೆ ಅವನನ್ನು ಭಾವಿಸಿದ್ದರೂ "ಖಡಕ್ ಮಾಸ್ತರ್" ಎಂದೇ ಹೆಸರಾಗಿದ್ದ ಗೋಪಣ್ಣ ಹೆಂಡತಿ ಮಗನೊಂದಿಗೆ ಒಂದು ರೀತಿಯ ಸಂತೃಪ್ತಿ ಜೀವನ ನಡೆಸಿದ್ದರು. ಮಗನಿಗೆ ಅನ್ಯಾಯವಾಗಬಹುದೆಂಬ ಕಾರಣದಿಂದ ಹೆಂಡತಿ ಸತ್ತ ಬಳಿಕ ಮರುಮದುವೆಯಾಗದೇ

ಮಗನ ಏಳಿಗೆಗೆ ಸತತ ಶ್ರಮಿಸಿದ್ದರು. ಗೋಪಣ್ಣ ಊರ ಜನರೊಂದಿಗೆ ಜಾತಿ–ಮತ ಭೇಧವಿಲ್ಲದೆ ಬೆರೆತಿದ್ದ ಗೋಪಣ್ಣ ಮಾಸ್ತರರು. ನಿವೃತ್ತಿಯ ಬಳಿಕ ತಮ್ಮ ಮನೆಯನ್ನು ಬಾಡಿಗೆಗೆ ನೀಡಿ ಬೆಂಗಳೂರಿನ ಮಗನ ನಿವಾಸಕ್ಕೆ ತೆರಳಿದರು. ಅಲ್ಲಿ ಬೃಹದಾಕಾರದ ಮನೆ, ಮನೆಯ ಮುಂದೆ ಆಳು, ದೊಡ್ಡ ಕಾರು, ಟಿ.ವಿ., ಮೊಬೈಲ್, ಸಾಕಷ್ಟು ಹಣ ಎಲ್ಲವೂ ಇತ್ತು. ನೆಮ್ಮದಿಯ ಹೊರತಾಗಿ! ಹಣಕ್ಕಾಗಿ ಹಗಲಿರುಳು ದುಡಿಯುವ ಮಗ ಸೊಸೆಯರ ಯಾಂತ್ರಿಕ ಬದುಕು, ಯಾವುದೋ ದೇಶದಲ್ಲಿರುವವನ ಆದೇಶ ಪಾಲಿಸಬೇಕಾದ ಅನಿವಾರ್ಯತೆಯ ಕೆಲಸ ಮೊದಲಾದವುಗಳ ಮೂಲಕ ಗೋಪಣ್ಣನವರ ಮಗ ಪ್ರಹ್ಲಾದ ಸೊಸೆ ರೇಖಾ ಪರಕೀಯತೆಯ ಭಾವನೆಯಲ್ಲಿ ಸಿಲುಕಿ ಒದ್ದಾಡುತ್ತಿದ್ದರು.

ಅವ್ಯವಸ್ಥಿತ ಬದುಕಿಗೆ ಹೊಂದಿಕೊಂಡ ಮಗ–ಸೊಸೆಯರನ್ನು ಕಂಡಾಗ ಗೋಪಣ್ಣನವರಿಗೆ ತಮ್ಮ ವೃತ್ತಿ ಜೀವನದ ನೆನಪಾಗುತ್ತಿತ್ತು. ಅವರೆಂದೂ ಹಣದ ಬೆನ್ನು ಹತ್ತಿದ್ದವರಲ್ಲ. ಅಲ್ಲದೇ, ತಮ್ಮ ವೃತ್ತಿ ಜೀವನದಲ್ಲಿ ಸಾಕಷ್ಟು ಹೆಸರು ಗಳಿಸಿದ್ದವರು. ರಾಜ್ಯಪಾಲರಿಂದ ಪ್ರಶಸ್ತಿ ಗಳಿಸಿದ್ದವರು. ಎಲ್ಲಕ್ಕೂ ಮಿಗಿಲಾಗಿ ಮಾನವೀಯ ಮೌಲ್ಯಗಳನ್ನು ತನ್ನ ವಿದ್ಯಾರ್ಥಿಗಳಿಗೆ ಕಲಿಸಿದ್ದವರು. ಸ್ವಂತ ಮಗನಾದರೂ ಅವನನ್ನು ಶಾಲೆಯಲ್ಲಿ ವಿದ್ಯಾರ್ಥಿಯಂತೆಯೇ ನೋಡಿದವರು. ಮನೆಪಾಠದ ಸಂದರ್ಭದಲ್ಲಿ ಅವನಿಗೇನಾದರೂ ಪ್ರಶ್ನೆ ಪತ್ರಿಕೆಯಲ್ಲಿ ಬರುವ ಪ್ರಶ್ನೆಗಳನ್ನು ಕುರಿತು ಹೇಳಬಹುದೆಂಬ ಭಯದಲ್ಲಿ ಬೇರೊಬ್ಬರ ಮನೆಗೆ ಮನೆಪಾಠಕ್ಕೆ ಕಳಿಸಿದವರು. ಇಂತಹ ಸ್ವಾಭಿಮಾನಿ, ಸರಳಜೀವಿ ಗೋಪಣ್ಣ ಮಾಸ್ತರರು ತಮ್ಮ ಊರಿನ ಸ್ನೇಹಿತ ಖಾಸಿಂಸಾಬನ ಮಗನಿಗೊಂದು ಕೆಲಸ ಬೇಕೆಂದಾಗ ಮಗನ ಮರ್ಜಿ ಹಿಡಿದರು.

ಅವರಿಗೆ ಮಗನ ಕೆಲಸದ ಸ್ಥಿತಿಯು ಅರಿವಾಗಿತ್ತು. ತನ್ನತನವನ್ನು ಒತ್ತೆಯಿಟ್ಟು ಯಾರಿಗಾಗಿಯೇ ದುಡಿಯುವ ಗಮನ ಬಗ್ಗೆ ಗೋಪಣ್ಣನವರಿಗೆ ಕನಿಕರ ಬಂತು. ಕೇವಲ ಹಣವೊಂದೇ ಎಲ್ಲ ಅಲ್ಲ. ಜೀವನದಲ್ಲಿ ಬೇರೆ ವಿಷಯಗಳಿಗೂ ಬೆಲೆ ಇದೆ ಎಂದು ಪ್ರಹ್ಲಾದನಿಗೆ ಅರಿವಾಗಿದ್ದು ರೇಖಾಳಿಗೆ ದಿನ ತುಂಬಿ ಪ್ರಸವದ ವೇದನೆ ಆರಂಭವಾದಾಗಲೇ, ಆ ಸಂದರ್ಭದಲ್ಲಿ ಗೋಪಣ್ಣನವರ ಹಳೆಯ ವಿದ್ಯಾರ್ಥಿನಿ ರಾಧಾ ನರ್ಸ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಸರ್ಕಾರಿ ಆಸ್ಪತ್ರೆಗೆ ವಿಧಿಯಿಲ್ಲದೇ ಬಂದ ಪ್ರಹ್ಲಾದನಿಗೆ ತನ್ನ ತಂದೆಯ ವೃತ್ತಿಯ ಮಹತ್ವ ಅರಿವಾಗುತ್ತದೆ.

ಆಸ್ಪತ್ರೆಯಿಂದ ಮನೆಗೆ ಹೊರಟಾಗ ನರ್ಸ್ ರಾಧಾಳಿಗೆ ಹಣ್ಣು ಹಂಪಲಿನ ಜೊತೆ ಒಂದಷ್ಟು ಹಣ ಕೊಡಲು ಹೋದಾಗ ಅವಳು ಹೇಳಿದ "ಮಾಸ್ತರರ ಬದುಕು ಮಾಡೋದು ಹೇಗೆ ಅಂತ ಕಲಿಸಿಕೊಟ್ರಿ, ಅದಕ್ಕಿಂತ ದೊಡ್ಡದು ಬೇರೆ ಏನು ಕೊಡಲಿಕ್ಕೆ ಆಗ್ತೈತಿ ಬಿಡ್ರಿ" ಎಂಬ ಮಾತು ಪ್ರಹ್ಲಾದನ ಕಣ್ಣು ತೆರೆಸುತ್ತದೆ. ಜೀವನದಲ್ಲಿ ಹಣಕ್ಕಿಂತ ಮಿಗಿಲಾದುದು ಇದೆ ಎಂಬ ಅರಿವು ಬಂದ ಪ್ರಹ್ಲಾದ ತನ್ನ ತಂದೆಯೊಂದಿಗೆ ಮಾತನಾಡುತ್ತ "ರಾಧಾಳಂತಹ ವ್ಯಕ್ತಿ ನನ್ನ ಜೀವನದಲ್ಲಿ ಖಂಡಿತ ಸಿಗುವುದಿಲ್ಲ. ಹಗಲು ರಾತ್ರಿ ದುಡಿದು ಯಾರೋ ವಿದೇಶದವರು ಬಳಸುವ ಸಾಫ್ಟ್‌ವೇರ್ ಬರೀತೀವಿ. ಅವರಿಗೆ ನಾವ್ಯಾರೋ ಗೊತ್ತಿಲ್ಲ. ನಮಗೆ ಅವರ್ಯಾರೋ ಗೊತ್ತಿಲ್ಲ. ಇಬ್ಬರಿಗೂ ಗೊತ್ತಿರೋದು ಕೆಲಸಕ್ಕೆ ನಿಗದಿಯಾಗಿರೋ "ಬಜ್ಜೆಟ್" ಮಾತ್ರ ಎನ್ನುವುದು ಬದುಕಿನ ಬಾಂಧವ್ಯ ಅವನಿಗೆ ಅರಿವಾಗುತ್ತದೆ. ಇಲ್ಲಿ ಯಾವುದೇ ಅಬ್ಬರವಿಲ್ಲದೆ ಬದುಕಿನ ವೇಗಕ್ಕೆ ತಕ್ಕಂತೆ ಪಾತ್ರಗಳು ತಮ್ಮನ್ನು ಅನುಸಂಧಾನ ಮಾಡಿಕೊಳ್ಳುತ್ತಾ ಸಾಗುವುದು. ಇಲ್ಲಿ ಹಣದ ಹಿಂದ ಓಡುವ ಯುವಪೀಳಿಗೆ ಸಾಕಷ್ಟನ್ನೂ ಕಳೆದುಕೊಂಡು ಪರಿಸ್ಥಿತಿಯ ಅರಿವಾಗುವ ವೇಳೆಗಾಗಲೇ ಮಾನಸಿಕ ತುಮುಲಕ್ಕೆ ಒಳಗಾಗುತ್ತಿರುವುದನ್ನು ಇಂದು ಕಾಣಬಹುದು.

ಹೆಡ್ ಹಂಟರ್:

ಹೆಡ್‌ಹಂಟರ್ ಕಥೆಯ ಶೀರ್ಷಿಕೆಯೇ ಸೂಚಿಸುವಂತೆ ಇಲ್ಲಿ ತಲೆಗಳ ಬೇಟೆ ಎಂದೂ ಸೂಚಿಸಿದರೂ ವಾಸ್ತವದಲ್ಲಿ ಅದು ಖಾಸಗಿ ಕಂಪನಿಗಳ ಹಣದಾಹ ಹಾಗೂ ದಿನಕ್ಕೊಂದು ಹೊಸ ತಂತ್ರಜ್ಞಾನ ಹುಟ್ಟಿಕೊಳ್ಳುತ್ತವೆ. ನಿನ್ನೆ ಇದ್ದಿದ್ದು ಇಂದಿಲ್ಲ ಇಂದಿದ್ದದ್ದು ನಾಳೆ ಇಲ್ಲ! ಸಾಫ್ಟವೇರ್ ಪ್ರಪಂಚವೇ ಅಂತಹದು ಶಾಲೆ ಕಾಲೇಜುಗಳಲ್ಲಿ ಓದಿದ್ದಕ್ಕಿಂತಲೂ ಹೆಚ್ಚಾಗಿ ಇಲ್ಲಿ ಓದಬೇಕು. ಏನಾದರೂ ಮೈಗಳ್ಳತನ ಮಾಡಿ ಒಂದು ವರ್ಷ ಸುಮ್ಮನಿದ್ದು ಬಿಟ್ಟೆವೋ ಯಾರು ಮೂಸಿ ನೋಡದವರಂತಾಗುತ್ತೇವೆ. ಅದೇ ತಾನ್ ಈ ರಂಗಕ್ಕೆ ಕಾಲಿಟ್ಟವರಿಂದ ಹಿಡಿದು ಹತ್ತು ವರ್ಷ ಅನುಭವವಿರುವನವರೆಗೆ ದಿನ ನಿತ್ಯ ಓದುವ ವ್ಯಾಯಾಮ ಮಾಡಲೇಬೇಕು.

ನಗರೀಕರಣದ ನಾಗಲೋಟದ ಈ ಖಾಸಗೀ ಕಂಪನಿಗಳು ಹಾಗೂ ಖಾಸಗೀ ಬದುಕಿಗೆ ಯಾವುದೇ ರೀತಿಯ ಬೆಲೆ ಇರದು. ಇಲ್ಲಿ ವ್ಯಕ್ತಿಗಳ ಸ್ಥಾಪಿತ ಏಳಿಗೆಗೆ ಮಾತ್ರ ಬೆಲೆ. ಅದರ ಪ್ರತಿನಿಧಿಗಳೇ ಇಲ್ಲಿಯ ಪಾತ್ರಗಳೆಂದರೆ ರಾಜು ಹಾಗೂ ಸಂದೀಪ. ಈ ಕಥೆಯ ಹಂದರ ಬಹಳ

ಸರಳವಾಗಿ ವಸುಧೇಂದ್ರನವರು ಅನಾವರಣಗಳಿಸಿದ್ದಾರೆ ನಮ್ಮ ನಡುವಿನ ಪ್ರತಿ ನಿತ್ಯ ನಗರದ ಐಟಿ-ಬಿಟಿ ಕ್ಷೇತ್ರದಲ್ಲಿ ಕೆಲಸ ಮಾಡುವ ಕೆಲಸಗಾರರ ಔದ್ಯೋಗಿಕ ಕ್ಷೇತ್ರದ ಹಣೆ ಬರಹ ಎನ್ನಬಹುದು.

ಸಂದೀಪ ಕಂಪನಿಯ ಬಾಸ್, ರಾಜು ಅವನ ಪ್ರಾಜೆಕ್ಟ್ ಮ್ಯಾನೇಜರ್. ಹೊಸದಾಗಿ ಕಂಪನಿಗೆ ಬಂದಾಗ, ಕಂಪನಿಯ ಪೂರ್ವ ಪರ ತಿಳಿಯದೇ ಸರಿಯಾದ ಸಲಹೆಗಾರರೇ ದೊರೆಯದೇ ಸಿಕ್ಕ ಪ್ರಜೆಕ್ಟ್ ಕೆಲಸ ನಿಂತು ಹೋಗುವುದು. ಸಮಯದ ಅಭಾವದ ನಡುವೆಯೂ ಕೂಡ, ಕೆಲಸದ ಬಗ್ಗೆ ಎ.ಬಿ.ಸಿ.ಡಿ. ಗೊತ್ತಿಲ್ಲದ ಹುಡುಗರಿಗೆ ಒತ್ತಡ ಹೇರಿ ಹಗಲು ರಾತ್ರಿ ವಾರಾಂತ್ಯಗಳನ್ನು ಬಿಡದೆ ಅವರಿಂದ ಕೆಲಸ ಮಾಡಿಸಿಕೊಳ್ಳುತ್ತಾನೆ. ತಿಂಗಳುಗಟ್ಟಲೆ ತಮ್ಮನ್ನು ಕಾಡಿದ ಸಮಸ್ಯೆಗೆ ಅನುಭವಿಯೊಬ್ಬರಿಂದ ಕ್ಷಣದಲ್ಲಿ ಪರಿಹಾರ ಕಂಡುಕೊಳ್ಳುವ ಸಾಧ್ಯತೆಯಿರುತ್ತಿತ್ತು. ಆದರೂ ಅದನ್ನು ಮಾಡುವುದಿಲ್ಲ.

2.ಸಾಫ್ಟವೇರ್ ವಲಯದಲ್ಲಿ ಪ್ರಾಜಕ್ಟ್ ಯಶಸ್ವಿಯಾಗಿಲ್ಲವೆಂದದಾದರೆ ಅದರಲ್ಲಿ ಕೆಲಸ ಮಾಡಿದ ಹುಡುಗರಿಗೆ ತಮ್ಮ ಶ್ರಮವನ್ನು ಸಮರ್ಥಿಸಿಕೊಳ್ಳುವ ಯಾವುದೇ ನೈತಿಕ ಹಕ್ಕು ಇರುವುದಿಲ್ಲ. ಹಾಗಾಗೀ ಕಂಪನಿಗೆ ಎಷ್ಟರ ಮಟ್ಟಿಗೆ ಉಪಯೋಗವಾಯಿತು ಎಂಬುದನ್ನು ಅರಿತು ಅಪ್ರೈಸಲ್ ನೀಡುತ್ತದೆ. ಈ ರೀತಿಯ ತೋಯ್ದಿದಾಟಕ್ಕೆ ಸಿಲುಕಿದ ಉದ್ಯೋಗಿಗಳು ಕಂಪನಿಯಿಂದ ಕಂಪನಿಗೆ ಹಾರಬಯಸುತ್ತಾರೆ..2

ಈ ಕಥೆಯಲ್ಲಿ ಬರುವ ಶಶಿಕಲಾ ಎಂಬ ಹುಡುಗಿ ಮುಗ್ದ ಎಂಬ ಭಾವನೆ ಮೂಡಿ ಬಂದರೂ ಕಥೆಯ ಕೊನೆಯಲ್ಲಿ ಆ ಮುಗ್ದ ಹುಡುಗಿಯ ಇನ್ನೊಂದು ಸ್ವರೂಪ ತಿಳಿಯುವಷ್ಟರಲ್ಲಿ ಸಾಕಷ್ಟು ಸಮಯ ಹಿಡಿದಿರುತ್ತದೆ. .2 ಈಕೆ ತನ್ನ ಕಂಪನಿಯಲ್ಲಿ ಇರುವ ಎಷ್ಟೋ ಬುದ್ದಿವಂತ ಸಾಫ್ಟವೇರ್ ಮ್ಯಾನೇಜರ್‌ಗಳನ್ನು ಅಮೇರಿಕಕ್ಕೆ ಮಾರಿಬಿಟ್ಟಿರುತ್ತಾಳೆ. ಕಥೆಯ ಕೊನೆಯಲ್ಲಿ ರಾಜುವಿಗೂ ಈ ಆಫರ್ ನೀಡಿದ್ದು ರಾಜುವಿಗೂ ಸಹ ಅದನ್ನು ನಿರಾಕರಿಸಲು ಸಾಧ್ಯವಾಗದೆ ಒಪ್ಪಿಕೊಳ್ಳುವ ಮನಸ್ಸು ಮಾಡುತ್ತಾನೆ.2

ಹುಲಿಗೆ ಕಾಡೇ ರಕ್ಷೆ, ಕಾಡಿಗೆ ಹುಲಿಯೇ ರಕ್ಷೆ:

ವಸುಧೇಂದ್ರರ ಕಥಾ ಸಾಹಿತ್ಯದಲ್ಲಿಯೇ ಇದು ವಿಶಿಷ್ಟತೆಯ ಕಥೆ ಹಾಗೂ ದಲಿತ ಸಂವೇದನಾಶೀಲತೆ ಒಳಗೊಂಡಿದೆ ಕಥಾನಕಗಳು ಹೆಚ್ಚು ಜನಪ್ರಿಯವಾಗುತ್ತಿರುವುದಕ್ಕೆ ಈ ಕಾಲದ

ಮಹಿಮೆಯೂ ಕಾರಣವಿರಬಹುದು! ತಾನು ವರ್ತಮಾನದ ಬದುಕನ್ನು ರಾಗದ್ವೇಷವಿಲ್ಲದ, ನಿರ್ಲಿಪ್ತ ಮನಸ್ಸಿನಿಂದ ಕಟ್ಟಿಕೊಡುವ ವಸುದೇಂದ್ರ ಸಮಕಾಲೀನ ಕಥೆಗಾರರಿಗಿಂತ ವಿಭಿನ್ನವಾಗುತ್ತಾರೆ. ಎಲ್ಲರನ್ನು ಸೆಳೆದುಕೊಳ್ಳುವ ಗುಣ, ರಂಜನೆ, ಲಘುದಾಟಿಯ ಶೈಲಿಗಳು ಅದರಲ್ಲಿವೆ. ಉಳ್ಳವರು ತಮ್ಮ ದರ್ಪವನ್ನ ತೋರಿಸುವುದರೊಂದಿಗೆ ಅಸಹಾಯಕರು ಅಮಾಯಕರ ಮೇಲಿನ ದೌರ್ಜನ್ಯಗಳು ನೆಡೆಯುವುದು ಇಂದಿಗೂ ನಮ್ಮ ಸಮಾಜದಲ್ಲಿ ಕಾಣಸಿಗುವುದು ಆದರೂ ಇವರ ಕತೆಗಳಲ್ಲಿ ಬರುವ ಪಾತ್ರಗಳು ಸಮಾಜದ ಶೋಷಣೆಗೆ ಒಳಗಾದರೂ ಯಾವುದೇ ಪ್ರತಿಭಟನೆ ತೋರಿಸುವುದಿಲ್ಲ. ಎರಡು ಭಿನ್ನಲೋಕಗಳ ಬದುಕು, ಸಂಸ್ಕೃತಿಗಳ ಕಂದರ ಕಾಣುವಂತೆಯೇ ಇದೆ ಬಡತನದಲ್ಲಿ ಬೆಳೆದುಬಂದ ಗಂಡ ಹೆಂಡತಿ ಇಬ್ಬರು ಒಂದು ರೀತಿಯ ಮಾನಸಿಕ ತೋಳಲಾಟಕ್ಕೆ ಒಳಾಗಾಗಿರುವುದು ಹಾಗೂ ತನ್ನ ಕುಸಿದು ಬಿದ್ದ ಮನೆಗೆ ಗೋಡೆ ಕಟ್ಟಿಸಬೇಕು ಎಂಬುದೊಂದೆ ಚಿಂತೆ, ಈ ಕಥೆಯಲ್ಲಿ ಬರುವ ಗಂಡ, ಮಕ್ಕಳ ಪಾತ್ರಗಳು ಸಾಮಾನ್ಯವಗಿದ್ದರು ಹೆಂಡತಿ ಪಾತ್ರ ಗಯ್ಯಾಳಿಯಾಗಿ ಚಿತ್ರತವಾಗಿದ್ದರೂ ತನ್ನ ಕುಟುಂಬ ಸಂಸಾರ ಮಕ್ಕಳ ಬೆಳವಣಿಗೆಯಲ್ಲಿ ಎಲೆಮರೆಯ ಕಾಯಿಯಂತೆ ನಿಂತು ಸಾಕಿ–ಸಲುಹಿದ ರೀತಿಯ ಪಾತ್ರದಲ್ಲಿ ಕಾಣುತ್ತೇವೆ. ಈ ಕಥೆಯಲ್ಲಿನ ಗಂಡ ತುಂಬಾ ಸಾಧುವ್ಯಕ್ತಿತ್ವದವನು ಮಕ್ಕಳು ಮನೆ ಸಂಸಾರ ಎಂದು ನೋಡಿಕೋಳ್ಳುತ್ತಿದ. ಆದರೆ ಮನೆಗೊಂದು ಕಿಟಕಿ ಹಾಗೂ ಗೋಡೆ ಉರ್ಜಿತಗೂಳಿಸಬೇಕು ಎಂಬುದೊಂದೆ ಆಸೆ, ಆದರೆ ಸಮಾಜದ ಮೇಲ್ವರ್ಗ ಜನರ ಕುಯ್ಯುಕ್ತಿಯ ಕುತಂತ್ರಕ್ಕೆ ಏನು ಮಾಡಲಾಗದ ಸ್ಥಿತಿಯಲ್ಲಿ ಇಡಿ ಜೀವನವೆಲ್ಲ ಕತ್ತಲೆಯಲ್ಲಿ ಕಳೆಯುವ ಸಂದರ್ಭ ಎದುರಾಗುವ ಸನ್ನಿವೇಶ ಮನಕಲುಕುವಂತೆ ಚಿತ್ರಿಸಿದ್ದಾರೆ. ಬಡತನದ ಕೊರತೆಯಿದ್ದರೂ, ಸಾಮರಸ್ಯವಿದೆ; ಸೋತರೂ ಸ್ವೀಕರಿಸುವ ಗುಣವಿದೆ. ಹುಲಿಗೆ ಕಾಡೇ ರಕ್ಷೆ, ಕಾಡಿಗೆ ಹುಲಿಯೇ ರಕ್ಷೆ' ಕಥೆಯೂ ಸೋತವನನ್ನು ಷರತ್ತಿಲ್ಲದೆ ಸ್ವೀಕರಿಸುವ ಮನೋಭಾವವನ್ನು ಕುರಿತೇ ಬಂದಿದೆ. ಕಥೆಗಳಲ್ಲಿ ಕಾಣಲಾಗುತ್ತದೆ

ಅಡಿಟಿಪ್ಪಣಿ:

1. ವಸುಧೇಂದ್ರ : ಯುಗಾದಿ (ಕಥಾ ಸಂಕಲನ) ಛಂದ ಮಸ್ತಕ ಪ್ರಕಾಶನ ಮುದ್ರಣ 2015
2. ಹೆಡ್ ಹಂಟರ್ ಕಥೆ: ಮಟ ಸಂಖ್ಯೆ– 33, 36
3. ಹುಲಿಗೆ ಕಾಡೇ ರಕ್ಷೆ, ಕಾಡಿಗೆ ಹುಲಿಯೇ ರಕ್ಷೆ : ಮಟ ಸಂಖ್ಯೆ– 53

(ಚೇಳು ಕಥಾ ಸಂಕಲನದಿಂದ)

'ಚೇಳು' ಕೃತಿಯೂ ವಸುಧೇಂದ್ರರ ಮೂರನೇ ಕಥಾ ಸಂಕಲನವಾಗಿದೆ. ವೃತ್ತಿನಲ್ಲಿ ಸಾಫ್ಟ್‌ವೇರ್ ಉದ್ಯೋಗಿಯಾಗಿದ್ದರೂ, ಪ್ರತಿ ಕಥಾಸಂಕಲನದಿಂದ – ಮತ್ತೊಂದು ಕಥಾ ಸಂಕಲನದವರೆಗೂ ಬರುವ ಕಥೆಗಳಲ್ಲಿ ಏಕಮುಖನಾದ ಚಹರೆಯೇ ಎದ್ದು ಕಾಣುವಂತಿರುತ್ತದೆ. ಅದೇ ರೀತಿಯಲ್ಲಿ ಚೇಳು ಕಥಾ ಸಂಕಲನವೂ ಹೌದು. ಚೇಳುಗಳು ಆಧುನಿಕ ಜೀವನದ ಭರಾಟೆಯಲ್ಲಿ ಎಲ್ಲಿ ಕಾಣೆಯಾದವು. ಅವು ಹೇಗೆ ಕಾಲದ ಸ್ಥಿತ್ಯಂತರ ಪಲ್ಲಟವನ್ನು ಪ್ರತಿನಿಧಿಸುವುದು. ಕಲ್ಲೇಶಿ ಎಂಬ ಹುಡುಗ ವೇಶ್ಯೆಯ ಮನೆಯಲ್ಲಿ ಕಂಗೆಟ್ಟಿದ್ದು ಏಕೆ? ಲಕ್ಷಗಟ್ಟಲೆ ಸಂಪಾದಿಸುವ ಸಾಫ್ಟ್‌ವೇರ್ ಉದ್ಯೋಗಿ ಕ್ಷಿತಿಯ ಸದ್ಯದ ಸಮಸ್ಯೆಯೇನು? ಮನೆಗೆಲಸದ ಶ್ರೀದೇವಿಯ ವಿಭಿನ್ನ ಜಗತ್ತು ಯಾವುದು? ಹೀಗೆ ಹಲವು ವಿಶೇಷ ಕಥೆಗಳ ಗುಚ್ಛವಾಗಿದೆ.

ಚೇಳು:

ಈ ಕಥೆಯಲ್ಲಿ ಬರುವ ಪ್ರಮುಖ ಪಾತ್ರಧಾರಿ ವೆಂಕಮ್ಮ. ತನ್ನ ಜೀವನದಲ್ಲಿ ಎದುರಾಗುವ ಅನಿರೀಕ್ಷಿತ ಸಮಸ್ಯೆಗಳನ್ನು ತಾನು ಎದುರಿಸಲಾರದೆ ಆ ಸಮಾಜದೊಂದಿಗೆ ಹೊಂದಿಕೊಂಡು ಇರಲಾರದ ದ್ವಂದ್ವತೆಯೂ ಕಥೆಯಲ್ಲಿ ಕಾಣುತ್ತೇವೆ. ಇಲ್ಲಿ ಪ್ರಾತಿನಿಧಿಕವಾಗಿ ಚೇಳು ಎಂದು ಹೇಳುತ್ತಿರುವ ಕಥೆಯಲ್ಲಿ ಬಳ್ಳಾರಿ ಜಿಲ್ಲೆಯ ದೇಸಿಯ ಅಥವಾ ಸ್ಥಳೀಯತೆಯ ಸ್ಥಿತಿಗತಿಯನ್ನು ಬಿಂಬಿಸುತ್ತಿದೆ. ಇಲ್ಲಿಯ ಕೇಂದ್ರೀಕೃತವಾದ ಪಾತ್ರಗಳು ಸಮಾಜದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಾ ಜೀವನದ ಹುಟುಕಾಟದಲ್ಲಿವೆ ಎಂದು ಹೇಳಬಹುದು.

ವೆಂಕಮ್ಮ ತಾಯಿ ಬಳ್ಳಾರಿಗೆ ಬಂದಾಗ ಅಥವಾ ತನ್ನ ಅರಿಯದ ವಯಸ್ಸಿಲ್ಲದ ವಯಸ್ಸಲ್ಲಿ ಗಂಡನ ಮನೆಗೆ ಕಾಲಿಟ್ಟಾಗ ಏನನ್ನೂ ಅರಿಯದ ಮುಗ್ಧೆ. ಆದರೆ ಗಂಡನಿಗೆ ತನ್ನ ಹೆಂಡತಿಯಲ್ಲಿ ವಂಶೋದ್ಧಾರಕನನ್ನು ಬಯಸುತ್ತಾನೆ. ಆದರೆ ಅದು ಅಸಾಧ್ಯವೆಂದು ತಿಳಿದು ತನಗೆ ತಿಳಿದ ಮೌಢ್ಯತೆಯಂತೆ ಎಲ್ಲಾ ದೇವಾಲಯ ಮಠಗಳಿಗೆ ಆಕೆಯಿಂದ ಸೇವೆ ಮಾಡಿಸಿದರೂ ಅವನ ನಂಬಿಕೆ ಊರಿಗೆ ಬರುವ ಡೋಂಗಿ ಬಾಬಾಗಳ ಮೇಲೆ ನಂಬಿಕೆ. ಹೇಗಾದರೂ ಸರಿ ತನ್ನ ಹೆಂಡತಿಗೆ ಮಕ್ಕಳಾದರೆ ಸಾಕು ಎಂದು ಬಯಸಿದವನು. ಇಲ್ಲಿ ವೆಂಕಮ್ಮನು ಸಹ ಸಹಜ ವಯೋಮಾನಕ್ಕೆ ಹಾಗೂ ಗಂಡನ ಮನೆಯವರ ಕಿರುಕುಳಕ್ಕೆ ಒಳಗಾಗಿ ಹೇಗಾದರೂ ಸರಿ ತನಗೆ ಮಕ್ಕಳಾದರೆ ಸಾಕು ಎನ್ನುವ ನಿರ್ಧಾರಕ್ಕೆ ಬಂದು ಆ ಊರಿಗೆ ಬರುವ ಡೋಂಗಿ ಬಾಬಾನ ವಂಚನೆಗೆ ತನ್ನನ್ನು ಸಮರ್ಪಿಸಿಕೊಳ್ಳುತ್ತಾಳೆ. ಇದರಿಂದ ತನ್ನ ಗಂಡನ ಮನೆಯವರಿಂದಲೂ ದೂರವಾಗಿ ತಾನು

ಒಬ್ಬಂಟಿಯಾಗಿ ಅಸಹಾಯಕ ಸ್ಥಿತಿಯಲ್ಲಿ ನಿಲ್ಲುವಂತ ಪರಿಸ್ಥಿತಿ ವೆಂಕಮ್ಮನಿಗೆ ಒದಗುತ್ತದೆ. ಇಲ್ಲಿ ಪುರುಷ ಪ್ರಧಾನ ಸಮಾಜದ ಕುತಂತ್ರಗಳಿಗೆ ತಾನು ಬಲಿಯಾದರೂ ಆಕೆಗೆ ಯಾರ ಆಸರೆಯೂ ಈ ಸಮಾಜದಲ್ಲಿ ದೊರೆಯುವುದಿಲ್ಲ. ಇಲ್ಲಿಯೂ ಸಹ ವೆಂಕಮ್ಮನಿಗೆ ಆ ಸ್ಥಿತಿ ಉಂಟಾದಾಗ, ಆಕೆಯನ್ನು ವಂಚಿಸಿದ ಭೈರವ ಬಾಬಾನೇ ಆಕೆಯ ನೆರವಿಗೆ ಬರುತ್ತಾನೆ. ತನಗೆ ತಿಳಿದಿ ಚೇಳಿನ ಔಷಧವನ್ನು ಈಕೆಗೆ ಹೇಳಿಕೊಡುತ್ತಾನೆ. ಆ ಔಷಧವೇ ಈಕೆ ಜೀವನಾಧಾರವಾಗುತ್ತದೆ. ಸಮಾಜ ಗಂಡ ಬಿಟ್ಟ ಹೆಣ್ಣನ್ನು ನೋಡುವ ಅನಾಗರೀಕತೆಯ ಕ್ರೌರ್ಯ ಈ ಕಥೆಯಲ್ಲಿ ಕಾಣುತ್ತೇವೆ. ಚೇಳಿನ ಔಷಧವನ್ನು ಮಾಡಿಕೊಂಡು ತನ್ನ ಜೀವನೋಪಾಯ ಕಂಡುಕೊಂಡಳು. ಹಾಗಾಗೀ ಇಡೀ ಊರಿನಲ್ಲಿ ಚೇಳಿನ ವೆಂಕಮ್ಮನೆಂದೇ ಪ್ರಸಿದ್ಧಿಯನ್ನು ಪಡೆದಳು. ಆ ಊರಿನಲ್ಲಿ ನಾನಾ ರೀತಿಯ ಉಪಕಾರ ಮಾಡುತ್ತಾ ಜೀವನ ಸಾಗಿಸುತ್ತಿದ್ದಳು. ಜಾಗತೀಕರಣದ ಪ್ರಭಾವ ಕೇವಲ ನಗರದ ಮೇಲೆ ಮಾತ್ರವಲ್ಲ ಹಳ್ಳಿಗಳಲ್ಲೂ ತನ್ನ ಕಬಂಧಬಾಹುಗಳನ್ನು ವ್ಯಾಪಿಸಿರುತ್ತದೆ.

ಈ ದಿಸೆಯಲ್ಲಿ ಊರಿಗೆ ಬಂದ ಗಾಣಿಗರ ಕೊಟ್ರೇಶಿ. ಆಧುನೀಕರಣದ ಪ್ರತಿನಿಧಿ ಇದ್ದಂತೆ. ಇದರಿಂದ ಬಳ್ಳಾರಿಯಲ್ಲಿ ಇದ್ದ ಚೇಳಿನ ಸಮಸ್ಯೆ ಬಗೆಹರಿದು, ವೆಂಕಮ್ಮನಿಗೆ ಕಂಟಕವಾಯಿತು. ಇಲ್ಲೂ ಕೂಡ ಊರಿನಲ್ಲಿ ಸಹಾಯ ದೊರೆಯಲಾಗದೆ ಅಥವಾ ಎಲ್ಲಿಯೂ ಅಸ್ತಿತ್ವ ಕಂಡುಕೊಳ್ಳಲಾರದೆ ಚೇಳಿನ ಔಷಧವನ್ನು ಕುಡಿದು ಪ್ರಾಣ ತ್ಯಾಗ ಮಾಡುತ್ತಾಳೆ. ಇಲ್ಲಿ ಹೇಘೆ ನಾಗರೀಕ ಸಮಾಜದಲ್ಲಿ ಚೇಳು ಇದ್ದು ಕಾಣೆಯಾಯಿತು. ಅದೇ ರೀತಿಯಲ್ಲಿ ವೆಂಕಮ್ಮನೂ ಸಹ ಕಣ್ಮರೆಯಾಗುತ್ತಾಳೆ.

ಚೇಳು ಕಥೆಯನ್ನು ಸ್ತ್ರೀ ಸಂವೇದನಾ ನೆಲೆಯಲ್ಲಿ ನಿಂತು ನೋಡಿದಾಗ ಇವರ ಕಥಾ ಪರಿಧಿಯ ಸಮಾಜದಲ್ಲಿ ಪುರುಷ ಪ್ರಧಾನವಾದ್ದರಿಂದ, ಅದರ ವಿರುದ್ಧ ಧ್ವನಿ ಮಾಡದೇ ಅದರೊಂದಿಗೆ ಅನುಸಂಧಾನ ಮಾಡಿಕೊಂಡು ಬದುಕುವ ಕ್ರಮ ನೋಡಬಹುದು. ವೆಂಕಮ್ಮ ಸ್ವತಃ ತಪ್ಪು ಮಾಡದಿದ್ದರೂ, ತನ್ನ ಗಂಡನ ಒತ್ತಡಕ್ಕೆ ಮಣಿದು ಬಾಬಾ ಸೇವೆ ಮಾಡಲು ಒಪ್ಪಿದಳೇ ವಿನಃ ತನ್ನದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುತ್ತಾಳೆ. ಚೇಳು ಕಥೆಯಲ್ಲಿ ಚೇಳು ಬಳ್ಳಾರಿ ಜಿಲ್ಲೆಯ ವಾತಾವರಣಕ್ಕೆ ಎಲ್ಲೆಂದರಲ್ಲಿ ಕಾಣುತ್ತದೆ. ಅದು ಸ್ಥಳೀಯತೆಯ ಚಿತ್ರಣ ನೀಡಿದರೆ ಇಲ್ಲಿ ವೆಂಕಮ್ಮನು ಸಹ ತನ್ನ ನೆಲೆಯ ಹುಡುಕಾಟದಲ್ಲಿ ದೆಸೆಗಾಣದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಚೇಳಿಗೆ ಬಾಲದಲ್ಲಿ ವಿಷ ತುಂಬಿದ್ದರೆ ಇಲ್ಲಿ ಮನುಷ್ಯನಿಗೆ ಅವನ ಬುದ್ಧಿಗೆ ವಿಷ ತುಂಬಿದೆ.

ಕ್ಷಿತಿಜ ಹಿಡಿಯ ಹೊರಟವರು:

ಚೇಳು ಕಥಾ ಸಂಕಲನದ ಮತ್ತೊಂದು ಕಥೆ ಕ್ಷಿತಿಜ ಹಿಡಿಯ ಹೊರಟವರು. ಈ ಕಥೆಯ ಕೇಂದ್ರ ಬಿಂದು ಕ್ಷಿತಿಜ. ಈಕೆ ಲಕ್ಷಗಟ್ಟಲೆ ಹಣ ಸಂಪಾದಿಸುವ ಸಾಫ್ಟ್‌ವೇರ್ ಉದ್ಯೋಗಿ. ಆದರೆ, ಆಕೆಯ ಸದ್ಯದ ಸಮಸ್ಯೆಯನ್ನು ಕಥೆಯೂ ಚಿತ್ರಿಸುತ್ತದೆ. ಇಲ್ಲಿ ಸಾಫ್ಟ್‌ವೇರ್ ಕಂಪನಿಯಮ ಮೌಲ್ಯರಹಿತವಾದ ದಾಹ, ಇತರ ಕಂಪನಿಗಳ ಮೌಲ್ಯರಹಿತ ಸ್ಪರ್ಧೆ ಇಲ್ಲಿ ಎದ್ದು ಕಾಣುತ್ತದೆ. ಸ್ವತಃ ವಸುದೇಂದ್ರರವರು ಸುಮಾರು ವರ್ಷಗಳ ಕಾಲ ಸಾಫ್ಟ್‌ವೇರ್ ವಲಯದಲ್ಲಿ ದುಡಿದು, ಅಲ್ಲಿಯ ಹೊರ-ಒಳ ಮಗ್ಗಲುಗಳನ್ನು ಕಂಡವರು ಹಾಗೂ ಈ ಕಥೆಯಲ್ಲ ಇಂದಿನ ಆಧುನಿಕ ಜಗತ್ತು ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ನೀತಿಯಿಂದಾಗಿ ವ್ಯಕ್ತಿಗಳ ಖಾಸಗಿ ಬದುಕೆ ಇಂದು ಬರಡಾಗಿದೆ.

ಜಿ.ಎಸ್.ಶಿವರುದ್ರಪ್ಪನವರ "ಮುಂಬೈ ಜಾತಕ" ಪದ್ಯದಲ್ಲಿ ಹೇಗೆ ವ್ಯಕ್ತಿಗಳು ಅಥವಾ ಮನುಷ್ಯನ ಜೀವನ ಒಂದು ಯಾಂತ್ರೀಕೃತವಾದ ಬದುಕಾಗಿದೆ ಹಾಘೂ ಯಾವುದನ್ನು ಮೌಲ್ಯವೆಂದು ಒಪ್ಪಿಕೊಂಡು ಜೀವನ ನಡೆಸುತ್ತಿದೆವೋ ಅವೆಲ್ಲವೂ ನಗಣ್ಯ. ಜೀವನದಲ್ಲಿ ಕುಟುಂಬದೊಂದಿಗಿನ ನೆಮ್ಮದಿ-ಖುಷಿ, ಮುಖ್ಯವೆಂದು ಜೀವನವೆಂದು ತಿಳಿಯುವ ವೇಳೆಗಾಗಲೇ ಸಾಕಷ್ಟನ್ನು ಕಳೆದುಕೊಂಡಿರುತ್ತೇವೆ.

ಈ ಕಥೆಯು ಕಥಾನಾಯಕಿ ಕ್ಷಿತಿಜ ಖಾಸಗೀ ಕಂಪನಿಯೊಂದರ ಉದ್ಯೋಗಿ. ಇವರ ಅವಿರತ ಶ್ರಮದಿಂದ ಸಾಕಷ್ಟು, ಹೆಸರು ಖ್ಯಾತಿಯನ್ನು ಗಳಿಸಿದಂತವಳು. ಆದರೆ, ಸಂಪಾದನೆ ಅಥವಾ ದುಡಿಮೆ, ಐಷಾರಾಮಿ ಜೀವನ, ಏನು ಬೇಕೋ ಎಲ್ಲವನ್ನು ಪಡೆದಿದ್ದಳು. ಆದರೆ, ನೆಮ್ಮದಿಯ ಹೊರತಾಗಿ, ನಗರ ಪ್ರತಿ ಸಾಫ್ಟ್‌ವೇರ್ ಕಂಪನಿಯ ಸಮಸ್ಯೆಯನ್ನು ಪ್ರತಿನಿಧಿಸುವ ಪ್ರಾತಿನಿಧಿಕ ಕಥೆಯಾಗಿದೆ.

.2 ಪ್ರತಿ ಖಾಸಗೀ ಕಂಪನಿಯೂ ತನ್ನ ನೌಕರನಿಂದ ತನಗೆ ಏನು ಬೇಕೋ ಅದು ಸುಲಭವಾಗಿ ಕಬ್ಬಿನ ಸಿಪ್ಪೆಯ ರೀತಿಯಲ್ಲಿ ಅವರಿಂದ ಎಲ್ಲವನ್ನು ಪಡೆದು ನಂತರ ಯಾವುದಾದರೂ ಸಣ್ಣಪುಟ್ಟ ಕಾರಣ ತೆಗೆದು ಕಂಪನಿಯಿಂದ ಹೊರ ಹಾಕುವುದು. ಇದು ಮುಂದುವರೆದ ರಾಷ್ಟ್ರಗಳಲ್ಲಿನ ಕಂಪನಿಗಳ ಮುಖ್ಯ ತೊಡಕು...... ಇಲ್ಲಿ ಕ್ಷಿತಿಜನೂ ಸಹ ಅನೇಕ ವರ್ಷಗಳ ದುಡಿಮೆ ಸಂಬಳ ವಿನಃ ಬೇರೇನೂ ಪಡೆದವಳಲ್ಲ. ಆದರೆ, ಜೀವನದಲ್ಲಿ ಎಲ್ಲವೂ ಇದೇ ನೆಮ್ಮದಿಯ ಜೀವನ ಹಾಗೂ ಮುಂದಿನ ವಂಶದ ವಾರಸ್ದಾರ ಅಥವಾ ಮಕ್ಕಳಿಲ್ಲದಿರುವುದು.2 ಗಂಡ-ಹೆಂಡಿಯರಿಬ್ಬರಿಗೂ ಬಹಳ

ದೊಡ್ಡ ಸಮಸ್ಯೆ. ಇದರಿಂದಾಗಿ ತನ್ನ ಕೆಲಸಕಾರ್ಯಗಳಿಂದಲೂ ಸರಿಯಾಗಿ ನಿರ್ವಹಿಸಲು ಸಾಧ್ಯವಾಗದೇ ವಿಮುಖಳಾಗುವ ಕ್ರಿಯೆ. ಹಾಗೂ ಆಕೆ ಮನಸ್ಸಿ ತೊಳಲಾಟವನ್ನು ಕಾಣಬಹುದು. ಎಷ್ಟೋ ಬಾರಿ ಅವಳ ಮನಸ್ಸಿನ ಅಂತರಾಳದಲ್ಲಿ ತಾನೊಬ್ಬ ಈಜುಪಟುವಾಗಿದ್ದು, ಬೆಳಿಗ್ಗೆ ಎಂಟಕ್ಕೊ ಮನೆ ಬಿಟ್ಟು ರಾತ್ರಿ ಹತ್ತರ ನಂತರವೇ ಸೇರುವ ಈ ದಿನಚರಿಯಲ್ಲಿ ಈಜುಕೊಳ ಕಣ್ಣಿಗೆ ಕಾಣುವುದೇ ಇಲ್ಲ. .2 ದಿನವೂ ತಪ್ಪದೇ ಈಜಾಡಿದರೆ ಆಕಾಶ ಕಳಚಿ ಬಿದ್ದರೂ ಎಚ್ಚರವಾಗುವಂತಹ ನಿದ್ದೆ ಮಾಡಬಹುದೆಂಬ ಸತ್ಯ ಕ್ಷಿತಿಗೆ ಗೊತ್ತು. ಆದರೆ, ಅತ್ಯಂತ ದುಬಾರಿಯಾದ ಸಮಯವನ್ನು ಕೊಳ್ಳುವ ಶಕ್ತಿ ಅವಳ ಇಪ್ಪತ್ತೈದು ಲಕ್ಷದ ಸಂಬಳಕ್ಕೆ ಇಲ್ಲ. ಸಾರ್ವಜನಿಕ ಈಜುಕೊಳಕ್ಕೆ ಹೋದರೆ ಚರ್ಮರೋಗ ಬರಬಹುದೆಂಬ ಅಂಜಿಕೆಯಲ್ಲಿ ನಲವತ್ತು ಲಕ್ಷ ಕೊಟ್ಟು ಈಜು ಕೊಳವಿರುವ ಈ ಅಪಾರ್ಟ್‌ಮೆಂಟ್ ಖರೀದಿಸಿದರೂ ಈಜಾಟ ಕೈಗೆ ಸಿಗುತ್ತಿಲ್ಲ. ಇಲ್ಲಿ ಹಣದ ಹಿಂದೆ ಬಿದ್ದ ಜೀವನ, ಸಮಯ, ನಿದ್ದೆ, ನೆಮ್ಮದಿ ಎಲ್ಲವನ್ನೂ ಕಸಿದುಕೊಂಡಂತಾಗಿದೆ.2

"ಸಾರ್, ನೋಡ್ತಾ ಇರಿ, ನನಗೆ ಅಪಘಾತವಾಗಿರೋದು ಕೈಗೆ ಹೊರತು, ಮಿದುಳಿಗಲ್ಲ. ಸಾಫ್ಟ್‌ವೇರ್‌ನಲ್ಲಿ ಕೆಲಸ ಮಾಡಲು ಬೇಕಿರೋದು ಮಿದುಳೇ ಹೊರತು ಕೈಗಳಲ್ಲ. ಬೆಂಗಳೂರಿನ ಸಾವಿರಾರು ಕಂಪನಿಗಳಲ್ಲಿ ಒಂದಾದರೂ ಕಂಪನಿಗೆ ಈ ಸಾಮಾನ್ಯ ತಿಳುವಳಿಕೆ ಇರುತ್ತೆ ಅಂತ ನನ್ನ ನಂಬಿಕೆ, ಆ ಒಂದು ಕಂಪನಿಗಾಗಿ ನಾನು ಹುಡುಕುತ್ತೇನೆ, ಸಿಕ್ಕೇ ಸಿಗುತ್ತೇ" ಎಂದು ಆತ್ಮವಿಶ್ವಾಸದ ಮಾತನಾಡಿದ" ರಾಜುವಿಗೆ ಅವನ ಮಾತುಗಳೇ ಇಷ್ಟವಾದವು.

ಈ ಕಥೆಯಲ್ಲಿ ಬದುಕಿನ ದ್ವಂದ್ವತೆಯ ನಡುವಿನ ಸುತ್ತ ಜೀವನ ಕಂಡುಕೊಳ್ಳುವಲ್ಲಿ ಯತ್ನಿಸಿದರೂ ಅದು ಇನ್ನಷ್ಟು ಕೈಗೆ ಎಟುಕದೆ ದೂರ ಸರಿದು ಹೋಗುತ್ತಿದೆ. ಒಂದು ರೀತಿಯ ಮರೀಚಿಕೆಯ ಹಾದಿಯನ್ನು ಹಿಡಿದಂತೆ ಕಾಣುತ್ತದೆ.

ಶ್ರೀದೇವಿ ಮಹಾತ್ಮೆ:

ವಸುಧೇಂದ್ರರವರು ಈ ಕಥೆಯ ಮೂಲಕ ತಮ್ಮ ಸ್ವ-ಅನುಭವವನ್ನು ಹೇಳಿಕೊಳ್ಳುತ್ತಾ ತಮ್ಮ ಅನುಭವದ ಅಂತರಾಳದಲ್ಲಿ ನೆನಪಿನಲ್ಲಿ ಉಳಿದ ಶ್ರೀದೇವಿ ಎಂಬ ಹುಡುಗಿಯ ಪರಿಚಯ ಮಾಡಿಸುತ್ತಾರೆ. ಈ ಕಥೆಯು ಕಥಾನಾಯಕ ಶ್ರೀದೇವಿ. ಈಗೆ ಕೆಲಸವನ್ನು ಹರಸುತ್ತಾ ಬೆಂಗಳೂರಿನ ಪಟ್ಟಣಕ್ಕೆ ತನ್ನ ಅತ್ತೆಯ ಮನೆಗೆ ಬಂದವಳು ತನ್ನ ಮನೆಯ ಬಡತನ, ಮಳೆ-ಬೆಳೆಯಾಗದೆ ನಷ್ಟ ಅನುಭವಿಸುತ್ತಿದ್ದರಿಂದ ಮನೆಕೆಲಸಕ್ಕೆಂದು ಪಟ್ಟಣಕ್ಕೆ ಬಂದಿದ್ದಳು. ಕಥೆಯಲ್ಲಿ ಈ ಮುಗ್ಧ ಹುಡುಗಿಯ ಚಿತ್ರಣ ಎಂತಹ ಓದುಗರನ್ನು ಸೆರೆ ಹಿಡಿಯುವಂತಹದು. ನಗರದ ದೊಡ್ಡ ದೊಡ್ಡ ಮಹಡಿಯಲ್ಲಿ

ವಿಳಾಸ ಮಾಡುವ ಮನಸ್ಸು. ಕೆಲವು ಬಾರಿ ಸಣ್ಣವರಾಗಿ ವರ್ತಿಸುವ ಜನರ ನಡುವೆ ಎಲ್ಲೋ ಒಂದೆರಡು ಹೃದಯ ಶ್ರೀಮಂತಿಕೆಯುಳ್ಳ ಮನಸ್ಸುಗಳು ಕಡಿಮೆ ಎನ್ನಬಹುದು. ನಗರೀಕರಣ, ಖಾಸಗೀಕರಣದ ಬದುಕು ಜನರನ್ನು ಅಥವಾ ವ್ಯಕ್ತಿಗಳ ಖಾಸಗೀತನವನ್ನು ಕಸಿದುಕೊಂಡಿದೆ. ಕೊಳ್ಳುಬಾಕ ಸಂಸ್ಕೃತಿ ಕೆಲವೊಮ್ಮೆ ನಮ್ಮನ್ನು ಸಾಕಷ್ಟು ಆವರಿಸಿಕೊಂಡು ಕಟುಕರ ರೀತಿಯಲ್ಲಿ ವರ್ತಿಸುವಂತೆ ಮಾರ್ಪಡಿಸುತ್ತದೆ.

.3 "ಇಲ್ಲಿಯೂ ಸಹ ಶ್ರೀದೇವಿ ಲೇಖಕರ ಮನೆಗೆ ಜ್ವರವಿದ್ದ ಕಾರಣ ಕೆಲಸಕ್ಕೆ ಗೈರು ಹಾಜರಾಗಿದ್ದಳು ಹಾಗೂ ಲೇಖಕರ ಅಪಾರ್ಟ್‌ಮೆಂಟ್ ಬಳಿಯೇ ಇದ್ದ ಶ್ರೀದೇವಿಯ ಮನೆಯ ಬಳಿ ನೀರಿನ ಅಭಾವವಿದೆ ಎಂಬುದು ಅಚ್ಚರಿಯ ಸಂಗತಿಯಾಗಿದೆ. ಹಾಗಾಗಿ 2 ಕೊಡ ನೀರನ್ನು ಕೊಡಲು ಲೇಖಕರು ಮುಂದಾದರು. ಅಪಾರ್ಟ್‌ಮೆಂಟ್‌ನ ಕಾವಲುಗಾರ ಅದನ್ನು ಕೊಡಲು ನಿರಾಕರಿಸಿದ್ದು ಲೇಖಕಕರಿಗೆ ಅಸಮಾಧಾನವನ್ನುಂಟು ಮಾಡಿತು. .3

ಕೆಲವೊಮ್ಮೆ ಈ ಕಥೆಯಲ್ಲಿ ಮನುಷ್ಯ ಮನುಷ್ಯರ ನಡುವಿನ ನಿಯಮಾವಳಿಗಳು ಹಲವು ಬಾರಿ ಅವನಿಗೆ ಸಂಕೋಲೆಗಳಾಗ ಬಂದಾಗ ಉತ್ತರಿಸಲಾಗದ ಸ್ಥಿತಿಯನ್ನು ಆತ ತಲುಪುತ್ತಾನೆ. ಶ್ರೀದೇವಿಯ ಹುಡುಗಿಯ ಕೆಲವು ಸಣ್ಣ-ಪುಟ್ಟ ಆಸೆಗಳು ಲೇಖಕರಿಗೆ ಆಶ್ಚರ್ಯವನ್ನುಂಟು ಮಾಡಿದರು. ಇನ್ನೊಂದು ಕಥೆಯಲ್ಲಿ ಮನಸ್ಸಿನಾಳದಲ್ಲಿ ನಿಗೂಢತೆಯನ್ನು ಹುಟ್ಟು ಹಾಕಿದವು ಹಾಗೂ ಪ್ರೀತಿ, ಪ್ರೇಮ, ಸ್ನೇಹಗಳು, ಧರ್ಮ, ಜಾತಿ ಎಲ್ಲ ಮಿತಿಗಳನ್ನು ಮೀರಿ ಬೆಳೆದಿರುವಂತಹದ್ದು ಅಥವಾ ಬೆಳೆಯಬೇಕು ಎಂಬ ಸಂದೇಶವನ್ನು ಇಲ್ಲಿ ಯೋವನ್ ಎಂಬ ಕ್ರಿಶ್ಚಿಯನ್ ಹುಡುಗನೊಂದಿಗೆ ನಿಶ್ಚಯವಾದ ಮದುವೆ ಸಂಬಂಧದ ಮೂಲಕ ಅನಾವರಣವಾಗುತ್ತದೆ. ಈ ಕಥೆಯಲ್ಲಿ ಅಂತಹ ಒಳವಿಚಾರಗಳು ಇಲ್ಲದಿದ್ದರೂ, ಕೆಲವು ಸಣ್ಣ ಸಣ್ಣ ಅಂಶಗಳು ಮನಕಲಕುವ ಚಿತ್ರಣವನ್ನು ತೋರುತ್ತದೆ. ಆದರೂ ಲೇಖಕರಲ್ಲಿ ಶ್ರೀದೇವಿಯೂ ನಿಗೂಢವಾಗಿಯೇ ಉಳಿಯುತ್ತಾಳೆ ಎಂಬುದು ಗಮನಿಸಬೇಕಾದ ಅಂಶವಾಗಿದೆ.

ಅಡಿಟಿಪ್ಪಣಿ:

1. ವಸುಧೇಂದ್ರ : ಚೇಳು (ಕಥಾ ಸಂಕಲನ) ಛಂದ ಪುಸ್ತಕ ಪ್ರಕಾಶನ ಮುದ್ರಣ 2010, ಚೇಳು ಕಥೆ
2. ಕ್ಷಿತಿಜ ಹಿಡಿಯ ಹೊರಟವರು ಕಥೆ: ಪುಟ ಸಂಖ್ಯೆ– 29,30
3. ಶ್ರೀದೇವಿ ಮಹತ್ಮೆ : ಪುಟ ಸಂಖ್ಯೆ–95

ಹಂಪಿ ಎಕ್ಸ್‌ಪ್ರೆಸ್:

ಕೆಂಪುಗಿಣಿ

ವಸುದೇಂದ್ರರ 'ಕೆಂಪುಗಿಣಿ' ಕಥೆಯಲ್ಲಿ ಬರುವ ಪಾತ್ರಗಳು ಹಲವಾರು ಆತಂಕಗಳ ನಡುವೆಯೇ ಸಮಸ್ಯೆಗಳೀಗೆ ಮುಖಾಮುಖಿಯಾಗುವ ಪಾತ್ರಗಳಾಗಿವೆ. ಆದರೆ, ಎಲ್ಲಾ ಪಾತ್ರಗಳು ಸಮಸ್ಯೆಗಳನ್ನು ಸಮರ್ಪಕವಾಗಿ ಎದುರಿಸುವ ಪಾತ್ರಗಳಲ್ಲಿ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡು ಜೀವಪರ ಕಾಳಜಿಗಳಿಗೆ ವಿಮುಖವಾಗುವ ಪಾತ್ರಗಳಾಗಿ ಚಿತ್ರಿತವಾಗಿವೆ.

'ಕೆಂಪುಗಿಣಿ' ಕಥೆಯ ನಿರೂಪಕನು ದೇಸೀಪ್ರಜ್ಞೆಗೆ ದೂರವಾಗಿ ಉನ್ನತ ಶಿಕ್ಷಣ ಪಡೆದು ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿ ನಗರೀಕರಣಕ್ಕೆ ಹೊಂದಿಕೊಳ್ಳುವ ಪಾತ್ರವಾಗಿ ಹಾಗೂ ಹಳ್ಳಿಯಲ್ಲಾಗುವ ಎಲ್ಲಾ ಭೌತಿಕ ಪಲ್ಲಟಗಳಿಗೆ ಆತಂಕಪಡುವ ಪಾತ್ರವಾಗಿ ಚಿತ್ರಿತವಾದರೆ, ನಿರೂಪಕನ ತಾಯಿ ಪಾತ್ರವೂ ಶಿಕ್ಷಿತಳಾಗಿದ್ದರೂ ಅಡುಗೆ ಮನೆಗೆ ಸೀಮಿತಳಾಗುವ ಹಾಗೂ ಸಂಪ್ರದಾಯಗಳನ್ನು ಪಾಲಿಸುವ ಮಹಿಳೆಯಾಗಿ ಕಂಡುಬರುತ್ತಾಳೆ. ನಿರೂಪಕನ ತಂದೆಯು ಹೊಂದಿದ್ದ ಭೂಮಿಯ ಬಗೆಗಿನ ನಿರ್ಲಕ್ಷ್ಯ ಧೋರಣೆಯ ಫಲವಾಗಿ ಖಾಸಗಿ ಕಂಪನಿಯಲ್ಲಿ ಗುಮಾಸ್ತನಾಗಿ, ಕೊನೆಗೆ ಭೂಮಿಯನ್ನೇ ಮಾರುವ ಸ್ಥಿತಿಗೆ ತಲುಪುತ್ತಾನೆ.

ಇನ್ನು ತಳವರ್ಗದ ಪಾತ್ರವಾದ ಈರಪ್ಪನು ನಿರೂಪಕನ ಕುಟುಂಬದ ನೆರಳಿನಲ್ಲಿ ಜೀವನ ಸಾಗಿಸುವ ಹಾಗೂ ಅದರ ಆಜ್ಞೆಗಳನ್ನು ಪಾಲಿಸುವ ಪಾತ್ರವಾಗಿದ್ದು, ದೇಸೀತನದ ಪ್ರತೀಕದಂತೆ ಚಿತ್ರಿತವಾಗಿದ್ದಾನೆ. ಇವರ ಮಗ ಕುಮಾರಸ್ವಾಮಿಯು ತಕ್ಕಮಟ್ಟಿನ ಶಿಕ್ಷಿತನಾಗಿ ಅಲ್ಪ ಪ್ರತಿಭಟನಾಕಾರನಾದರೂ ಒತ್ತಡಕ್ಕೆ ಮಣಿದು ಕೊನೆಗೆ ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿ ತನ್ನತನವನ್ನೇ ಕಳೆದುಕೊಳ್ಳುವ ಪಾತ್ರವಾಗಿ ಚಿತ್ರಿತನಾಗಿದ್ದಾನೆ. ಇನ್ನು ಕೆಂಪುಗಿಣಿ ಕಥೆಯ ಮುಖ್ಯಪಾತ್ರವಾದ ಗಿಣಿಯ ಭೌತಿಕ ಬದಲಾವಣೆಯನ್ನೇ ಕೇಂದ್ರವಾಗಿಟ್ಟುಕೊಂಡು ಉಳಿದ ಘಟನೆಗಳನ್ನು ಪಾತ್ರಗಳೊಂದಿಗೆ ಬೆಸೆದು ಕಥೆಯನ್ನು ಹೆಣೆದಿದ್ದಾರೆ.

ವಸುದೇಂದ್ರರ 'ಕೆಂಪುಗಿಣಿ' ಕಥೆಯಲ್ಲಿ ಬರುವ ಸ್ತ್ರೀಪಾತ್ರಗಳು ಪುರುಷ ಪ್ರಾಧಾನ್ಯತೆಯಲ್ಲಿ ನೆಲೆ ಕಂಡುಕೊಳ್ಳುವ ಪಾತ್ರಗಳಾಗಿವೆ. 'ಕೆಂಪುಗಿಣಿ' ಇತ್ತೀಚೆಗೆ ರಚನೆಯಾದ ಕಥೆಯಾದರೂ, ಸ್ತ್ರೀಯನ್ನು ಸೀಮಿತ ಪರಿಧಿಯೊಳಗೆ ಬಂಧಿಸಿಟ್ಟು ಅವಳ ಸ್ವಾತಂತ್ರ್ಯವನ್ನು ಕಸಿದು ನಾಲ್ಕುಗೋಡೆಗಳ ಮಧ್ಯೆಯೇ ಜೀವನ ಸವೆಸುವಂತಹ ಪಾತ್ರಗಳಾಗಿ ಚಿತ್ರಿಸಿರುವುದು ಸಂಕುಚಿತವಾಗಿದೆ. ಇಲ್ಲಿ ನಿರೂಪಕನ ತಾಯಿ ತಕ್ಕಮಟ್ಟಿನ ವಿದ್ಯೆ ಕಲಿತಿರುವವಳಾದರೂ ಸಮಾಜಕ್ಕೆ ಬೇಗ ತೆರೆದುಕೊಳ್ಳಲಾರಳು.

ಮಾಧ್ವ ಸಂಪ್ರದಾಯದ ವಕ್ತಾರಳಂತೆ ಆಚರಣೆಗಳನ್ನು ಜತನವಾಗಿ ಕಾಪಾಡಿಕೊಂಡು ಬರುವ ಪಾತ್ರವಾಗಿ ಕಾಣಿಸುತ್ತಾಳೆ. ಹಾಗೆಯೇ ಸ್ತ್ರೀಯು ಅಡುಗೆ ಮನೆಗೆ ಸೀಮಿತಳಾಗಿರಬೇಕೆಂಬಂತೆ ವರ್ತಿಸುತ್ತಾಳೆ. ತನ್ನ ಗಂಡನಿಗೆ ಮಕ್ಕಳನ್ನು ಹೊರಗಿನ ಸಮಾಜಕ್ಕೆ ಪರಿಚಯಿಸಬೇಕಾದದ್ದು, ಗಂಡಸಿನ ಕೆಲಸ ಎಂದು ಮಾತನಾಡುವುದರ ಮೂಲಕ ತನ್ನ ಸ್ಥಾನವನ್ನು ತಾನೇ ನಿರ್ಧರಿಸಿಕೊಳ್ಳುತ್ತಾಳೆ. ಪ್ರೀತಿ, ಮಮತೆ, ಕರುಣೆ, ಕುಟುಂಬ ನಿರ್ವಹಣೆಗೆ ತಾಯಿಯನ್ನು ಸಂಕೇತಿಸುವ ವಸುದೇಂದ್ರರು ಉಳಿದ ಸಂಗತಿಗಳಲ್ಲಿ ಸ್ತ್ರೀಯನ್ನು ಗೈರು ಹಾಜರಿಗೊಳಿಸುತ್ತಾರೆ. ಮಹಿಳೆಗೆ ಉನ್ನತ ಶಿಕ್ಷಣವೆಂಬುದು ಮರೀಚಿಕೆಯಾಗಿ ಅವಳ ವಿವಾಹಕ್ಕೆ ಹೆಚ್ಚು ಒತ್ತುಕೊಡುವ ಪುರುಷ ಪ್ರಾಧಾನ್ಯ ಸಮಾಜವನ್ನು ಕಾಣಬಹುದು. ಇಲ್ಲಿನ ಮೇಲ್ವರ್ಗದ ಮಹಿಳೆ ಹೊರಗೆ ಹೋಗಿ ದುಡಿಯಲಾರದವಳು. ಕೆಳವರ್ಗದವರನ್ನು ಶಪಿಸುವಷ್ಟು ಶಕ್ತಳಾಗಿದ್ದಾಳೆ. ಆದರೆ ಕೆಳವರ್ಗದ ಮಹಿಳೆಯು ಹೊರಗೆ ಹೋಗಿ ದುಡಿಯಬಲ್ಲಳು.

ಈ ಕಥೆಯಲ್ಲಿ ಶಿಷ್ಟ ಹಾಗೂ ಅಲ್ಲಲ್ಲಿ, ಬಳ್ಳಾರಿ ಕನ್ನಡವನ್ನು, ಇಂಗ್ಲೀಷ್ ಭಾಷೆಯನ್ನು ಮತ್ತು ಉರ್ದು ಭಾಷಿಕ ಪದಗಳ ಬಳಕೆ ಮಾಡಿರುವುದು ವಿಶೇಷವಾಗಿದೆ. ಸಂಬಂಧಗಳನ್ನು ಹಾಗೂ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಚಿತ್ರಿಸುವ ಸಂದರ್ಭದಲ್ಲಿ ಬಳ್ಳಾರಿಯ ಕನ್ನಡವನ್ನು, ನಗರೀಕರಣ ಚಿತ್ರಣದ ಸಂದರ್ಭದಲ್ಲಿ ಇಂಗ್ಲೀಷ್ ಭಾಷೆ ಬಳಸಿರುವುದನ್ನು ಕಾಣಬಹುದು. ಒಂದೊಂದು ಘಟನೆಗಳನ್ನು ವಿವರಣಾತ್ಮಕವಾಗಿ ನಿರೂಪಿಸಿರುವುದು ಇಲ್ಲಿನ ವಿಶೇಷವಾಗಿದೆ. ಜೊತೆಗೆ ಪಾತ್ರಗಳ ಸ್ವಭಾವವನ್ನು ಸಂಪೂರ್ಣವಾಗಿ ತೆರೆದಿಡುವ ಪ್ರಯತ್ನ ಮಾಡುತ್ತಾರೆ. ಕೆಂಪುಗಿಣಿ ಕಥೆಯಲ್ಲಿ ಬರುವ ಪ್ರಮುಖ ಪಾತ್ರವಾದ ಗಿಣಿಯು ಯಂತ್ರನಾಗರೀಕತೆಗೆ ಒಳಗಾಗಿ ತನ್ನ ಮೂಲ ತನವನ್ನೇ ಕಳೆದುಕೊಂಡು ಜಾಗತೀಕರಣದ ಕ್ರಾಂತಿಗೆ ಒಳಗಾಗುವ ಪಾತ್ರವಾಗಿ ಚಿತ್ರಿಸಿದ್ದಾರೆ. "ಕೆಂಧೂಳಿ" ಕಥೆಯಲ್ಲಿ ವಿಷ್ಣುವಿನ ಸಾವನ್ನು ಕೇಂದ್ರವಸ್ತುವನ್ನಾಗಿಸಿಕೊಂಡು ಅದರ ಸುತ್ತ ಘಟಿಸುವ ಘಟನೆಗಳನ್ನು ಬೇರೆ ಬೇರೆ ಪಾತ್ರಗಳ ಮೂಲಕ ಚಿತ್ರಿಸಿದ್ದಾರೆ.

ಜಾಗತೀಕರಣದ ಕೆನ್ನಾಲಿಗೆ ನಗರಕ್ಕಷ್ಟೇ ಸೀಮಿತವಾಗಿರದೆ ಹಳ್ಳಿಗಳಿಗೂ ಚಾಚಿಕೊಂಡಾಗ ಗ್ರಾಮೀಣ ಬದುಕಿನಲ್ಲಾಗುವ ಸ್ಥಿತ್ಯಂತರಗಳನ್ನು ಹಾಗೂ ಗ್ರಾಮೀಣ ಬದುಕಿಗೆ ವಿಮುಖವಾದಾಗ ಕಾಡುವ ಅನಾಥಪ್ರಜ್ಞೆಯನ್ನು ಬಹಳ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಪ್ರಕೃತಿಯ ಮಡಿಲೊಳಗೆ ಮನುಷ್ಯನ ಮುಖಗಳು ವಿಕೃತಗೊಂಡಾಗ ನಿಸರ್ಗದ ಪಲ್ಲಟಗಳನ್ನು ಕೆಂಪುಗಿಣಿ ಕಥೆಯಲ್ಲಿ ಪರಿಣಾಮಕಾರಿಯಾಗಿ ಒಡಮೂಡಿಸಿದ್ದಾರೆ.

ಜಾಗತೀಕರಣದ ಮೂಲಬೇರು ಶಿಕ್ಷಣ ಮತ್ತು ಯಂತ್ರಗಳಲ್ಲಡಗಿದೆ ಎಂಬುದನ್ನು ಸೂಚ್ಯವಾಗಿ ಚಿತ್ರಿಸುವ ವಸುದೇಂದ್ರರು ಕೆಂಪುಗಿಣಿ ಕಥೆಯಲ್ಲಿನ ಪಾತ್ರಗಳು ಶಿಕ್ಷಣ ಪಡೆದ ಮೇಲೆ ವ್ಯವಸಾಯಕ್ಕೆ ವಿಮುಖರಾಗುವುದು ಸಹಜವಾಗಿದ್ದು, ಕ್ರಮೇಣ ಮದುವೆಯ ಕಾರಣಕ್ಕೆ ಭೂಮಿಯನ್ನು ಮಾರುವುದು ಕೌಟುಂಬಿಕ ಒತ್ತಡವಾದರೂ ಭೂಮಿಯ ಬಗೆಗೆ ನಿರೂಪಕನ ಕುಟುಂಬದಲ್ಲಿನ ನಿರ್ಲಕ್ಷ್ಯ ಧೋರಣೆಯನ್ನು ಜಾಗತೀಕರಣ ಪ್ರಭಾವದ ಸೂಕ್ಷ್ಮ ಎಳೆಯಾಗಿ ಗ್ರಹಿಸಬಹುದು. ನಂತರ ಇಲ್ಲಿನ ಶಿಕ್ಷಣ ಪಡೆದ ಪಾತ್ರಗಳು ದೇಸೀತನವನ್ನು ಸಂಪೂರ್ಣವಾಗಿ ಮರೆತಂತಿರುವ ಪಾತ್ರಗಳಾಗಿ ಕಾಣುತ್ತವೆ.

ಸ್ವಂತ ಭೂಮಿಯನ್ನೇ ಹುಡುಕಲು ಹರಸಾಹಸ ಪಡುವ ನಿರೂಪಕನ ಕುಟುಂಬದ ಸ್ಥಿತಿ ಆಸ್ಮಿತೆಗಾಗಿ ಹುಡುಕಾಟ ನಡೆಸುವ ಆಧುನಿಕ ಕುಟುಂಬದಂತೆ ಕಾಣಿಸುತ್ತದೆ. ಜೊತೆಗೆ ವ್ಯವಸಾಯ ಮಾಡುವ ಸಣ್ಣ ಪ್ರಯತ್ನವನ್ನು ಮಾಡದೆ ವ್ಯವಸಾಯದಿಂದ ವಿಮುಖರಾಗುವಲ್ಲಿ ಆಸ್ಥೆಯನ್ನು ತೋರಿಸುವುದು ಜಾಗತೀಕರಣದ ಪ್ರಭಾವಕ್ಕೊಳಗಾದ ಮನಸ್ಸನ್ನು ಪ್ರತಿಬಿಂಬಿಸುತ್ತದೆ. ಹಳ್ಳಿಯ ಎಲ್ಲಾ ಆಸ್ತಿಯನ್ನು ಬಿಕರಿ ಮಾಡಿ ನಗರದಲ್ಲಿ ಮನೆಕೊಂಡುಕೊಳ್ಳುವ ನಿರೂಪಕ ಸಂಪೂರ್ಣವಾಗಿ ನಗರೀಕರಣಕ್ಕೆ ಹೊಂದುಕೊಳ್ಳುತ್ತಾನೆ. ಇತ್ತ ಹಳ್ಳಿಯು ಯಂತ್ರನಾಗರೀಕತೆಯನ್ನು ಮೈಗೂಡಿಸಿಕೊಂಡು ಸ್ವಂತಿಕೆಯನ್ನು ಕಳೆದುಕೊಂಡ ನವಗ್ರಾಮಗಳಾಗಿರುತ್ತವೆ. ಯಂತ್ರನಾಗರೀಕತೆಯನ್ನು ಆವಹಿಸಿಕೊಂಡ ಹಳ್ಳಿಯ ವಾತಾವರವು ಹದಗೆಟ್ಟ ಹಲವು ವಿಸ್ಮಯಗಳಿಗೆ ಸಾಕ್ಷಿಯಾಗುತ್ತದೆ. ಅದರಲ್ಲಿ ಹಸಿರು ಬಣ್ಣದ ಗಿಣಿಗಳು ಕೆಂಪುಬಣ್ಣಕ್ಕೆ ತಿರುಗುವುದು, ಕೆರೆಗಳು ನಾಶವಾಗುವುದೆ, ಕೆಂಪುಬಣ್ಣದಿಂದ ಕೂಡಿದ ಮಳೆನೀರು, ಗಿಣಿಯು ಹಾಕುವ ಹಿಕ್ಕೆಯೂ ಕೆಂಪಾಗಿರುವುದು ಇಂತಹ ಹಲವು ವಿಸ್ಮಯಗಳಿಗೆ ಸಾಕ್ಷಿಯಾಗಿರುತ್ತದೆ. ಉನ್ನತ ಶಿಕ್ಷಣ ಪಡೆಯಲಾರದ ಕುಮಾರಸ್ವಾಮಿಯು ಜೀವನಕ್ಕಾಗಿ ಗಣಿಗಾರಿಕೆಯಲ್ಲಿ ಯಂತ್ರ ನಡೆಸುವ ಕೆಲಸ ಮಾಡುವುದು ಜಾಗತೀಕರಣ ಪ್ರಭಾವದ ನೆಲೆಯಾಗಿ ನಮಗೆ ಗೋಚರಿಸುತ್ತದೆ. ಕುಮಾರಸ್ವಾಮಿ ತಾಯಿಯು ನೋಡುವ ಕಲರ್ ಟಿ.ವಿ.ಯು. ಜಾಗತೀಕರಣದ ದೊಡ್ಡ ಸಂಕೇತವಾಗಿದೆ. ಜೊತೆಗೆ ಗಣಿ ಮಾಲೀಕರಿಗೆ ತಲೆಬಾಗುವ ಜನರ ಮನಸ್ಥಿತಿಯು ಪ್ರಭುತ್ವಕ್ಕೆ ತಲೆಬಾಗುವ ಅಸಹಾಯಕ ಸ್ಥಿತಿಯನ್ನು ಚಿತ್ರಿಸುತ್ತದೆ. ಇದಕ್ಕೆ ಜಾಗತೀಕರಣದ ಕೊಡುಗೆಯೇ ಅಪಾರವಾಗಿದೆ.

ಜಾಗತೀಕರಣದ ಪ್ರಭಾವ ಎಷ್ಟೇ ಗಾಢವಾಗಿದ್ದರೂ. ವರ್ಗಗಳ ನಡುವಿನ ತಾರತಮ್ಯದ ಬಗ್ಗೆ ಪ್ರಬಲವಾದ ತಕರಾರೆತ್ತಿಲ್ಲದಿರುವುದು ಜೀವವಿರೋಧಿ ನಿಲುವಾಗಿದೆ. ಜೊತೆಗೆ ಇಷ್ಟೆಲ್ಲಾ ಪಲ್ಲಟಗಳಿಗೆ ಕೆಂಪುಗಿಣಿ ಕಥೆಯ ನಿರೂಪಕ ಆತಂಕ, ಮರುಕಪಟ್ಟು ಪಲಾಯನವಾಗುತ್ತಾನೆಯೇ ಹೊರತು ಅದಕ್ಕೆ ಪರಿಹಾರ ಕಂಡುಕೊಳ್ಳುವ ಮನಸ್ಸು ಮಾಡದಿರುವುದು ಜಾಗತೀಕರಣಕ್ಕೆ ಒಗ್ಗಿಕೊಂಡ ಮನಸ್ಸು ಮರಳಿ ನಿಸರ್ಗದೆಡೆಗೆ ಬಾರದಿರುವುದನ್ನು ಸೂಚಿಸುತ್ತದೆ.

ಕೆಂಧೂಳಿ

ವಸುದೇಂದ್ರರ ಕೆಂಧೂಳಿ ಕಥೆಯಲ್ಲಿನ ನಿರೂಪಕನ ಚಿಕ್ಕಮ್ಮನ ಪಾತ್ರವು ಪುರುಷ ಪ್ರಾಧಾನ್ಯತೆಯನ್ನು ಧಿಕ್ಕರಿಸಲಾಗದ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡು ಜೀವನ ಸಾಗಿಸುವ ಸಾಮಾನ್ಯ ಮಹಿಳೆಯಾಗಿ ಕಾಣಸಿಗುತ್ತಾಳೆ. ಇಲ್ಲಿ ಬರುವ ಮುಸ್ಲಿಂ ಮಹಿಳೆ ಪಾತ್ರವು ಸಾಮಾಜಿಕ ಕಟ್ಟಳೆಗಳನ್ನು ಮೀರುವ ಪ್ರಯತ್ನ ಮಾಡಿದರೂ ವ್ಯವಸ್ಥೆ ಅವಳನ್ನು ಬಂಧಿಸಿಡುವ ಸೂಕ್ಷ್ಮ ಎಳೆಗಳು ಗೋಚರಿಸುತ್ತವೆ. ತನ್ನ ಆಸೆಯನ್ನು ಈಡೇರಿಸಿಕೊಳ್ಳುವಲ್ಲಿ ವಿಫಲಳಾಗುವ ಈ ಮಹಿಳೆಯು ಒಮ್ಮೆ ಸುಪ್ತ ಬಂಡಾಯಗಾರ್ತಿಯಾಗಿಯೂ ಮತ್ತೊಮ್ಮೆ ನಿರ್ದಾಕ್ಷಿಣ್ಯವಾಗಿ ಧಿಕ್ಕರಿಸುವವಳಾಗಿ ಕಾಣುತ್ತಾಳೆ. ಜೊತೆಗೆ ಮನುಷ್ಯತ್ವದ ನೆಲೆಯೊಳಗೆ ಪ್ರೀತಿ, ಬಾಂಧವ್ಯವನ್ನು ಬೆಸೆಯುವ ಪ್ರಯತ್ನ ಮಾಡುವವಳಾದರೂ ಪರಂಪರೆಯ ಮನಸ್ಸುಗಳು ಪೂರಕವಾಗಿಲ್ಲದರ ಪರಿಣಾಮ ವಿಫಲಳಾಗುತ್ತಾಳೆ. ಕಥೆಗಾರರು ಈ ಎಳೆಯನ್ನು ಚಿತ್ರಿಸುವುದರ ಮೂಲಕ ಸಮಾಜದ ಜಡತ್ವ ಮನಸ್ಸುಗಳನ್ನು ಅನಾವರಣಗೊಳಿಸಿದ್ದಾರೆ

ಯಂತ್ರಕ್ಕೆ ಒಗ್ಗಿಕೊಂಡ ಮನಸ್ಸು ಧಾವಂತದ ಬದುಕಿನಲ್ಲಿ ಸಂಬಂಧಗಳನ್ನೇ ಮರೆತು ಹೋಗುವ ಸಂಗತಿಗಳನ್ನು 'ಕೆಂಧೂಳಿ' ಕಥೆಯು ಬಿಚ್ಚಿಡುತ್ತದೆ. ಭಾವನೆಗಳು ಯಂತ್ರಗಳೊಳಗೆ ಇಳಿದಾಗ ಸಂಬಂಧಗಳ ನಡುವೆ ಅಂತರ ನಿರ್ಮಾಣವಾಗಿ ಕೃತಕ ಭಾವನೆಗಳೊಂದಿಗೆ ವ್ಯವಹರಿಸುವ ಅನಿವಾರ್ಯತೆ ಸೃಷ್ಟಿಯಾಗುತ್ತದೆ ಎಂಬುದನ್ನು ಕೆಂಧೂಳಿ ಕಥೆ ಸೂಚ್ಯವಾಗಿಸುತ್ತದೆ. ಕೆಂಧೂಳಿ ಕಥೆಯ ನಿರೂಪಕ ಶಿಕ್ಷಿತನಾದರೂ ಸಂಬಂಧಗಳು ಎದುರೊಡ್ಡುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾರ, ಬದಲಾಗಿ ವಿಮುಖನಾದರೆ ಹರ್ಷಿಸುತ್ತಾನೆ. ಹಾಗಾಗಿ ಶಿಕ್ಷಣ ಮತ್ತು ಯಂತ್ರಗಳು

ಸಂಬಂಧಗಳಿಗೆ, ಮಾನವೀಯತೆಗೆ ಬೆಲೆಕೊಡಲಾರದ ವ್ಯಕ್ತಿತ್ವವನ್ನು ನಿರ್ಮಾಣ ಮಾಡುವುದನ್ನು ಎರಡೂ ಕಥೆಗಳು ಕಟ್ಟಿಕೊಡುತ್ತವೆ.

ಸೀಳು ಲೋಟ

ವಸುಧೇಂದ್ರರವರ ಕತೆಗಳು ಮುಖ್ಯವಾಗಿ ಆಧುನಿಕತೆಯ ದಟ್ಟ ಪ್ರಭಾವಕ್ಕೆ ಒಳಗಾಗಿರುವ ಸಮಾಜದಲ್ಲಿ, ಪುರಾಣಗಳು, ನಂಬಿಕೆಗಳು, ಸಂಪ್ರದಾಯ ಆಚರಣೆಗಳು ಮರು ಹುಟ್ಟು ಪಡೆದುಕೊಳ್ಳಲು ಪ್ರಯತ್ನಿಸುತ್ತಿರುವ ವಿವಿಧ ಆಯಾಮಗಳನ್ನು ಒಳಗೊಂಡಿವೆ, ಜೊತೆಗೆ ಸಾಂಸಾರಿಕ ಬದುಕನ್ನು ಹೆಣ್ಣು ಪಾತ್ರಗಳೇ ನಿರ್ವಹಿಸುತ್ತಿರುತ್ತವೆ. 'ನಮ್ಮ ವಾಜಿನ್ನೂ ಆಟಕ್ಕೆ ಸೇರಿಸಿಕೊಳ್ರೋ' ಕತೆಯ ಕಮಲಕ್ಕ ಬ್ರಾಹ್ಮಣ ಸಮಾಜದಲ್ಲಿ ತನ್ನ ತೊನ್ನು ಮಗನನ್ನು ನೆಲೆ ನಿಲ್ಲಿಸುವ ಸಲುವಾಗಿ ಹೋರಾಡಿದರೆ, 'ಸೀಳೂ ಲೋಟದ' ರಮಾಬಾಯಿ ಶ್ರೀಮಂತ ಸಮುದಾಯದ ಎದುರು ತನ್ನ ಬಡ ಕುಟುಂಬವನನು ಆದರ್ಶ ನೆಲೆಯಲ್ಲಿ ಕಟ್ಟಲು ಯತ್ನಿಸುತ್ತಾಳೆ. ಕೌಟುಂಬಿಕ ಬದುಕಿನ ದಿನದ ಪ್ರಾರಂಭವನ್ನು ಹೇಳುವ ಮೂಲಕ ರಮಾಬಾಯಿಯ ಬಜಾರಿತನ ಗಟ್ಟಿತನವನ್ನು ನಿರೂಪಕ ಪರಿಚಯಿಸುತ್ತಾರೆ. ಸ್ತ್ರೀ ಕೇಂದ್ರವಾದ ಹುಲಿಕಂಟಿ ಜೀವನದಲ್ಲಿ ಕಟುಂಬದ ಪೂರ್ಣ ಜವಾಬ್ದಾರಿಯನ್ನು ಹೆಂಡತಿಗೆ ವಹಿಸಿ ಹುಲಿಕಂಟಿ ನಿಶ್ಚಿಂತನಾಗಿದ್ದರೂ, ಸದಾ ವಟಗುಡುವ ರಮಾಬಾಯಿ ಒಂದರಗಳಿಗೆ ನಿಶಬ್ಧವಾದಾಗ ಗಾಬರಿಯಾಗಿ ಒಳಗೆ ಇಣಿಕಿ ನೋಡಿ ಅವಳ ಇರುವಿಕೆಯಿಂದ ನೆಮ್ಮದಿ ಪಡುವವನು. ಮದುವೆಯೇ ಕನಸಾಗಿದ್ದ ಇವರೀರ್ವರ ಸಂಸಾರಕ್ಕೆ ರಮಾಬಾಯಿಯ ಹಲ್ಲುಬ್ಬಾಗಲಿ, ಹುಲಿಕುಂಟೆಯ ಗಿಡ್ಡತನವಾಗಲಿ ಕೊರತೆ ಎನಿಸದೆ ಬಡವರಾದರೂ ಮರ್ಯಾದೆಯಿಂದ ಬಾಳುವ ಆದರ್ಶಯುತ ದಂಪತಿಗಳಿವರು. ಇವರ ಮಗ ಗುರುರಾಜ ಈ ಕುಟುಂಬದ ಆದಾಯದ ಮೂಲ ಮುದ್ರಹಾಲಯದ ದಿನಗೂಲಿ ಸಂಬಳದ ಜೊತೆಗೆ ರಮಾಬಾಯಿಯ ಚಕ್ಕುಲಿ, ಕೋಡುಬಳೆಯ ವ್ಯಾಪಾರ.

ಸೀಳು ಲೋಟ ಕತೆಯು ಮಾರ್ಕ್ಸ್‌ಚಿಂತನೆಯ ವರ್ಗ ಸಂಘರ್ಷವನ್ನು ಪ್ರಭಾವಿಸುತ್ತದೆ. ರಮಾಬಾಯಿಯ ಬಡ ಕುಟುಂಬಕ್ಕೆ ವರದಣ್ಣನ ಶ್ರೀಮಂತ ಕುಟಂಬವನ್ನೂ, ಸರ್ಕಾರಿ ಕೆಲಸಕ್ಕಿಂತ ಖಾಸಗಿ ಸಂಸ್ಥೆಗಳು ಲಾಭದಾಯಕವಾದವೆಂದೂ, ಸ್ತ್ರೀ ಕೇಂದ್ರಗಳಾದ ರಮಾಬಾಯಿ, ಪದ್ಮಕ್ಕ, ವರದಣ್ಣನ ಹೆಂಡತಿ ಪಾತ್ರಗಳನ್ನು ಇಲ್ಲಿಯ ನಿರೂಪಕ ಮುಖಾಮುಖಿಯಾಗಿಸುತ್ತಾನೆ. ಚದುರಂಗರ 'ಬಣ್ಣದ ಗೊಂಬೆ' ಕತೆಯನ್ನು ಹೋಲುವ 'ಸೀಳು ಲೋಟ' ಕತೆಯು ಬಡವರ

ಅಸಹಾಯಕತೆಯನ್ನು ಆರ್ಥಿಕ ದುರ್ಬಲತೆ, ಅವಮಾನದ ಬದುಕನ್ನು ಹೇಳುವುದರ ಸರಿಸಮನಾಗಿಯೇ ಬಡವನ ಕುರಿತಾದ ವಿಧಿವಾದ ಕಲ್ಪನೆಯನ್ನು, 'ಬಡವನ ಕೋಪ ದವಡೆಗೆ ಮೂಲ' 'ಬಡವನ ಪರವಾಗಿ ದೇವರಿದ್ದಾನೆ' ಎಂಬ ಸಿದ್ಧ ಮಾದರಿಯ ನೈತಿಕ ಆದರ್ಶ ನೆಲೆಯಲ್ಲಿ ರಚನೆಗೊಂಡಿದೆ. ಉದಾಹರಣೆಗೆ ಕಳ್ಳ ಕಾಣಿಕೆ ಕುಟುಂಬವಾದ ಹುಲಿಕುಂಟಿ ಕಳ್ಳತನ ಮಾಡುವುದು ಮನೆಯ ಯಜಮಾನನಿಗೆ ತಿಳಿದಿರುತ್ತದೆ. ಅಲ್ಲದೆ ಪದ್ಮಕ್ಕ 'ದೇವರು ವರ ಕೊಡ್ತೀನಿ ಅಂತ ಪ್ರತ್ಯಕ್ಷ ಆದರೆ, ಒಂದು ಕಟ್ಟು ಬೀಡಿ ಕೇಳಿ ತೃಪ್ತನಾಗುತ್ತಾನೆ' ಎಂದು ರಮಾಬಾಯಿಗೆ ಹೇಳುವ ಮಾತು ಬಡವನಾದವನ ಲಕ್ಷಣವನ್ನು ತಿಳಿಸುತ್ತದೆ.

'ಸೀಳು ಲೋಟ' ಕತೆಯ ನಿರೂಪಣೆ ವಿಧಾನವನ್ನು ಗ್ರಹಿಸುವುದಾದರೆ ಕತೆಯೊಳಗೆ ಕತೆ ಹೋಲುವ ಉಪಕತೆಗಳನ್ನು ಹೊಂದಿರುವ ವಡ್ಡರಾಧನೆ ಮತ್ತು ಪಂಚತಂತ್ರ ಕತೆಗಳನ್ನು ನೆನಪಿಸುತ್ತದೆ. ಪುರಾಣ ಕಾವ್ಯವಾದ ಮಹಾಭಾರತದ ಭೀಮ ದ್ರೌಪದಿಯ ಪ್ರೀತಿಗೆ ಹುಲಿಕುಂಟ ಮುತ್ತಾತ ಭೀಮಸೇನನ ಇತಿಹಾಸವನ್ನು ಪುರಾಣ ಆಗಿಸುವ ತಂತ್ರಗರಿಕರ ಒಂದೆಡೆಯದರೆ, ತಿರುಪತಿ ತಿಮ್ಮಪ್ಪನ ಕಳ್ಳಕಾಣಿಕೆಯ ಪ್ರಂಸಗದಲ್ಲಿ ದೇವರು ಕೆಡುಕಿಗೂ ಎಂಬ ಅಂಶ ಮತ್ತೊಂದೆಡೆಯಿದೆ. ಆದರೆ ಕೊನೆಗೆ ಗೆಲ್ಲುವುದು ಒಳ್ಳೆತನಕ್ಕೆ ಗೋವಿಂದನ ಪೂರ್ಣದರ್ಶನವಾಗಿ ಆಡವಿಟ್ಟು ಚಿನ್ನದ ಬಳೆ ಕೈ ಸೇರಿ ಸುಖ್ಯಾಂತವನ್ನು ಕಾಣುವ ಕತೆ ನವೋದಯದ ಸುಧಾರಣವಾದಿಯ ನೆಲೆಯಲ್ಲಿಯೇ ಮುಕ್ತಾಯವಾಗುತ್ತದೆ.

ಮತ್ತೊಂದೆಡೆ ಆಧುನಿಕತೆಯ ಪರಿಣಾಮಗಳಾದ ರೈಲು, ಬಸ್ಸು, ಆಸ್ಪತ್ರೆ, ಪೋಲೀಸ್ ಇವೆಲ್ಲರ ಪರಿಚಯವಿರುವ ಸಮಾಜದಲ್ಲಿ, ಪುರಾಣವನ್ನು, ದೇವರು, ಧರ್ಮ, ತೀರ್ಥಯಾತ್ರೆಯ ಪರಿಕಲ್ಪನೆಗಳನ್ನು ಮಡಿವಂತಿಕೆಯಿಂದಲೇ ಒಪ್ಪುವ ಜನರನ್ನು ಈ ಕತೆ ವಿಡಂಬಿಸುತ್ತದೆ. ರಮಾಬಾಯಿ ಕುಟುಂಬ ತೀಥಯಾತ್ರೆಗೆ ಹೋಗುವಾಗ "ರೊಕ್ಕದ ವಿಷಯದಾಗಿ ಆ ಊರಲ್ಲಿ ಮನುಷ್ಯರಂತೆ ದೇವರಿಗೂ ರೊಕ್ಕ ಕಂಡರೆ ಬಾಳ ಆಸೆ ಎನ್ನುವ ಗೋಪಣ್ಣ ಮೇಷ್ಟ್ರು ನಗರ ಬದುಕನ್ನು ವಿರೋಧಿಸಿದರೆ, ಕಳ್ಳತನದ ಪ್ರಸಂಗದಲ್ಲಿ ದುಷ್ಟ ಮುಂದೆ ಮಕ್ಕಳು ದುಬಾರಿ ಒಡವೆ ಹಾಕಿ ಬರುತ್ತಾರೆ. ಆಸುಡುಗಾಡು ಸ್ವಾಮಿಯೇ ಕದ್ದಿರಬಹುದು' ಎಂಬುದು ಶ್ರೀಮಂತರ ದರ್ಪವನ್ನು ವಿಡಂಬಿಸುತ್ತಾನೆ. ಆದರೆ ಇವನ ವಿರೋಧ ಸುಧಾರಣವಾದಿ ಅಷ್ಟೇ. ಮದುವೆಯಲ್ಲಿ ಸ್ವಾಮೀಜಿ ಮಂತ್ರಿಸುವುದು – ಹುಲಿಕುಂಟೆ ಹೊಟ್ಟೆ ನೋವು ಬರುವುದು ಕಾಕತಾಳೀಯವಾದರು. ಸಮಾಜದ ಜನರು 'ನಮ್ಮ

ಸ್ವಾಮಿಗಳ ಮಂತ್ರಶಕ್ತಿ ಸಾಮಾನ್ಯದ್ದಲ್ಲ ನೀವು ಕದ್ದಿದ್ದು ಕೊಡದಿದ್ರೆ ರಕ್ತ ಕಾರಿ ಸಾಯುತ್ತಾನೆ' ಎಂಬುದು ನಿಜಕ್ಕೂ ಉಪಯೊಗಿಸಿಕೊಂಡಿದ್ದಾರೆ ಆದರೆ ಇಲ್ಲಿ ನಿರೂಪಕ ಪೋಲೀಸ್ ಪಾತ್ರವನ್ನು ಮಾನವೀಯ ನೆಲೆಯಲ್ಲಿ ನಿರೂಪಿಸುವುದುರ ಜೊತೆಗೆ ಕಳ್ಳತನಕ್ಕೆ ಸಾಕ್ಷಿಯನ್ನು ಪೋಲೀಸ್ ಒಪ್ಪುವುದಿಲ್ಲ ಹುಲಿಕುಂಟಯನ್ನು ಆಸ್ಪತ್ರೆಗೆ ಸೇರಿಸುವ ಪೋಲೀಸ್‌ನ ಒಳ್ಳೆತನ, ಆ ಡಾಕ್ಟರ್, ನರ್ಸ್‌ಗಳ ಸಹಾಕಾರ ರಮಾಬಾಯಿಗೆ ಸಹಕಾರಿಯಾಗುತ್ತದೆ. ಇಲ್ಲಿಯೂ ಕೂಡ ಲೇಖಕ ಒಳಿತನ್ನೇ ಬಯಸುತ್ತಾನೆ. ಸ್ವಾಭಿಮಾನಿಯಾದ ರಮಾಬಾಯಿ ಶ್ರೀಮಂತರ ಸಹವಾಸ ಬೇಡವೆಂದು ತನ್ನ ಅಣ್ಣನನ್ನು ದೂರ ಮಾಡುವುದು ಕೊನೆಗೆ ವರ್ಗ ಸಂಘರ್ಷದ ನೆಲೆಯಲ್ಲಿಯೇ ನೋವುಗಳಿವೆ ಎಂಬುದನ್ನು ಸೀಳು ಲೋಟ ಕತೆ ಬೆಂಬಲಿಸುತ್ತದೆ.

ಅಡಿಟಿಪ್ಪಣಿ:

1. ವಸುಧೇಂದ್ರ : ಹಂಪಿ ಎಕ್ಸ್‌ಪ್ರೆಸ್ (ಕಥಾ ಸಂಕಲನ) ಛಂದ ಪುಸ್ತಕ ಪ್ರಕಾಶನ ಮುದ್ರಣ 2015
2. ಕೆಂಪು ಗಿಳಿ ಕಥೆ
3. ಕೆಂಧೂಳಿ

ಅಧ್ಯಾಯ – 4

ವಸುಧೇಂದ್ರ ರವರ ಸಂದರ್ಶನ ಲೇಖನ

ಕಥೆಗಾರರೊಂದಿಗಿನ ಸಂದರ್ಶನ:



ವಸುದೇಂದ್ರ ತಮ್ಮ ಸೃಜನಶೀಲ, ಕ್ರಿಯಾತ್ಮಕ ಮತ್ತು ನೈಜ ಘಟನೆಗಳ ಆಧಾರಿತ ಬರಹಗಳ ಮೂಲಕ ತಮ್ಮನ್ನು ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸಿಕೊಂಡವರು. ಅವರು ತಮ್ಮ ಬಗ್ಗೆ ಹಂಚಿಕೊಂಡ ಸಂದರ್ಶನದ ಸಾರ ಇಲ್ಲಿದೆ.

ನಮಸ್ಕಾರ ಸರ್...

1. **ನಾನು ಈ ಬಾರಿ ನಿಮ್ಮ ಕಥಾಸಂಕಲನದ ಕಥೆಗಳನ್ನೆ ನನ್ನ ಎಂ.ಫಿಲ್ ವಿಷಯದ ವಸ್ತುವಾಗಿ ಆಯ್ಕೆ ಮಾಡಿಕೊಂಡಿದಿನಿ. ಹಾಗಾಗೀ ನಿಮ್ಮ ಒಂದು ಸಂದರ್ಶನಕ್ಕಾಗಿ ಬಂದಿದಿನಿ ಕಾರಣ ಹೊಸ ತಲೆಮಾರಿನ ಲೇಖಕರಲ್ಲಿಯೂ ಕಾಳಜಿ ಹಾಗೂ ವಿಭಿನ್ನ ಧೋರಣೆಗಳು ಇವೆ ಎಂದು ತಿಳಿಸಿಕೊಂಡುವುದು ನನ್ನ ಉದ್ದೇಶವಾಗಿದೆ ?**



ಹಳೆ ಕವಿಗಳೆ ಆಗಲಿ, ಹೊಸ ಕವಿಗಳೆ ಆಗಲಿ, ಅಥವಾ ಲೇಖಕರೆ ಆಗಲಿ ಆಗಲೂ ಸಹ ಸೃಜನಶೀಲತೆ ಗುಣಗಳೂ ಇದ್ದವೂ ಆದರೆ ಅವು ಆಯಾ ಕಾಲದ ಸಮಸ್ಯೆಗೆ ಅನುಗುಣವಾಗಿ ಕಥೆಗಳಲ್ಲಿ ಸಂವೇದನೆಗಳ, ಧೋರಣೆಗಳು ಭಾಸವಾಗುತ್ತವೆ.

2. **ಸರ್, ನೀವು ವೃತ್ತಿಯಲ್ಲಿ ಇಂಜಿನಿಯರ್ ಕ್ಷೇತ್ರ ಆಯ್ಕೆ ಮಾಡಿಕೊಂಡಿದರೂ ಈ ಒಂದು ಕನ್ನಡ ಸಾಹಿತ್ಯದ ಕಡೆಗೆ ಮುಖ ಮಾಡಡಿಕ್ಕೆ ಕೆಲವು ಪ್ರೇರಣೆ, ಪ್ರಭಾವ ಅಂತ ಇರುತ್ತವೆ ಆದರೆ ಕಥೆ ಓದಿದವರಿಗೆ ತಾಯಿಯೆ ಮೊದಲ ಪ್ರೇರಣೆ ಅಂಥ ಹೇಳಿದರೂ ಅದನ್ನು ಮೀರಿದ ವ್ಯಾಪ್ತಿ ಇದೇಯೇ ?**

ಜಗತ್ತಿನ ಯಾವ ಮೂಲೆಯಲ್ಲಿ, ಯಾವ ಕಾಲದಲ್ಲಿ ಯಾವ ಭಾಷೆಯಲ್ಲಿ ಕಥೆಗಾರ ಹುಟ್ಟಿಕೊಳ್ಳುತ್ತಾನೆ ಎಂದು ಹೇಳಲಿಕ್ಕೆ ಸಾಧ್ಯಾವಾಗದು ಅದೊಂದು ನಿರಂತರ ಪ್ರಕ್ರಿಯೆ, ಆಗಾಗೀ ಈ ಸಾಫ್ಟ್‌ವೇರ್ ಆಗಲಿ ಯಾವುದೇ ಸಂಬಂಧವಿಲ್ಲ. ಡಾಕ್ಟರ್ಸ್ ಆಗಲಿ ಇಂಜಿನಿಯರ್ ಆಗಲಿ ಎಲ್ಲಾ ವಲಯದ ಜನರು ಕಾವ್ಯ, ಕಥೆಗಳನ್ನು ಬರೆದಿದ್ದಾರೆ. ಆದರೆ ವಿಮರ್ಶೆ ಮಾಡುವಾಗ ಕೆಲವು ಮಾನದಂಡಗಳು ಬೇಕು, ಅಷ್ಟೇ ಅಲ್ಲ ಜನಪದರೆ ರಚನೆ ಮಾಡಿದ್ದಾರೆ. ಆದರೆ ನನ್ನ ಬಾಲ್ಯದಿಂದಲೂ ಪುಸ್ತಕ ಓದುವ ಹವ್ಯಾಸ ಮತ್ತು ಅದೇ ಪರಿಸರ ಇದ್ದಿದ್ದರಿಂದ ಬರೆಯಬೇಕು ಅಂಥ ಅನಿಸಿತು ಇದೆಲ್ಲದರ ಜೊತೆಗೆ ಸಾಫ್ಟ್‌ವೇರ್ ವಲಯದಲ್ಲಿ ಏಕತಾನತೆ ಇದ್ದುದರಿಂದ ನನ್ನ ನೆಲೆಯನ್ನ ಅಸ್ತಿತ್ವ ಕಂಡುಕೊಳ್ಳಲಿಕೆ ನೆರವಾಗಿದ್ದು ಅಂದರೆ ಸಾಹಿತ್ಯ ಇದರಲ್ಲಿ ಸಾಕಷ್ಟು ನೆಮ್ಮದಿ ಸಂತೋಷ ಕಂಡುಕೊಂಡೆ, ಅಲ್ಲಿಂದ ಕಥೆ ಬರಿಯೊಂದಿಕ್ಕೆ ಪ್ರಾರಂಭ ಮಾಡಿದೆ.

ನನ್ನ ಮೊದಲ ಕಥೆ ಪ್ರಕಟವಾದಗ ಬಂದಂತಹ ಪ್ರತಿಕ್ರಿಯೆ ನನಗೆ ಇನ್ನಷ್ಟು ಬರೆಯೋದಕ್ಕೆ ಪ್ರೋತ್ಸಾಹ ನೀಡಿತು ಇದರಿಂದ ಬರೆಯುವುದನ್ನು ಮುಂದುವರೆಸಲಿಕ್ಕೆ ನೆರವಾಯಿತ್ತು ನಂತರ ಇಂಗ್ಲೇಡಿಗೆ ಹೊರಟುಹೋದೆ ಅಲ್ಲಿ ಸಾಕಷ್ಟು ಅಂತರಾಷ್ಟ್ರೀಯ ಸಿನಿಮಾಗಳು ನೋಡಿದೆ ಇದರಿಂದ ಇನ್ನಷ್ಟು ಕಥೆಗಳನ್ನು ಬರೆಯಲು ನೆರವಾಯಿತು

3. **ನಿಮ್ಮ ಕಥೆಗಳನ್ನ ಸೂಕ್ಷ್ಮವಾಗಿ ಗಮನಿಸಿದಾಗ ಯಾವ ಕಥೆಗಳು ಕೇವಲ ಕಾಲ್ಪನೀಕ ಕಥೆಗಳಾಗಿ ಕಾಣುವುದಿಲ್ಲ, ಎಲ್ಲವೂ ನಮ್ಮ ನೆಡುವಿನಲ್ಲೆ ಇರುವ ಚಿತ್ರಣಗಳನ್ನು ಕಟ್ಟಿಕೊಡುವಂತೆ ಕಾಣುತ್ತವೆ ಇಲ್ಲಿ ಸ್ವಂತ ಅನುಭವನ ಇಲ್ಲಾ ಹೊರಗಿನ ಪ್ರಭಾವವೇ ?**

ಇಲ್ಲಿ ಒಬ್ಬ ಬರಹಗಾರನಿಗೆ ಪ್ರಭಾವ ಎಲ್ಲಾ ಸಮಯದಲ್ಲೂ ಸ್ವಂತದೇ ಹೊರಗಿನದೇ ಎಂದು ನೋಡಲು ಸಾಧ್ಯವಿಲ್ಲ ಎಲ್ಲಾ ಕಡೆಯಿಂದಲೂ ಪ್ರಭಾವ ಬೀರಿರುತ್ತದೆ. ಆದರೆ ಕಥೆ ಓದುವವನಿಗೆ ಅಲ್ಲಿ ನೆಡೆಯುವ ಸಂಗತಿಗಳು ವಾಸ್ತವದಲ್ಲೂ ಒಂದೇ ಎನ್ನುವ ರೀತಿಯಲ್ಲೂ ಬರೆಯುವುದೇ ಒಂದು ಕಲೆ ಅದು ಸಹ ಒಂದು ವಾಸ್ತವ ಕಥನಮಾರ್ಗ ನೀವು ನನ್ನ ಕಥಾ ನಿರೂಪಣೆಯಲ್ಲಿ ಕಾಣಬಹುದು ಅದು ಯಾವಾಗ ಓದುಗರ ಮೇಲೆ ಪ್ರಭಾವ ಬೀರುತ್ತದೆಯೋ ಅದೊಂದು ಯಶಸ್ವಿ ಕಥೆಯಾಗುತ್ತದೆ. ಹೇಳುವ ತಂತ್ರ ವಿಭಿನ್ನವಾಗಿರುತ್ತದೆ. ನಾವು ಪುರಾಣ ಕಥೆಗಳನ್ನು ನೋಡಿದಾಗ ಸಮುದ್ರ ಮಂಥನ ಕಥೆಯಲ್ಲಿ ರಾಕ್ಷಸರು ಹಾಗೂ ದೇವತೆಗಳಿಗೂ ಹಾವನ್ನು ಹಿಡಿದು ಇರುವ ಕಥೆ ಓದಿದವರಿಗೆ ಅದೊಂದು ಸುಂದರ ಕಥೆಯೆ ಆದರೆ ಅದೇನು ನೆಡೆದಂತ ಕಥೆ ಏನಲ್ಲ. ಈ ರೀತಿಯಲ್ಲಿ ಇದೆ ಮುಖ್ಯ ಅದೇ ಮುಖ್ಯ ಅಂತ ಏಂದು ಅನಿಸುವುದಿಲ್ಲ.

ಎಷ್ಟೋ ಬಾರಿ ನನ್ನ ವೈಯಕ್ತಿಕ ಬದುಕು ಕಥೆಯ ಮೇಲೆ ಸಾಕಷ್ಟು ಕಲ್ಪನೆಯೂ ಪ್ರಭಾವವನ್ನು ಬೀರಿದೆ ಅದರಲೂ ಪ್ರಬಂಧ ಸಾಹಿತ್ಯದಲ್ಲಿ ಕಲ್ಪನೆ ತೀರ ಕಡಿಮೆ ಎನ್ನಬಹುದು ಕೇವಲ ರಸ ಸೃಷ್ಟಿಗೆ ಕಲ್ಪನೆ ಬೇಕು ಆದರೆ ಸ್ವಲ್ಪ ಮಾತ್ರವೇ ಕಾಣಬಹುದು.

4. **ಸರ್ 21ನೇ ಶತಮಾನಕ್ಕೆ ತಕ್ಕಂತೆ ನಿಮ್ಮ ಕತೆಗಳು ಆಶಯವನ್ನು ಬದಲಾವಣೆಯನ್ನು ಬಯಸುತ್ತಿರುವ ರೀತಿಯಲ್ಲಿ ವ್ಯಕ್ತ ಪಡಿಸುತ್ತಿದರೂ, ಆ ಕತೆಗಳಲ್ಲಿ ಬರುವ ಮಹಿಳಾ ಪಾತ್ರಗಳನ್ನು ಮಾತ್ರ ಯಾಕೆ ನೀವು ಒಂದು ರೀತಿಯ ಸಾಮಾಜಿಕ ಅಥಾವ ಸಂಪ್ರದಾಯ ಬದ್ದ ಚೌಕಟ್ಟಿನಲ್ಲಿ ಇರಿಸಲು ಬಯಸುತ್ತಿರಾ ?**

ನನಗೆ ತಿಳಿದಿರುವ ಹಾಗೆ ಬ್ರಾಹ್ಮಣಿಕೆಯಲ್ಲಿ ಹುಟ್ಟಿ ಅವರ ಬದುಕಿನಲ್ಲಿ ಯಾವುದೋ ಒಂದು ಕಷ್ಟ ಬಂದಾಗ ಅಲ್ಲಿಂದ ಬೇರೆ ಕಡೆಗೆ ಹೋಗುವುದು ಮಾತ್ರವಲ್ಲ ಅಲ್ಲಿ ಇದ್ದು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾಗಿದೆ. ಅಲ್ಲಿ ಜಾತಿ ಸಮಸ್ಯೆಯಾಗಿರುವುದಿಲ್ಲ ಅದು ಬೇರೆಯೇ

ಆಗಿರುತ್ತದೆ. ಕೇವಲ ಜಾತಿ ಶೋಷಣೆ ಅಲ್ಲ ಅದು ಬೇರೆಯೇ ಸ್ವರೂಪದಾಗಿರುತ್ತದೆ. " ನೀವು ವಾಜಿಯ ಕಥೆಯಲ್ಲಿ ಜಾತಿಗಿಂತ ಅಲ್ಲಿ ಸಮಾನತೆಯಾಗಿ ಕಾಣದೇ ಇರುವುದೇ ಒಂದು ಅಸಮಾನತೆಯೆ ದೊಡ್ಡ ಸಮಸ್ಯೆಯಾಗಿರುತ್ತದೆ, ಕಮಲಕ್ಕನೇ ವ್ಯವಸ್ಥೆಯ ವಿರುದ್ಧ ದೂರ ಹೋಗುವ ಪ್ರಸಂಗವನ್ನು ಕಾಣಬಹುದು. ಆದರೆ ಆದಾವು ಅಲ್ಲಿ ದೂರ ಹೋಗುವಂತಹ ಪಾತ್ರಗಳಾಗಿರುವುದಿಲ್ಲ, ಯಾರೂ ಸ್ವಲ್ಪ ಜನ ವಿರೂಧಿಸಿದರೂ ಉಳಿದ ಎಲ್ಲ ಜನ ಅದನ್ನು ಒಪ್ಪಿಕೊಂಡು ಅಲ್ಲಿಯೇ ಬದುಕುವುದು ಅನಿವಾರ್ಯ, ಈಗಾ ದೇವನೂರು ಮಹಾದೇವಯ್ಯನವರಿಗೆ ಅದೊಂದು ಪರಿಸರ, ಅವರಿಗೆ ನಮ್ಮ ಬ್ರಾಹ್ಮಣ ಪರಿಸರದ ಕಥೆ ಬರಿಯಲ್ಲಿಕ್ಕೆ ಬರುವುದಿಲ್ಲ ಏಕೆಂದರೆ ಆ ಒಂದು ಪರಿಸರ ನೋಡಿಲ್ಲ ಹಾಗೇಯೆ ನನಗೂ ಸಹ ಅಂಥಹ ಒಂದು ಪರಿಸರ ಕಟ್ಟಿಕೊಡಲು ಬರುವುದಿಲ್ಲ. ನನ್ನ ಕಾಳಜಿ ಮೂಲ ಏನಿದೇಯೋ ಅದನ್ನ ತಿಳಿಸಿಕೋಡುವುದಷ್ಟೇ ನನ್ನ ನಿಲುವುಗಳನ್ನ ಪಾತ್ರಗಳ ಮೇಲೆ ಏರಿ ಬದಲಾವಣೆ ಮಾಡಿಕೊಂಡರೆ ಅದರಲಿ ಸಹಜತೆ ಕಾಣಲಾಗುವುದಿಲ್ಲ ಹಾಗಾಗೀ ಸನ್ನಿವೇಶ ತಿಳಿಸುವುದಷ್ಟೇ ಉದ್ದೇಶವಾಗಿದೆ. ಆದರೆ ಯುಗಾದಿ ಕಥೆಯಲ್ಲಿ ಜಾತಿ ಪ್ರಶ್ನೆ ಕಡಿಮೆ ಅಲ್ಲಿ ತಂದೆ ಮಗನ ವೈರುಧ್ಯವನ್ನ ನಾವು ಕಾಣಬಹುದು ಅದೊಂದು ಸಂಕ್ರಮಣದ ಕಾಲ ಎನ್ನಬಹುದು. ನಗರ ಜೀವನದ ಕೊಡುಗೆಯಾಗಿ ಇಂದು ಎದ್ದು ಕಾಣುತ್ತಿರುವ ಸಂಗತಿಯಾಗಿದೆ.

5. **ನಿಮ್ಮ ಕಥೆಯನ್ನು ಓದಿದ ಸಹೃದಯ ಓದುಗರಿಂದ ಬಂದ ಪ್ರತಿಕ್ರಿಯೆ ಏನು ?**

ಒಂದು ಒಳ್ಳೆಯ ಸಾಹಿತ್ಯ ಯಾವಾಗಲು ಬದಲಾವಣೆಯನ್ನು ಉಂಟುಮಾಡುತ್ತದೆ, ಆದರೆ ಇಂದಿನ ಸಿನಿಮಾ ಮಾಧ್ಯಮಗಳಿಗೆ ಹೋಲಿಸಿಕೊಂಡರೆ ಅದರ ಪ್ರಭಾವ ಬಹಳ ಚಿಕ್ಕದ್ದು ಎಂದು ಹೇಳಬಹುದು. ಉದಾ: "ನನ್ನ ಅಮ್ಮ ಅಂದ್ರೆ ನಂಗೀಷ್ಟ" ಮೊದಲ ಬಾರಿಗೆ ಪ್ರಕಟವಾದಾಗ ಓದುಗರಿಂದ ಸಾಕಷ್ಟು ಅಭಿಪ್ರಾಯಗಳು ಹಾಗೂ ನಾವು ಇನ್ನೂ ಮುಂದೆ ನಮ್ಮ ತಾಯಿಯನ್ನ ಚೆನ್ನಾಗಿ ನೋಡಿಕೋಳ್ಳುತ್ತೆವೆ ಎಂದರೂ ಅದೂ ಸಾಮಾನ್ಯ ಅನ್ನುವಂತ್ತಿತು. ಹಾಗೂ ಸಮಾಜ ಬದಲಾವಣೆಯಾಗುತ್ತದೆ ಎಂಬುದರಲ್ಲಿ ನನಗೆ ನಂಬಿಕೆನೆ ಇಲ್ಲ. ಪ್ರಾಮಾಣಿಕವಾಗಿ ನಿತ್ಯ ಸತ್ಯ ಹೇಳಿದಾಗ ಅದು ಯಾವುದೋ ಒಂದು ಮೂಲೆಯಲ್ಲಿ ಅದು ಆತನಿಗೆ ದಕ್ಕುದಾಗಿರುತ್ತದೆ, ಸಾಕ್ಷಿಪ್ರಜ್ಞೆಯನ್ನು ಹಾಗೂ ಮೌಲ್ಯಗಳ ಮೂಲಕ

ಕಥೆಗಳನ್ನು ಬರೆಯುತ್ತಾ ಸಾಗುತ್ತಿದರೆ ಅದರಲಿ ಪ್ರಮಾಣಿಕಥೆ ಇದ್ದರೆ ಸಾಕು ಅದು ತಲುಪುತ್ತದೆ ಎಂದು ಹೇಳಬಹುದು.

6. **ಮೊದಲ ಬಾರಿಗೆ ಸಾಹಿತ್ಯಕ್ಕೆ ಮುಖ ಮಾಡಿದಾಗ ಸಾಧನೆಗೆ ಮೊದಲು ನಿಮಗೆ ಎದುರಾದ ಸವಾಲು/ ಎಡರು ತೊಡರು ಹೇಗಿತ್ತು?**

ಮೊದಲು ನನ್ನ ಬರಹಗಳನ್ನು ಪ್ರಕಟಮಾಡಲು ಯಾರು ಸಹ ಮುಂದೆ ಬರುತ್ತಿರಲ್ಲಿಲ್ಲ, ಹಾಗೆಯೇ ನಾನು ಬರವಣಿಗೆ ಬರೆಯುವಾಗ ಯಾರೊಬ್ಬ ಸಾಹಿತಿಯಾಗಲಿ ಅಥವಾ ಬರಹಗಾರನ ಪರಿಚಯ ಸಹ ಕೂಡ ಇರಲ್ಲಿಲ್ಲ ಹಾಗೂ ಕಥೆ ಬರೆದುಕೊಡುತ್ತೆನೆ ಎಂದು ಯಾರು ಸಹ ನನಗೆ ಇರಲ್ಲಿಲ್ಲ. ಇವತ್ತಿನ ಸಾಮಾಜೀಕ ಮಾಧ್ಯಮಗಳು ಬಂದ ಮೇಲೆ ಸಾಕಷ್ಟು ಅನುಕೂಲವಾಗಿದೆ. ಒಳ್ಳೆಯ ಪ್ರತಿಭೆಗಳಿಗೆ ಎಲ್ಲಿಲ್ಲದ ಅವಕಾಶಗಳೂ ದೊರಕುತ್ತಿವೆ. ಇಂದು ಪ್ರತಿಯೊಬ್ಬನಿಗೊ ವೇದಿಕೆ ಇದೆ.

ಆದರೆ ನಮಗೆ ನಾವೇ ಮುಂದೆ ಬರಬೇಕು (self promoting) ಬೇಕು ಯಾರು ಸಹ ನಿಮ್ಮನ್ನ ಗುರುರ್ತಿಸಲು ಹೋಗುವುದಿಲ್ಲ.

ಇಂಜಿನಿಯರಿಂಗ್ ಹಿನ್ನೆಲೆ ಇಂದ ಬಂದ ನನಗೆ ಯಾವುದು ಸರಿ ಯಾವುದು ತಪ್ಪು ಎಂದು ತಿಳಿದಿರಲ್ಲಿಲ್ಲ, ಆದರೆ ಕೆಲವು ಕೃತಿಗಳು ಪ್ರಕಟವಾದಗ ಓದುಗರಿಂದ ಬಂದ ಪ್ರತಿಕ್ರಿಯೆಗಳೆ ನನಗೆ ಇನ್ನಷ್ಟು ಬರೆಯುವುದಕ್ಕೆ ನೇರವಾಯಿತ್ತು ಹಾಗೂ ಇನ್ನಷ್ಟು ಧೈರ್ಯವೂ ಬಂತು ಸ್ವತಃ ನಾನೇ ಒಂದು ಪುಸ್ತಕ ಕೊಟ್ಟು ಹೇಗಿತ್ತು ಎಂದು ಸಹ ಕೇಳುವುದಿಲ್ಲ, ಆದರೆ ಬೇರೆಯವರ ಪುಸ್ತಕಗಳಿಗೆ ನಾನು ಸಾಕಷ್ಟು ಅಭಿಪ್ರಾಯವನ್ನ ಹೇಳಿಕೊಂಡಿದೆನೆ, ನನ್ನ ಪುಸ್ತಕಗಳಿಗೆ ಯಾವತ್ತು ಮುನ್ನುಡಿ, ಬೆನ್ನುಡಿಯಾಗಲಿ ಬರೆದುಕೊಡಿ ಎಂದು ಕೇಳಲ್ಲಿಲ್ಲ .

ಓದುಗ ಒಂದು ರೀತಿಯ ದೇವನಿದ್ದಂತೆ ಆದರೆ ಎಷ್ಟೋ ಬಾರಿ ಒದುಗನೂ ಸಹ ಹಳ್ಳಕ್ಕೆ ಬಿಳಿಸುವುದು ಉಂಟು, ಬರವಣಿಗೆಗಾರನಿಗೆ ಜಾಗಕತೆ ಇದ್ದರೆ ಸಾಕು. ಮೊದಲು ಯಾರಾದರೂ ನಿಮ್ಮ ಪುಸ್ತಕ ತುಂಬಾ ಚೆನ್ನಾಗಿದೆ ಅಂದಾಗ ರಾತ್ರಿಯೇಲ್ಲ ನಿದ್ದೆ ಇಲ್ಲದೆ ಎದ್ದಿರುತ್ತಿದ್ದೆ. ಆದರೆ ಒಂದು ರೀತಿಯ ಜಾಗ್ರುಕತೆ ಇದೆ ಎನ್ನಬಹುದು ಅಭಿಪ್ರಾಯ ತುಂಬಾ

ಮುಖ್ಯವಾಗುತ್ತದೆ. ಬರವಣಿಗೆ ನಿಲ್ಲಿಸಬಾರದು ಅದೊಂದು ರೀತಿಯ ವರವಿದ್ದಂತೆ ಎನ್ನುತ್ತಾರೆ.

7. **ನೀವು ಇದರ ಮೂಲಕ ಓದುಗರಿಗೆ ನೀಡುವ ಸಂದೇಶ ಏನು?**

ಸಹೃದಯ ಓದುಗರು ಎಂದ ಮೇಲೆ ಒಳ್ಳೆಯ ಓದುಗರೆ ಎನ್ನಬಹುದು. ಆದರೆ ತೆರೆದ ಮನಸ್ಸುಗಳಿಸಿಕೊಳ್ಳುವುದು ಮುಖ್ಯ ಏಕೆಂದರೆ ಇದು ಎಲ್ಲರಿಗೂ ಅಸಾಧ್ಯ ಆದರೆ ಕಾಲ ಕ್ರಮೇಣ ಗಳಿಸಿಕೋಳ್ಳಬಹುದು. ಒಬ್ಬ ಓದುಗ ಸಾಕಷ್ಟು ಕೃತಿ– ಸಾಹಿತ್ಯವನ್ನೇಲ್ಲ ಓದಿಕೊಂಡು ಆತ ಕ್ರೂರಿಯಾದರೆ ಏನು ಬಂತು ಪ್ರಯೋಜನ. ಬರಹಗಾರನಿಗೂ ದುಃಖವನ್ನು ಉಂಟುಮಾಡುತ್ತದೆ. ಆದರೆ ನನಗೆ ಓದುಗನಿಂದ ಮೋಸವಾಗಿಲ್ಲ ಎಂದು ಹೇಳಬಹುದು ಅಂದರೆ ಒಳ್ಳೆಯ ಜನರು ನನ್ನ ಪುಸ್ತಕವನ್ನ ಇಷ್ಟ ಪಡುತ್ತಾರೆ ಎಂದು ಹೇಳಬಹುದು ಅಷ್ಟೇ... .. ..

ಧನ್ಯವಾದಗಳು ಸರ್.. .

ಅಧ್ಯಾಯ – 5

ವಸುಧೇಂದ್ರರ ಕಥಾ ಸಾಹಿತ್ಯ ಹಾಗೂ ಪ್ರಸ್ತುತತೆ

ವಸುಧೇಂದ್ರರ ಕಥಾ ಸಾಹಿತ್ಯ ಹಾಗೂ ಪ್ರಸ್ತುತತೆ:

.1 ಇಂಗ್ಲೀಷ್ ಶಿಕ್ಷಣ ನಮಗೆ ಉಪಕಾರ ಮಾಡಿತು ನಿಜ ಆದರೆ ಅಷ್ಟೇ ಅಪಕಾರವನ್ನು ಮಾಡಿತೆಂಬುದನ್ನು ಮರೆಯುವಂತಿಲ್ಲ. ನಮ್ಮ ಜನರು ಇಂಗ್ಲೀಷ್‌ರಿಂದ ನಾಗರೀಕತೆಯನ್ನು ಕಲಿತರೇ ವಿನಃ ಅವರ ಸಂಸ್ಕೃತಿ ಪ್ರಿಯತೆಯನ್ನು ಕಲಿಯಲಿಲ್ಲ. ನಮ್ಮದೆಲ್ಲವೂ ಪ್ರಯೋಜನವಿಲ್ಲದ್ದು ಎಂಬಂತಹ ಹೇಟರ್ ಸಂಸ್ಕೃತಿ ನಮ್ಮವರನ್ನು ಬಹುಬೇಗ ಆವರಿಸಿತು. ಇದು ಸಮಾಜದ ಮೇಲೆ ನಾನಾ ರೀತಿಯ ನ್ಯೂನತೆಯನ್ನು ಉಂಟು ಮಾಡಿತು.

ನಮ್ಮ ಜನರು ಹಿಡಿದ ಅಡ್ಡದಾರಿಯನ್ನು ಕುವೆಂಪು ತಮ್ಮ ಕವನಗಳಲ್ಲಿ ತೋರಿಸಿದ್ದಾರೆ. ನಮ್ಮ ಜನರನ್ನು ಹುರಿದುಂಬಿಸಿದ್ದಾರೆ.

"ಮೊನ್ನೆ ಮೊನ್ನೆಯವರೆಗೆ ಪಶ್ಚಿಮದ ಹೊಲಗೇರಿ
ಇಂದು ನಂದನವಾಗಿ ನಗುತಲಿದೆ ರಷ್ಯಾ
ಗರ್ಜಿಸಲು ತೊಡಗಿಹುದು ಕೇಸರಂಗಳ ಕೆದರಿ
ಇದುವರೆಗೆ ಮಲಗಿ ನಿದ್ರಿಸುತ್ತಿದ್ದ ಏಷ್ಯಾ:

ಪ್ರಪಂಚದ ಬೇರೆ-ಬೇರೆ ಸಂಸ್ಕೃತಿಯೊಂದಿಗೆ ನಾವು ತಲೆ ಎತ್ತಿ ನಿಲ್ಲಬೇಕಾದರೆ ನಮಗೆ ನಮ್ಮ ಇತಿಹಾಸದ, ಸಂಸ್ಕೃತಿಯ ಬಗೆಗೆ ಅರಿವು ಗೌರವಗಳಿರಬೇಕು. ಆಗ ಮಾತ್ರ ಬೇರೆಯವರು ನಮಗೆ ಗೌರವ ತೋರಿಸುತ್ತಾರೆ. ಸ್ವಲ್ಪ ಒಳಹೊಕ್ಕು ನೋಡಿದರೆ ವಸುದೇಂದ್ರರ ಬಯಲು ಸೀಮೆಯ ನೆನಪುಗಳು ಸಿಹಿ ಎನ್ನಿಸುವಂತೆ ಬರೆದಿರುವುದು ಕಾಣುತ್ತದೆ. .1 ಬಾಲ್ಯದ ಬದುಕಿನ ವಿವರಗಳು ಮುದ ನೀಡುತ್ತವೆ ಏಕೆಂದರೆ, ಅದರ ನಿರೂಪಣೆಯ ಧಾಟಿಯು ಬಾಲ್ಯದ ಗೆಳೆಯರ ಮುಂದೆ ಹರಟುವ, ಹಳೆಯ ನೆನಪುಗಳನ್ನು ಮೆಲುಕು ಹಾಕುವ ರೀತಿಯಲ್ಲಿದೆ. ಅಮ್ಮ, ಅಪ್ಪ, ಅಕ್ಕ ಮತ್ತು ಬಳ್ಳಾರಿ ಸೀಮೆಯ ಪರಿಸರ ಆಪ್ತವಲಯವನ್ನು ಸೃಷ್ಟಿಸುತ್ತದೆ. ಮಧ್ಯಮವರ್ಗದ ಕೌಟುಂಬಿಕ ಪರಿಸರ, ಬ್ರಾಹ್ಮಣ ಸಮಾಜದ ಆಚಾರ ವಿಚಾರಗಳು, ನೀರಿಲ್ಲದ ಬಳ್ಳಾರಿ ಸೀಮೆ, ಹೊಸದಾಗಿ ಬಂದ ಚಲನಚಿತ್ರಗಳನ್ನು ನೋಡುವ ಉತ್ಸಾಹ, 'ಅಣ್ಣಾವ್ರು' ತಮ್ಮೂರಿಗೆ ಬಂದಾಗ ಪುಲಕಗೊಳ್ಳುವ ತಾಯಿ-

ಮಗ ಎಲ್ಲವೂ ಸವಿಸವಿ ನೆನಪು, ಸಾವಿರ ನೆನಪುಗಳೇ. ಇಂತಹದೊಂದು ಪ್ರಪಂಚನ್ನು ಬೆಚ್ಚಗೆ ಕಾಪಾಡಿಕೊಳ್ಳುವ ಮನಸ್ಥಿತಿ ಇರುವುದು ನಾಸ್ಟಾಲ್ಜಿಕ್ ಗುಣದಿಂದಲೇ. ಈ ಜಗತ್ತಿನ ಎದುರು ಆರ್ಥಿಕವಾಗಿ ಸಬಲವಾಗಿರುವ ಬೆಂಗಳೂರಿನ ಲೋಕ, ಕಂಪ್ಯೂಟರ್ ತಂತ್ರಜ್ಞಾನದ ಪರಿಣಾಮದಿಂದ ವಿದೇಶಗಳ ಲೋಕ ಸಂಪರ್ಕ, ಅಲ್ಲಿನ ಅತ್ಯಾಧುನಿಕತೆಯ ಸೌಲಭ್ಯಗಳು ಇತ್ಯಾದಿಗಳೆಲ್ಲ ಇವೆ. ಇಲ್ಲಿರುವ ಲೋಕ ವರ್ತಮಾನದ್ದು. ಅದಕ್ಕೆ ಇರುವ ಕೊರತೆಗಳನ್ನು ವಸುದೇಂದ್ರರ ಬರಹಗಳು ಗುರುತಿಸುತ್ತವೆ.

ಈ ಸೀಳು ಎರಡು ಊರುಗಳು ನಡುವೆ ಉಂಟಾಗಿರುವುದು ಪ್ರಾಥಮಿಕ ದುಡ್ಡಿನ ಪರಿಣಾಮದಿಂದ; ನಂತರ ಸಂಸ್ಕೃತಿ ಮತ್ತಿತರ ಪರಿಣಾಮಗಳಿಂದ. ದುಡ್ಡಿನ ಅಸಮಾನತೆ ಒಂದಕ್ಕೊಂದು ತಾಳೆಯಾಗಲಾರದ ದ್ವೀಪಗಳನ್ನು ಸೃಷ್ಟಿಸುತ್ತಿದೆ. ಐ.ಟಿ. ಯಲ್ಲಿ ಭವಿಷ್ಯ ಕಾಣುವ ಕನಸು ಹೊತ್ತ ಜನಾಂಗ ದುಡ್ಡನ್ನು ದೊಡ್ಡ ಪ್ರಮಾಣದಲ್ಲಿ ಬಯಸಿ ಬಂದಿವೆ. ಅವರಿಗೆ ಇತರರಿಗೂ ಅಂತರ ಇದೆ. 'ಹೆಡ್‌ಹಂಟರ್' ಕಥೆಯಲ್ಲಿ ನಾಯಕನ ತಾಕಲಾಟಗಳು ಇನ್ನಷ್ಟು ಅವಕಾಶಗಳುಳ್ಳ ಕೆಲಸವನ್ನು ಹಿಡಿಯುವುದರ ಬಗ್ಗೆ. ಕಥೆಯ ಕೊನೆಯಲ್ಲಿ ಬರುವ ಜವಾನ ತನಗೆ 800 ರೂ. ಮಾತ್ರ ಸಂಬಳ ಬರುತ್ತಿರುವುದಾಗಿಯೂ, ಇನ್ನೊಂದು ಇನ್ನೂ ರೂಪಾಯಿ ಜಾಸ್ತಿ ಮಾಡಿದರೆ, ಮದುವೆಯಾಗುತ್ತೇನೆಂದು ಹೇಳಿಕೊಂಡಾಗ ನಾಯಕನ ಪ್ರತಿಕ್ರಿಯೆ ಹೀಗಿದೆ: ನನಗೆ ಏನು ಮಾಡಬೇಕೋ ತೋಚಲಿಲ್ಲ. ಬೆಳಿಗ್ಗೆಯಿಂದ ಸಂಜೆವರೆಗೂ ಏಕಪ್ರಕಾರವಾಗಿ ದುಡಿಯುವ ಈ ಜವಾನನಿಗೆ ಬರೀ ಎಂಟುನೂರು ರೂಪಾಯಿ ಸಂಬಳವೇ? ನನಗೆ ಗೊತ್ತೇ ಇರಲಿಲ್ಲ. ಇಲ್ಲಿರುವ ಜಾಣ್ಮೆಯ ಮುಗ್ಧತೆಯನ್ನು ಗಮನಿಸಬೇಕು. ಅತಿಲಾಭದ ಗುಂಪು, ಲಾಭದ ಪರಿಚಯವೇ ಇಲ್ಲದ ಗುಂಪು ಎಂದು ಎರಡು ಗುಂಪುಗಳಾಗಿ ಮಾರ್ಪಡುತ್ತ ಎರಡು ಲೋಕಗಳ ಜನರು ಒಂದು ಪರಸ್ಪರ ಅನ್ಯಗ್ರಹ ಜೀವಿಗಳಂತೆ ಬದುಕುತ್ತಿರುವುದನ್ನು ವಸುದೇಂದ್ರರ ಕಥೆಗಳಲ್ಲಿ ಗುರುತಿಸುತ್ತೇವೆ. ಒಂದು ಕಡೆಯಲ್ಲಿ ಸಿವಿಲ್ ಇಂಜನಿಯರ್ ಐ.ಟಿ.ಯ ಮರೀಚಿಕೆಯಲ್ಲಿ ತನ್ನ ಸ್ವಂತದ ಆಸ್ತಿಯನ್ನೆಲ್ಲ ಕಳೆದುಕೊಂಡು, ಬೆಂಗಳೂರಿಗೆ ಬರುತ್ತಾನೆ. ಅವನ ಸ್ನೇಹಿತನ ಮನೆ, ಸ್ನೇಹಿತನ ಹೆಂಡತಿ ಮುಂತಾದ ಸಂಗತಿಗಳು ಅವನಿಗೆ ಕಿರಿಕಿರಿಯುಂಟು ಮಾಡುತ್ತವೆ. ಅಸೂಯೆ ಮತ್ತು ಅಪರಾಧಿ ಪ್ರಜ್ಞೆ ಮೂಡಿಸುವ ಲೋಕವನ್ನು ಬಿಚ್ಚಿಡಲು ಇಷ್ಟೇ ಅಲ್ಲದೆ, ಟಾರ್ಗೇಟ್ ಅನ್ನುಮುಟ್ಟದ, ಪ್ರಾಜೆಕ್ಟ್ ಸರಿಯಾದ ಸಮಯದಲ್ಲಿ ಮುಗಿಸದ ಜನರು ನೆಮ್ಮದಿಯಿಲ್ಲದೆ ಬದುಕಿದ್ದಾರೆ ಎನ್ನುವ ವಾಸ್ತವದತ್ತಲೂ ನಮ್ಮ ಗಮನ ಸೆಳೆಯುತ್ತಾರೆ ಕಥೆಗಾರ.

ಕಾರ್ಪೋರೇಟ್ ಜಗತ್ತಿನ ಮೊದಲ ಆದ್ಯತೆ ಹಣ ಮತ್ತು ಯಶಸ್ಸು. ಅವುಗಳಿಂದ ರೂಪಿತವಾದ ಅವರ ಸಂಸ್ಕೃತಿಯೂ ಹೀಗೆ ಇರುತ್ತದೆ. ಅದರಲ್ಲಿ ಬದುಕುವವರ ಆದ್ಯತೆಗಳು ಹಣ ಮತ್ತು ಯಶಸ್ಸು. ಸ್ಪರ್ಧಾತ್ಮಕ ಲೋಕದಲ್ಲಿ ಅಂಕಿ ಅಂಶಗಳೊಂದಿಗೆ ಸಹಕಾರ ಸಾಧ್ಯವಾದಷ್ಟು ಮನುಷ್ಯರ ಜೊತೆ ಸಾಧ್ಯವಾಗುವುದಿಲ್ಲ ಎನ್ನುವುದನ್ನು ಗಮನಿಸಬೇಕು. ಅತಿಯೆನ್ನುವುದೇ ಗುಣವವಾಗಿರುವ ಈ ಜಗತ್ತರಿನಲ್ಲಿ ದುಡ್ಡು ಅತಿಯದಂತೆ, ಸೆಕ್ಸ್ ಕೂಡ ಅತಿ. ಇಲ್ಲಿ ಸೆಕ್ಸ್ ಪ್ರೈವೇಟೆಡ್ ಆದ ಜನಗಳಿದ್ದಾರೆ. ತಮ್ಮದೇ ಆದ ರೀತಿಯಲ್ಲಿ ಭ್ರಮೆಯಲ್ಲಿರುವವರಿದ್ದಾರೆ. ಫೋನು ಸೆಕ್ಸ್‌ಗಳಿಂದ ದಂಧೆ ಮಾಡುವವರಿದ್ದಾರೆ. ಏನಾದರೂ ವ್ಯಾವಹಾರಿಕ ಸಫಲತೆಗೆ ಇಲ್ಲಿ ಜಾಗ ಹೊಸ ಪ್ರಾಜೆಕ್ಟ್‌ಗಳನ್ನು ಕೊಡಿಸುವುದಾದರೆ ಏನನ್ನು ಮಾಡಲು ತಯಾರಿರುವ ಜನ ಇಲ್ಲಿದ್ದಾರೆ.

ವಸುದೇಂದ್ರರ ಇನ್ನೊಂದು ಪ್ರಪಂಚದಲ್ಲಿ ಈ ಸಮಸ್ಯೆಗಳಿಲ್ಲ. ಬಡತನದ ಕೊರತೆಯಿದ್ದರೂ, ಸಾಮರಸ್ಯವಿದೆ; ಸೋತರೂ ಸ್ವೀಕರಿಸುವ ಗುಣವಿದೆ. 'ನಮ್ಮಮ್ಮ ಅಂದ್ರೆ ನಂಗಿಷ್ಟ' ವಸುದೇಂದ್ರರ ಜನಪ್ರಿಯ ಪ್ರಬಂಧ ಅದರಲ್ಲಿ ಚೆಡ್ಡಿರಾಸ್ಕಾಲ್ ಆಗಿರುವ ಮಗ ಎಲ್ಲರೆದುರು ಅವಮಾನ ಅನುಭವಿಸುತ್ತಿದ್ದಾಗ, ತಾಯಿ ಅವನಲ್ಲಿ ಆತ್ಮವಿಶ್ವಾಸ ತುಂಬಿ, ಸ್ವಲ್ಪವೂ ಬೇಸರವಿಲ್ಲದೆ ಅವನನ್ನು ಸಂತೈಸುತ್ತಾಳೆ. ಇನ್ನೊಮ್ಮೆ ಟಿ.ವಿ. ರಿಪೇರಿ ಮಾಡುತ್ತಾನೆ ಮಗ ಎಂದು ಊರವರನ್ನೆಲ್ಲ ಕರೆದು ಕೂರಿಸಿದ ಅಪ್ಪ ಮತ್ತು ಮನೆಯವರ ಎದುರಲ್ಲಿ ಮಗ ಸೋಲುತ್ತಾನೆ. ಆದರೆ, ಸೋತರೂ ಅವಮಾನ ಆಗದೆ ಹಾಗೆ ತಾಯಿ ನೋಡಿಕೊಳ್ಳುತ್ತಾಳೆ. ಇನ್ನು ಅದರ ಕಥೆ 'ಹುಲಿಗೆ ಕಾಡೇ ರಕ್ಷೆ, ಕಾಡಿಗೆ ಹುಲಿಯೇ ರಕ್ಷೆ' ಕಥೆಯೂ ಸೋತವನನ್ನು ಷರತ್ತಿಲ್ಲದೆ ಸ್ವೀಕರಿಸುವ ಮನೋಭಾವವನ್ನು ಕುರಿತೇ ಬಂದಿದೆ. ಆದರೆ, ಈ ಕಂಪ್ಯೂಟರ್ ಸ್ಪರ್ಧಾತ್ಮಕ ಲೋಕ ನೋಡಿದರೆ ಅಲ್ಲಿ ಟರ್ಮಿನೇಷನ್ ಆಗಲು ಸದಾ ತಯಾರಾಗಿರಬೇಕು. ಷರತ್ತುಗಳಿಲ್ಲದೆ ಅಲ್ಲಿ ಏನೂ ನಡೆಯುವುದಿಲ್ಲ.

ವಸುದೇಂದ್ರರ ಬರಹಗಳು ತೋರಿಸುವ ಸಾಂಸ್ಕೃತಿಕ ಕಂದರಗಳಲ್ಲಿ ಭಾಷೆಯದೂ ಒಂದು. ಬಳ್ಳಾರಿ, ಬೆಂಗಳೂರು ಲೋಕಗಳು ಬೇರೆಯಾಗುವಂತೆ ಕನ್ನಡ ಮತ್ತು ಅದರ ಸಂಸ್ಕೃತಿಯು ಇಂಗ್ಲೀಷ್ ಮತ್ತು ಅದರ ಸಂಸ್ಕೃತಿಯು ಜೊತೆಗೂಡದೇ ಹೋಗುತ್ತದೆ. ಇಂಗ್ಲೀಷ್ ಭಾಷೆಬಲ್ಲ ತಾಂತ್ರಿಕ ಪರಿಣತಿಗಳನ್ನು ಹೊಂದಿದ ವಿದ್ಯಾವಂತ ವರ್ಗ ಕೆನೆಪದರದಲ್ಲಿ ತಮ್ಮನ್ನು ಗುರುತಿಸಿಕೊಂಡು, ಸಮುದಾಯದಿಂದ ಬೇರೆಯಾಗುವುದನ್ನು ತೋರಿಸಿಕೊಳ್ಳುತ್ತಿವೆ. ಕನ್ನಡ

ಭಾಷೆಯನ್ನು ಬಳಸುವ ವರ್ಗ ಅಷ್ಟೇನು ಸವಲತ್ತುಗಳನ್ನು ಹೊಂದಲ್ಲದೇ ಇರುವಂತದ್ದು. ಬಡತನದ ಅಥವಾ ಮಧ್ಯಮವರ್ಗಗಗಳಲ್ಲಿ ಬಳಕೆಯಲ್ಲಿರುವಂತದ್ದು. ಆರ್ಥಿಕ ದೃಢತೆಯು ಇಂಗ್ಲೀಷ್ ಭಾಷೆಯ ಬಳಕೆಗೆ ಹೆಚ್ಚು ಪ್ರೇರಣೆಯಾಗಿದೆ. ಅಲ್ಲದೆ, ಇಂಗ್ಲೀಷ್ ವಿದೇಶಗಳಿಗೂ ಸಂಪರ್ಕ ಕಲ್ಪಿಸುವ ಅವಕಾಶಗಳನ್ನು ಕೊಡುವ ಭಾಷೆ. ಇಂತಹ ಸಂದರ್ಭದಲ್ಲಿ ಕನ್ನಡವನ್ನು ನೆಚ್ಚಿ ಬದುಕುಲು ಸಾಧ್ಯವೇ ಎಂಬ ಪ್ರಶ್ನೆಯನ್ನು ವಸುದೇಂದ್ರರ ಸಾಹಿತ್ಯ ನಮ್ಮ ಮುಂದಿಡುತ್ತಿದೆ.

ಇಲ್ಲಿ ಉದಾಹರಿಸಬಹುದಾದ ಕಥೆಯೆಂದರೆ 'ಯುಗಾದಿ'. ಕನ್ನಡ ಶಾಲೆಯ ಮಾಸ್ತರರಾಗಿರುವ ಗೋಪಣ್ಣ ಅವರಿಗೂ ಅವರ ಸಾಫ್ಟ್‌ವೇರ್ ಎಂಜಿನಿಯರ್ ಮಗನಿಗೂ ಉಂಟಾಗುವ ಅಂತರ ಸಂಸ್ಕೃತಿಯದು. ಮುಖ್ಯವಾಗಿ ಭಾಷೆಯಿಂದ ಉಂಟಾದ ಸಂಸ್ಕೃತಿಯದು. ನಿವೃತ್ತರಾಗಿರುವ ಗೋಪಣ್ಣ ಮಾಸ್ತರರು ಬಿಡುವಿನ ವೇಳೆಯಲ್ಲಿ ಪಾಠ ಹೇಳಿಕೊಡೋಣವೆಂದು ಹುಡುಕಾಡಿದರೆ, ಮಗ ಮನೆ ಮಾಡಿರುವ ಲೊಕಾಲಿಟಿಯಲ್ಲಿ ಯಾವ ತಂದೆ ತಾಯಿಗಳೂ ತಮ್ಮ ಮಕ್ಕಳನ್ನು ಕನ್ನಡದಲ್ಲಿ ಕಲಿಸಲು ಬಯಸುವುದಿಲ್ಲ. 'ನೀವು ಯಾವುದಾದರೂ ಸ್ಲಂ ಏರಿಯಾ ಹುಡುಕಿಕೊಂಡು ಹೋದರೆ ಅಲ್ಲಿ ಸಆಮಾನ್ಯವಾಗಿ ಕನ್ನಡ ಶಾಲೆಗಳಿವೆ' ಎಂದು ಮಾಸ್ತರರಿಗೆ ಹೇಳಿಕಳಿಸುತ್ತಾರೆ. ಏರಿಯಾದ ಮಕ್ಕಳಿಗೆ ಚೈತ್ರ, ವೈಶಾಖ, ಕಲಿಸುವುದಕ್ಕೂ ಆಕ್ಷೇಪಿಸುವ ತಂದೆತಾಯಿಗಳು ಔಟ್‌ಡೇಟ್ ಆದ ವಿಷಯಗಳನ್ನು ಕಲಿಸುತ್ತಾರೆ ಎನ್ನುತ್ತಾರೆ.

"ಮಲ್ಟಿನೇಶನ್ ಕಂಪನಿನಾಗೆ ಕೆಲಸ ಮಾಡೋದು ಅಂದರೆ ಏನಂತ ಅಂದುಕೊಂಡಿ ನೀನು? ಕನ್ನಡ ಸಾಲಿ ಮಾಸ್ತರ್ ಕೆಲಸ ಅಂತ ಮಾಡೀ ಏನು" ಎಂದು ಮಗ ತಂದೆಯನ್ನು ಹಂಗಿಸುತ್ತಾನೆ. ಆದರೆ, ಅವನ ಆಪತ್ಕಾಲದಲ್ಲಿ ನೆರವಾಗುವುದು ಕನ್ನಡ ಶಾಲೆಯಲ್ಲಿ ಮಾಸ್ತರರ ಕೈಕೆಳಗೆ ಕಲಿತ ಒಬ್ಬ ಹುಡುಗಿಯಿಂದ. ಇದು ವಸುದೇಂದ್ರ ಸೃಷ್ಟಿಸುವ ಕಂದರಗಳು. ಇದು ರಮ್ಯ ಗ್ರಹಿಕೆಯೂ ಹೌದು. ಆದರೆ, ಕಥೆಗಾರನ ಒಟ್ಟು ಮನಃಸ್ಥಿತಿ ದ್ವಂದ್ವಗಳ ನಡುವಿನದ್ದು ಎಂದು ಅದು ತೋರಿಸುತ್ತಿದೆ.

'ಪರಾಧೀನತೆ'ಯ ವೆಂಕಣ್ಣನೂ ಕನ್ನಡದವನಾದುದರಿಂದಲೇ ಸೋಲು ಅನುಭವಿಸಬೇಕಾಗುತ್ತದೆ. ತಂತ್ರಜ್ಞಾನದ ಬಗ್ಗೆ ತನ್ನದೇ ಆದ ಕುತೂಹಲಗಳನ್ನಿಟ್ಟುಕೊಂಡ ವೆಂಕಣ್ಣ, ಮೆಕಾನಿಸಂಗಳನ್ನು ಸ್ವಂತ ತಿಳಿದುಕೊಂಡು ಮಾಡುವ ಆಸೆಯಿಂದ ಬೆಂಗಳೂರಿಗೆ ಪುಸ್ತಕ ಹುಡುಕಿಕೊಂಡು ಬರುತ್ತಾರೆ. ಅಂತೆಯೇ ಪುಸ್ತಕದಂಗಡಿಯಲ್ಲಿ ಹುಡುಕಾಡುತ್ತಿದ್ದಾರೆ. ಅವರ ಸಹಾಯಕ್ಕೆ ಬಂದ ಹುಡುಗ ಮುಖಕ್ಕೆ ಹೊಡೆದಂತೆ ಹೇಳುತ್ತಾನೆ. "ಅಂತಹ ಪುಸ್ತಕ ಕನ್ನಡದಾಗೆ ಸಿಗಲ್ಲ ಬಿಡ್ರಿ ಬರೀ ಕಥೆ, ಕಾವ್ಯ, ನಾಟಕ, ಕಾದಂಬರಿ ಪುಸ್ತಕಗಳು ರಾಶಿ ರಾಶಿ ಇವೆ. ಕನ್ನಡದಾಗೆ

ಎಲ್ಲರೂ ಇಂಥ ಪುಸ್ತಕಾನೇ ಬರೆಯೋದು" ಎಂದು. 'ಈಗ ಇಂಗ್ಲೀಷ್ ಕಲಿಯುವ ವಯಸ್ಸು ವೆಂಕಣ್ಣನದಲ್ಲ' ಎಂದು ಲೇಖಕ ಹೇಳುವ ದನಿಯಲ್ಲಿ ವಿಷಾದ ಅಡಗಿದೆ ಎನ್ನಿಸುತ್ತದೆ. ಸುಲಲಿತವಾಗಿ ಪ್ರಬಂಧಗಳನ್ನು ಬರೆಯಲು ಕನ್ನಡ ಬಳಸುವ ವಸುದೇಂದ್ರರಿಗೆ, ಭಾಷೆ ಭಾವಾನಿರ್ಮಿತಿಯ ಪರಿಕರವಾಗಿವೆ. ಭಾಷೆಯಲ್ಲಿ ಉಂಟಾದ ಕಂದರಗಳು ಮುಖ್ಯವಾಗಿ ಆರ್ಥಿಕ ಸಬಲತೆಯಿಂದಲೇ ಆದವು ಎನ್ನುವುದನ್ನು ಅವರು ಸೂಚಿಸುವಂತಿದೆ.

'ರೂಢಿಯನ್ನು ಕಟ್ಟುವುದು ಕಷ್ಟ; ಮುರಿಯುವುದೂ ಇನ್ನೂ ಕಷ್ಟ; ಮರೆಯುವುದಂತೂ ಇನ್ನೂ ಕಷ್ಟ!'- ಇದು ವಸುದೇಂದ್ರ ಬಳಸುವ ಸಾಲು. ಅವರ ಬಹುಪಾಲು ಪ್ರಬಂಧಗಳು ಇದ್ದ ರೂಢಿಯನ್ನು ಬಿಡಲಾರದೆ, ಹೊಸದಕ್ಕೆ ಹೊಂದಿಕೊಳ್ಳಲಾರದೆ ಇರುವ ಇಬ್ಬಂದಿತನದ ಭಾವವನ್ನು ನವಿರಾಗಿ ಸೂಚಿಸುತ್ತದೆ. ಹಳೆಯ ರೂಢಿಗಳಿಂದ ಬಿಡಿಸಿಕೊಂಡು ಹೊಸ ರೂಢಿಗಳ ನಿರ್ಮಾಣ ಹಂತದಲ್ಲಿರುವ ಸಮಾಜವನ್ನು ಕಾಣುವ ಅವರಲ್ಲಿ ಬದಲಾವಣೆಯ ಆಶಯಗಳು ಒತ್ತಾಸೆಯಾಗಿ ಬರುವುದಿಲ್ಲ. ಸಾಮಾಜಿಕ ಕ್ರೌರ್ಯಗಳನ್ನು ವರ್ಣಿಸಬಲ್ಲ ಚತುರತೆ ಇರುವ ಲೇಖಕನಿಗೆ, ಮೂರ್ತಸ್ವರೂಪದಲ್ಲಿರುವ ಮೌಢ್ಯ, ಆಚರಣೆಗಳ ಕ್ರೌರ್ಯ ಮುಂತಾದವುಗಳ ಅಮೂರ್ತ ನೆಲೆಗಳಿಗೆ ನುಗ್ಗಿ, ವಿಶ್ಲೇಷಿಸುವ ಗುಣದ ಕೊರತೆಯಿದೆ. ವಸುದೇಂದ್ರರ ಕಥೆ / ಪ್ರಬಂಧಗಳು ಬಿಟ್ಟುಕೊಡುವ ಮಡಿ ಹೆಂಗಸರ ಸಾಮಾಜಿಕ ಆಚರಣೆಗಳ ಕ್ರೌರ್ಯ, ಅನಿಷ್ಟ ಪರಂಪರೆಗಳನ್ನು ಪೋಷಿಸುವ ಪರಂಪರೆಯ ಇರವು ತಮ್ಮ, ಮೂಲಸ್ವರೂಪಗಳ ಭೀಕರತೆಯನ್ನು ಸಾಕಷ್ಟು ಪ್ರಮಾಣದಲ್ಲಿ ಹೊರಗೆಳೆಯುವುದಿಲ್ಲ. ಇಂಗ್ಲೀಷ್ ಶಿಕ್ಷಣ ಪಡೆಯುವ ಆರಂಭದ ಕಾಲದಲ್ಲಿದ್ದ 'ಹೊರಗಿಡುವ' ಬಹಿಷ್ಕಾರಗಳು ವಸುದೇಂದ್ರರ ಕಥೆಗಳಲ್ಲಿ ಮುಂದುವರೆದಿವೆ. 'ನಮ್ ವಾಜೀನೂ ಆಟಕ್ಕೆ ಕರಕೊಳ್ರೀ' ಕಥೆಯನ್ನೇ ತೆಗೆದುಕೊಳ್ಳೋಣ. ವವಾಜಿಯೆಂಬ ಹುಡುಗನಿಗೆ ತೊನ್ನು ಹತ್ತಿದ್ದು, ಅವನನ್ನು ಮಡಿ ಕೆಲಸಕ್ಕೆ ಹೊರತುಪಡಿಸಲಾಗಿದೆ. ಅವನ ತಾಯಿಗೆ ಹೇಗಾದರೂ ಮಾಡಿ, ತನ್ನ ಮಗನನ್ನು ಆ ಕೆಲಸಕ್ಕೆ ಕಳಿಸಿ, ಅವನೂ ಗುಂಪಿನಲ್ಲಿ ಭಾಗಿಯಾಗುವಂತೆ ಮಾಡಬೇಕು ಎನ್ನುವ ಆಸೆ, ಹಠ. ಆದರೆ, ಆಕೆಯ ಅಣ್ಣ ಅತ್ತಿಗೆಯರೇ ಈ ವಿಷಯದಲ್ಲಿ ಅವಳ ವಿರುದ್ಧ ಇದ್ದಾರೆ. ವಸುದೇಂದ್ರರ ಕಥೆಗಳಲ್ಲೇ ಮೆಚ್ಚುಗೆ ಪಡೆದಂತಹ ಕಥೆಯೆಂದು ಈ ಕಥೆಯನ್ನು ಗುರುತಿಸಲಾಗುತ್ತದೆ. ಆದರೆ, ವ್ಯವಸ್ಥೆಯ ಒಳಸುಳಿಗಳನ್ನು ಅರಿಯುವ, ಅದನ್ನು ಬದಲಾಯಿಸುವ ಆಶಯಗಳನ್ನು ಹೊಂದರರದ ಕಥೆಯಾಗಿ ಮಾತ್ರ ನಿಲ್ಲುತ್ತದೆ ಅದು.

ಬದಲಾದ ಸಾಮಾಜಿಕ ಸ್ಥಿತ್ಯಂತರಗಳು ಬ್ರಾಹ್ಮಣ ಸಮಾಜದ ಮಡಿವಂತಿಕೆಯನ್ನು ಬಿಗಿಹಿಡಿದವೆಂದು ನೋಡುತ್ತಿಲ್ಲ. ಜಾತೀಯತೆಯ ಸ್ವರೂಪಗಳು ಹಳೆಯ ಸುಧಾರಣಾ ಮಾದರಿಗಳಿಗೆ ಒಗ್ಗುವ ಹಂತದಲ್ಲಿ ಉಳಿದಿಲ್ಲ. ವಸುದೇಂದ್ರ ಕಾಣುವ ಹತ್ತಿಪ್ಪತ್ತು ವರ್ಷಗಳ ಹಳೆಯ ಕಾಲದ ಸಮಾಜಕ್ಕೂ ಇಂದಿನ ವರ್ತಮಾನದಲ್ಲಿ ಬದುಕುತ್ತಿರುವ ಸಮಾಜಕ್ಕೂ ವ್ಯತ್ಯಾಸಗಳಿವೆ. ಅವುಗಳಿಗೆ ತಮ್ಮದೇ ಆದ ಕಾಲದ ಸಮಸ್ಯೆಗಳಿವೆ. ಗೋಪಣ್ಣ ಮಾಸ್ತರರು ಸೊಸೆ ಚಿಕನ್ ಮಾಡಿಕೊಳ್ಳುವೆ ಎಂದಾಗ ಬೇರೆ ಪಾತ್ರೆಯಿಡು ಎಂದು ಹೇಳಬಲ್ಲರು. ಮಡಿಹೆಂಗಸು 'ಮಡಿ'ಯಾಗದೇ ಉಳಿಯಬಹುದೆಂಬ ನೀತಿಯನ್ನು ಸ್ವೀಕರಿಸಿದಂತಿದ್ದಾರೆ. ಆಚರಣೆಗಳಲ್ಲಿ ನಂಬಿಕೆ ಕಳೆದುಕೊಳ್ಳುತ್ತಿರುವ ವರ್ಗಸೃಷ್ಟಿಯಾಗುತ್ತಿದೆ. ಇವು ಸಾಮಾಜಿಕ ಬದಲಾವಣೆಗಳೆಂದು ಗುರುತಿಸಬಹುದಾದರೂ, ಜಾತೀಯತೆ ಬೇರೆ ಬೇರೆ ಸ್ವರೂಪದಲ್ಲಿ ಆಚರಣೆಗೆ ಬರುತ್ತಿರುವುದನ್ನು ಲೇಖಕ ಗಮನಿಸಿದಂತೆ ಕಾಣುವುದಿಲ್ಲ. ಸ್ವಜನ ಪಕ್ಷಪಾತ, ಸ್ವಹಿತಾಸಕ್ತಿಯ ವಿನಾಶಗಳಲ್ಲಿರುವ ಜಾತೀಯತೆಯನ್ನು ಕಾಣುವುದು ವಸುದೇಂದ್ರರಿಗೆ ಸಾಧ್ಯವಾಗಿಲ್ಲ. ಇದನ್ನೇ ನಾನು ಆರಂಭದಲ್ಲಿ ಬಿರುಕು ಎಂದು ಗುರುತಿಸಿದ್ದು.

ಅನಂತಮೂರ್ತಿಯವರ 'ಕ್ಲಿಪ್ ಜಾಯಿಂಟ್' ಕಥೆಯು ಸಂಸ್ಕೃತಿಯ ಮುಖಾಮುಖಿಯ ಧೋರಣೆಗಳನ್ನು ತೆರೆದಿಡುತ್ತದೆ. ಈ ರೀತಿ ಎರಡು ಭಿನ್ನ ಸಂಸ್ಕೃತಿಗಳ ಪರಾಮರ್ಶೆಗಳನ್ನು ಮಾಡುವ ಅನೇಕ ಕಥೆಗಳನ್ನು ವಸುದೇಂದ್ರರಲ್ಲಿಯೂ ಕಾಣಬಹುದು. ಅನಂತಮೂರ್ತಿಯರು ಎತ್ತುವ ಪ್ರಶ್ನೆ ತಾತ್ವಿಕ ಸ್ವರೂಪದಲ್ಲಿದ್ದರೆ, ವಸುದೇಂದ್ರರಲ್ಲಿ ಅವು ಸಾಫ್ಟ್‌ವೇರ್‌ನ ಲೋಕದ ಹುಳುಕುಗಳನ್ನು ಹೋಲಿಸಿ ನೋಡುವುದರ ಹಂತದಲ್ಲಿ ನಿಲ್ಲುತ್ತದೆ. ನವವಸಾಹತುಶಾಹಿ ಧೋರಣೆಗಳನ್ನು ಕುರಿತು ಒಂದು ತಾತ್ಮಿಕ ನಿಲುವ ಇಲ್ಲದಿರುವುದು ಅನ್ವೇಷಣೆಯ ಕೊರತೆಯಂತೆ ಕಾಣುತ್ತದೆ. ವ್ಯವಸ್ಥೆಯ ಭಾಗವಾಗಿದ್ದುಕೊಂಡು ಇಬ್ಬಂದಿತನದ ಭಾವ ಅನುಭವಿಸುವುದು ಒಳತೋಟಿಗಳಾಗುವುದಿಲ್ಲ. ನಾಜೂಕಿನ ಕ್ರೌರ್ಯ, ಉಪಭೋಗ ಸಂಸ್ಕೃತಿಗಳು ಸೃಷ್ಟಿಸುವ ನಿರ್ಮಾನುಷತ್ವವದ ಅರಿವು ಇಲ್ಲಿ ತೀವ್ರತೆಯಿಂದ ಪ್ರತಿಪಾದಿಸಲ್ಪಡುವುದೇ ಇಲ್ಲ. ಕಥೆಗಾರನಾಗಿ ಭಾವಿಸಿ ಬರೆದಾಗ ತೀವ್ರತೆಯ ಕೊರತೆ ಇಲ್ಲಿ ಸ್ವಲ್ಪಮಟ್ಟಿಗೆ ಕಾಡುತತದೆ. ಈ ಕಾರಣದಿಂದಲೇನೋ ಅವರ ಕಥೆಗಳು ರಂಜಿಸುತ್ತವೆ; ಹಳೆನೆನಪುಗಳಿಗೆ ತೆರಳಿ ನಮ್ಮನ್ನು ಮುದಗೊಳಿಸುತ್ತವೆ. ಈ ಲೋಕದ ಎದುರಿಗಿರುವ ಅರ್ಥಸಾಫಲ್ಯದ ಜಗತ್ತಿನ ಕ್ರೌರ್ಯಗಳನ್ನು ಖಂಡಿಸುತ್ತವೆ, ಆದರೂ ಅವುಗಳಲ್ಲಿರುವ ಒಂದು ದ್ವಂದ್ವವಿನಾಸ, ಸಮಾಜಗಳಲ್ಲಿಯೇ ಉಂಟಾದ ಕಂದರಗಳು. ಭಾಷೆಯ ಕಾರಣದಿಂದಲೂ

ಉಂಟಾದ ಕಂದರಗಳು. ಅವುಗಳ ಮೇಲೆ ಬರೆಯುವ ಬರಹಗಾರ ಯಾವ ಸಮಾಜಕ್ಕೆ ನಿಷ್ಠನಾಗಿ, ಯಾವ ಮೌಲ್ಯಕ್ಕೆ ತಲೆಬಾಗಬೇಕು ಎಂಬ ದ್ವಂದ್ವವನ್ನು ಅನುಭವಿಸಬೇಕಾಗುತ್ತದೆ ಎಂಬುದನ್ನು ಹೇಳುವಂತಿವೆ.

ಆಧುನಿಕೋತ್ತರದ ಸಾಹಿತ್ಯದ ಕಲ್ಪನೆಗಳಲ್ಲಿ 'ಸಾಹಿತ್ಯಾತ್ಮಕ" ಎನ್ನುವುದೇನೋ ಇಲ್ಲ. ಅದರಂತೆ, ಬರೆದುದೆಲ್ಲವನ್ನು ಕಥಾನಕಗಳಾಗಿ ಮಾಡುವ ಕೌಶಲವನ್ನು ವಸುದೇಂದ್ರ ಸಾಧಿಸುತ್ತಾರೆ. ಆದರೆ, ಸಾಹಿತ್ಯವನ್ನು ಎಲ್ಲರಿಗೂ ಮುಟ್ಟಿಸುವಂತೆ ಬರೆಯುವ ಅವರಿಗೆ ತಾತ್ವಿಕ ಖಚಿತ ಸ್ವರೂಪಗಳಿಲ್ಲದಿರುವುದು, ಅವರ ಕಥೆಗಳನ್ನು ರಂಜನೆಗೆ, ನೆನಪುಗಳನ್ನು ಮೆಲುಕು ಹಾಕುವ ಸಾಹಿತ್ಯಕ್ಕೆ ಸೀಮಿತಗೊಳಿಸಿಬಿಟ್ಟಿರುವಂತೆ ನನಗೆ ಕಾಣುತ್ತದೆ. 'ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳು' ಎಂಬ ಪ್ರಬಂಧದಲ್ಲಿ ಸೂಚಿಸುವ ಸಾಮಾಜಿಕ ಬದಲಾವಣೆಯ ಕಾಲವನ್ನು ಮುಖ್ಯವಾಗಿ ಅನುಭವಿಸಿದ್ದು ಯಾವ ಮಧ್ಯಮವರ್ಗ ಎಂಬ ಅವರನ್ನು ಕಾಡುವಂತಾಗಬೇಕಲ್ಲವೇ? ಭಿನ್ನತೆಯನ್ನು ಗುರುತಿಸುವ ಅವರ ಬರಹಗಾರನ ಮನಸ್ಸು ಸೂಕ್ಷ್ಮ ಸಂಗತಿಗಳನ್ನು ಹೊಳೆಯಿಸುವಂತಾದರೆ ಅವರ ಬರಹದ ವ್ಯಾಪ್ತಿ ಹೆಚ್ಚು ವಿಸ್ತೃತತೆಯನ್ನು ಪಡೆಯುತ್ತದೆ ಎಂಬ ಆಶಯ ನನ್ನದು.

ಅಡಿಟಿಪ್ಪಣಿ:

1. ಕುವೆಂಪು ಕೃತಿ ವಿಮರ್ಶೆ :ಮೈ.ವಿ.ವಿ ಮೈ ವಿವಿ ಪ್ರಸಾರಂಗ ಮುದ್ರಣ 2010 ಪುಟ ಸಂಖ್ಯೆ : 309
2. ಡಾ. ಗಿರಡ್ಡಿಗೋವಿಂದರಾಜು ಕಲ್ಪಿತ ವಾಸ್ತವ ಕನ್ನಡ ಸಣ್ಣಕತೆ ಸಾಹಿತ್ಯ ಪ್ರಕಾಶನ ಮುದ್ರಣ 2009
3. ಅಂತರ್ಜಾಲ ಕೃಪೆ : ಬಳ್ಳಾರಿ ಜಿಲ್ಲಾ ಸಾಹಿತ್ಯ

ಅಧ್ಯಾಯನದ ಫಲಿತಗಳು :

ವಸುದೇಂದ್ರ ಎಂಬ ವಿಶಿಷ್ಟವಾದ ಪ್ರತಿಭೆ ತಮ್ಮ ಸರಳವಾದ ಬರಹದ ಶೈಲಿ, ಭಾವನಾ ಲೋಕದಲ್ಲಿ ಓದುಗರನ್ನು ತೇಲಿಸುವ ಶಕ್ತಿಯ ಆಳವಾದ ಅನುಭವದ ಹೊತ್ತಿಗೆಯನ್ನು ಹೊತ್ತಗೆಯಲ್ಲಿ ಅರಳಿಸುವ ಕಥಾಗರ. ಆದರೆ, ಕಥೆಗಷ್ಟೇ ಸೀಮಿತಗೊಳ್ಳದೆ ಕಾದಂಬರಿಕಾರ, ಲಲಿತ ಪ್ರಬಂಧಕಾರ, ಒಳ್ಳೆಯ ಮಾತುಗಾರ ಮೇಲಾಗಿ ಸಹೃದಯರ ಗೆಳೆಯ. ದೈನಂದಿನ ಜೀವನದ ಇರಸು–ಮುರುಸು, ಮನುಷ್ಯ ಸಂಬಂಧಗಳ ತಾಳಮೇಳ, ಹಳ್ಳಿಯ ಜೀವನ, ಜನರ ಮುಗ್ಧತೆ ಇಂತಹ ಹಲವಾರು ಸಣ್ಣ ಪುಟ್ಟ ವಿಚಾರಗಳೂ ಇವರ ಕೃತಿಯಲ್ಲಿ ಮುಖ್ಯವಾಗುತ್ತವೆ. ಅಷ್ಟರ ಮಟ್ಟಿಗೆ ಅವು ಇವರನ್ನು ಕಾಡಿವೆ ಎಂದರೆ ತಪ್ಪಾಗುವುದಿಲ್ಲ. ಅಂತೆಯೇ ಸರ್ವೇ ಸಾಮಾನ್ಯ ವಿಚಾರಗಳನ್ನು ರಸವತ್ತಾಗಿ, ವಿಭಿನ್ನವಾಗಿ ತಿಳಿಸಿಕೊಡುವ ಪ್ರಯತ್ನ ಇವರ ಎಲ್ಲಾ ಸಾಹಿತ್ಯ ಸೃಷ್ಟಿಗಳಲ್ಲಿ ಕಾಣಬಹುದಾದ ಒಂದು ಪ್ರಧಾನವಾದ ಅಂಶ. ಹೀಗೆ ವಸುದೇಂದ್ರರು ಮೂಲತಃ ಸಾಫ್ಟ್‌ವೇರ್ ಉದ್ಯಮಿಯಾದರೂ ಪ್ರವೃತ್ತಿಯಿಂದ ಪಕ್ಕಾ ಲೇಖಕ. ಕೆಲಸದ ಒತ್ತಡದ ನಡುವೆಯೂ ಸಿಕ್ಕ ಸಮಯದಲ್ಲೇ ಸಾಹಿತ್ಯ ರಚನಾಕ್ರಿಯೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವ ಇವರು ಈಗಂತೂ ತಮ್ಮ ಸಮಯವನ್ನು ಸಾಹಿತ್ಯಕ್ಕಾಗಿಯೇ ಮುಡಿಪಾಗಿಟ್ಟಿದ್ದಾರೆ. ಯಾಕೆಂದರೆ ತಮ್ಮ ಸಾಫ್ಟ್‌ವೇರ್ ಕೆಲಸದಿಂದ ಸ್ವಲ್ಪ ಕಾಲದವರೆಗೆ ದೂರ ಬಂದಿದಾರೆ. ಕುಟುಂಬದಲ್ಲಿ ಯಾವುದೇ ಸಾಹಿತ್ಯಿಕ ವಾತಾವರಣದಿಂದ ಹಿನ್ನೆಲೆಯಿಲ್ಲದಿದ್ದರೂ ಬಾಲ್ಯದಿಂದ ಇಂದಿನವರೆಗಿನ ಜೀವನಾನುಭವ ಮೇಲಾಗಿ ಅವರ ತಾಯಿ ದಿನವೂ ಹೇಳುತ್ತಿದ್ದ ಕಥೆಗಳು ಅವರನ್ನು ಕಥೆ, ಪ್ರಬಂಧಗಳನ್ನು ರಚಿಸುವಂತೆ ಪ್ರೇರೇಪಿಸಿತು.

ವಸುಧೇಂದ್ರ ಸಾಹಿತಿಯಾಗಿ ಕಥೆಗಳನ್ನು, ಪ್ರಬಂಧಗಳನ್ನು ಬರೆದಿದ್ದಾರಾದರೂ ಅವರ ಹೆಸರೇಕೋ ಪ್ರಬಂಧಗಳ ಜೊತೆಯೇ ತಳುಕು ಹಾಕಿಕೊಳ್ಳುವಂತೆ ಕಾಣುತ್ತದೆ. ಪ್ರಬಂಧ ಮತ್ತು ಹರಟೆಗಳಲ್ಲಿದ್ದ ಅಂತರ ಎಂದರೆ ಗಂಭೀರ ಮತ್ತು ಲಘುದಾಟಿಯದು. ಅವೆರಡನ್ನೂ ತಿರಸ್ಕರಿಸಿ ತಮ್ಮ ಪ್ರಬಂಧಗಳನ್ನು ಸುಲಲಿತ, ಸರಾಗ ಓದಿಗೆ ತೆರೆದುಕೊಳ್ಳುವ ಸೂಚನೆಯನ್ನು ವಸುಧೇಂದ್ರ ನೀಡುತ್ತಾರೆ. ಕಥೆ ಪ್ರಬಂಧಗಳಲ್ಲಿ ಅಂತಹ ಭೇದವನ್ನೇನೂ ವಸುಧೇಂದ್ರ ಮಾಡಿಕೊಂಡಂತೆ ಕಾಣುವುದಿಲ್ಲ. (ಅವರ ಒಂದು ಸಂಕಲನದಲ್ಲಿ ಪ್ರಬಂಧ–ಕಥೆಗಳೆರಡೂ ಒಟ್ಟಿಗೆ ಇರುವುದು ಇದಕ್ಕೆ ಸಾಕ್ಷಿ). ಕಥೆಯಾಗಲಿ, ಪ್ರಬಂಧವಾಗಲಿ ತಮ್ಮ ಅನುಭಗಳನ್ನು ನಿರೂಪಿಸುವ ಕಥಾನಕಗಳೆಂಬಂತೆ

ಭಾವಿಸಿ ಬರೆಯುವ ಲೇಖಕ ಅವರು. ಅಂದರೆ, ಒಂದೇ ದ್ರವ್ಯವನ್ನು 'ಅದಕು ಇದಕು ಎದಕು' ಎಂದು ಬಳಸಿರುವುದನ್ನು ಗಮನಿಸಬಹುದು.

ಹೀಗೆ ವಸುಧೇಂದ್ರ ಬರೆಯುತ್ತಿರುವ ಕಾಲದಲ್ಲಿಯೇ ಸಾಹಿತ್ಯದ ಆಶ್ರಯ ಅರ್ಥಗಳು ಬದಲಾಗುತ್ತಾ ಬಂದಿದ್ದು, ಚೌಕಟ್ಟುಗಳನ್ನು ಮೀರಿ ವಿಭಿನ್ನ ಜಾಡುಗಳನ್ನು ಸಾಹಿತ್ಯವು ಹುಡುಕುತ್ತಿದೆ ಎನಿಸುತ್ತಿದೆ. ಹಾಗೆ ನೋಡಿದರೆ, ಪ್ರಾಕಾರಗಳೆಂಬುದೇ ಭ್ರಮೆಯಿರಬೇಕು. ಒಳ್ಳೆಯ ಸಾಹಿತ್ಯವೆಂಬುದು ಸಾರವತ್ತಾಗಿರುವುದು ಮುಖ್ಯವೇ ವಿನಾ ಪ್ರಾಕಾರಗಳಲ್ಲಿ ಯಶಸ್ವಿಯಾಗುವುದಲ್ಲ. ಕಥೆ, ಕವನ ಇತ್ಯಾದಿಗಳು ಶುದ್ಧಾಂಗವಾಗಿ ಹೀಗೆ ಇರಬೇಕೆಂಬ ನಿಯಮಾವಳಿಗಳು ಪಠ್ಯದ ಆಕೃತಿಯನ್ನು ಕುರಿತಂತದ್ದಾಗಿದೆ. ಇದರಾಚೆಗೆ ಶುದ್ಧ ಪದ್ಯವೆಂಬುದು ಏಝ್ರಾಪೌಂಡ್‌ನ ಮಾತಿನಲ್ಲಿ ಹೇಳುವುದಾದರೆ ಗದ್ಯದ ಘಾಟನ್ನು ಹೊಂದಿರಬಹುದು. ಅಥವಾ ಒಳ್ಳೆಯ ಗದ್ಯವೆಂಬುದು ಕಾವ್ಯಾತ್ಮಕವಾಗಿಯೂ ಇರಬಹುದು. (ಈ ಸಾಧ್ಯತೆಗಳಲ್ಲೇ ವಿಮರ್ಶಕರು ಒಡಲಾಳ, ಮಲೆಗಳಲ್ಲಿ ಮದುಮಗಳನ್ನು ಗದ್ಯದಲ್ಲಿರುವ ಪದ್ಯ ಎಂದು ಗುರುತಿಸುತ್ತಿದ್ದಾರೆ). ಆಧುನೀಕೋತ್ತರ ಸಾಹಿತ್ಯವು ಅಭಿವ್ಯಕ್ತಿಯ ಸಾಧ್ಯತೆಗಳನ್ನು ಬಳಸಿಕೊಳ್ಳುವುದರಲ್ಲಿ ಮುಂದಾಗುತ್ತದೆ. ಅಲ್ಲಿ ಆಕೃತಿಯ ಹಂಗನ್ನು ತೊರೆಯುವುದರ ಬಗ್ಗೆಯೇ ಒಲವು ಹೆಚ್ಚು. ಜನರ ಅಭಿರುಚಿಗೆ ಒಗ್ಗುವಂತಹ ಯಾವುದೇ ಮಾದರಿಯಾದರೂ ಕಥಾನಕಗಳಾಗಿ ಬರಬಹುದಾದ ಸಾಧ್ಯತೆಗಳನ್ನು ಆಧುನಿಕೋತ್ತರ ಸಾಹಿತ್ಯ ಹೊಂದಿದೆ. ಮೊದಲಿಗೆ 'ಇತರೇ' ಜಾತಿಗೆ ಸೇರಿಸುತ್ತಿದ್ದ ಬರಹಗಳು ಸಾಹಿತ್ಯದೊಳಗೆ ಪ್ರವೇಶ ಪಡೆಯುತ್ತಿವೆ ಎಂಬುದು ಬದಲಾವಣೆಯ ಗಾಳಿಯನ್ನು ಸೂಚಿಸುತ್ತಿದೆ. ಶ್ರೇಷ್ಠತೆಯ ವ್ಯಸನವುಳ್ಳ ಅನೇಕರಿಗೆ ಸಾಹಿತ್ಯ ತನ್ನ ನಿರ್ದಿಷ್ಟತೆಯನ್ನು ಕಳೆದುಕೊಳ್ಳುತ್ತಿದೆ ಎಂಬುದು ಆತಂಕ ಹೆಚ್ಚಿಸುತ್ತದೆ. ಆದರೆ ಹೆಚ್ಚು ಜನಪ್ರಿಯ ಧೋರಣೆಗಳನ್ನು ಬಳಸಿಕೊಂಡ ಸಾಹಿತ್ಯವು ಇನ್ನೊಂದು ಹಂತದಲ್ಲಿ ಸಂಸ್ಕೃತಿ ಪಠ್ಯವಾಗಿ ಕಾಣುತ್ತಿರುವುದು ಸತ್ಯವಾಗಿದೆ.

ವಸುಧೇಂದ್ರ ಪ್ರಬಂಧಗಳು/ಕಥೆಗಳು ಎಂಬ ಕಥಾನಕಗಳು ಹೆಚ್ಚು ಜನಪ್ರಿಯವಾಗುತ್ತಿರುವುದಕ್ಕೆ ಈ ಕಾಲದ ಮಹಿಮೆಯೂ ಕಾರಣವಿರಬಹುದು!. ಎಲ್ಲರನ್ನು ಸೆಳೆದುಕೊಳ್ಳುವ ಗುಣ, ರಂಜನೆ, ಲಘುದಾಟಿಯ ಶೈಲಿಗಳು ಅದರಲ್ಲಿವೆ. ಅವರೇ ಹೇಳುವಂತೆ ಅವರ ಪ್ರಬಂಧಗಳು ಸುಲಲಿತ ಪ್ರಬಂಧಗಳು. ಸರಾಗವಾಗಿ ಓದಿಸಿಕೊಂಡು ಹೋಗುವುದರ ಜೊತೆ, ಪುನಃ ಮೆಲುಕು ಹಾಕಬೇಕೆನಿಸುವ ಅಂಶಗಳನ್ನು ಸೇರಿಸಿಕೊಳ್ಳುತ್ತವೆ ಅವು. ಇತ್ತೀಚಿನ ದಿನಗಳಲ್ಲಿ ಸಾಹಿತ್ಯಕ್ಕೆ ವಿಮುಖರಾಗುವ ಓದುಗರ ಬಗ್ಗೆ ಚರ್ಚಿಸಲಾಗುತ್ತಿದೆಯಲ್ಲವೇ. ಅದಕ್ಕೆ ಮಾಧ್ಯಮಗಳು ಅವಸರದ

ಬದುಕು – ಇವುಗಳನ್ನೆಲ್ಲ ಹೊಣೆ ಮಾಡಿ ಹಲವರು ಮಾತನಾಡುವುದನ್ನು ಕೇಳಿರುತ್ತೇವೆ. ಇದು ಮತ್ತೆ ಸಾಂಪ್ರದಾಯಿಕ ಓದುಗರನ್ನು ಕುರಿತ ಮಾತು. ಜನರನ್ನು ತಲುಪುವ ಸಾಹಿತ್ಯದ ಹಿಂದೆ ಮುಜುಗರಕ್ಕೀಡಾದಂತೆ ಇಂದು ಇಲ್ಲ. ಈಗಿನ ಕಥಾನಕಗಳಿಗೆ ಹೆಚ್ಚಿನ ಸಂಖ್ಯೆಯ ಓದುಗರಿದ್ದಾರೆ. ಈ ಎಲ್ಲ ವಿಷಯಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಹೇಳುವುದಾದರೆ, ವಸುಧೇಂದ್ರ ಗೆದ್ದಿದ್ದಾರೆ. ಅವರ ಮೊದಲೇ ಹೇಳಿದಂತೆ 'ಕಗ್ಗ'ದ ಭಾಷೆಯಲ್ಲ. ಕಥೆ ಹೇಳಲು ಬೇಕಾದ ರಂಜನೆಯ ಅಂಶವನ್ನು ಅವರು ಮರೆತಿಲ್ಲ. ಅದನ್ನು ಬೇಕಾದರೆ ಅಜ್ಜಿ ಕಥೆಗಳ ಮೂಲಕವಾದರೂ ಸಾಧಿಸಬಹುದು ಎಂಬ ನೀತಿ ಅವರದು. ಅದರಲ್ಲಿ ಅವರಿಗೆ ಸಂಕೋಚಗಳಿಲ್ಲ. ಅಡಗೂಲಜ್ಜಿ ಕಥೆಗಳು, ಹಾರಿಪಾಟರ್ ಕಥೆಗಳಲ್ಲಿ ಮರುಸೃಷ್ಟಿಯಾಗುತ್ತಿರುವಾಗ ಇದು ಅಸಂಗತವೇನೂ ಅಲ್ಲ. 'ಸುಳ್ಳು ನಮ್ಮಲ್ಲಿಲ್ಲವಯ್ಯ, ಸುಳ್ಳೇ ನಮ್ಮನಿದೇವರು" ಕಥೆಯಲ್ಲಿ ದೆವ್ವಗಳೆಲ್ಲ ಮನುಷ್ಯರ ಜೀವನದ ಜೊತೆ ಚೆನ್ನಾಗಿ ಹೊಂದಿಕೊಂಡು ಹೋಗುವ ಪ್ರಸಂಗವಿದೆ. ಇಂತಹ ಕಥೆಗಳ ರಂಜನೀಯ ಅಂಶಗಳನ್ನು ಬಳಸಿಕೊಂಡು ಕಥೆ ಹೆಣೆಯಬಲ್ಲನೆಂಬ ವಿಶ್ವಾಸ ವಸುಧೇಂದ್ರರಿಗೆ ಖಂಡಿತಾ ಇದೆ ಎನ್ನಬಹುದು.

ವಸುಧೇಂದ್ರರ ಸಾಹಿತ್ಯ ಜನಪ್ರಿಯವಾಗುವುದಕ್ಕೆ ಕಾರಣ, ನಾನು ಊಹಿಸುವಂತೆ, ಮೇಲೆ ಚರ್ಚಿಸಿದ ಅಂಶಗಳಷ್ಟೇ ಅಲ್ಲದೆ, ನಾಸ್ಟಲ್ಜಿಯಾದ ಅಂಶಗಳನ್ನು ಸೇರಿಸಿ ಬರೆಯುತ್ತಿರುವುದೂ ಕಾರಣವಿದ್ದೀತು. ಮತ್ತು ಹಳೆಯ ಬದುಕು ಮೆಲುಕು ಹಾಕುವ, ಹೊಸ ಬದುಕಿನ ತಲ್ಲಣಗಳನ್ನು ನೋಡುತ್ತಿರುವ ಪೀಳಿಗೆಯನ್ನು ಕೇಂದ್ರವಾಗಿಟ್ಟುಕೊಂಡು ಬರೆಯುವ ಚಾತುರ್ಯ ಅದು ಎಂದು ನನಗನ್ನಿಸುತ್ತದೆ. ಕೆಲವೇ ವರ್ಷಗಳಲ್ಲಿ ಕಾಣುವ ಆರ್ಥಿಕ ಸ್ಥಿತ್ಯಂತರಗಳು ಸಾಮಾಜಿಕ ಮೌಲ್ಯಗಳನ್ನೂ, ಸಂರಚನೆಗಳನ್ನೂ ಅಲ್ಲೋಲಕಲ್ಲೋಲ ಮಾಡಿದುವಲ್ಲವೇ? ಅಂತಹ ಪರಿಣಾಮಗಳು ಸುಶಿಕ್ಷಿತ, ಓದುಬಲ್ಲ ಮಧ್ಯಮವರ್ಗದ ಜನರಿಗೆ ಹಣಗಳಿಕೆಯ ಸಾಧ್ಯತೆಗಳನ್ನೂ, ಪ್ರಪಂಚ ಪರ್ಯಟನೆಯ ಸುಖಗಳನ್ನೂ ಏಕಕಾಲಕ್ಕೆ ತಂದುಕೊಟ್ಟವು. ತೃಪ್ತಿಯ ಗೆರೆಯನ್ನು ದಾಟಿ ಮಹತ್ವಾಕಾಂಕ್ಷೆಯ ಬೆನ್ನುಹತ್ತಿರುವ ವರ್ಗ ಹಾಗೂ ಅವರು ಪೊರೆ ಕಳಚಿಕೊಂಡು ಬಂದ ಹಳ್ಳಿಯ ಅಥವಾ ಅರೆ ನಗರ ಜೀವನಗಳ ಅನುಭವ ಪ್ರಪಂಚ – ಇವರೆಡರ ನಡುವೆ ಇರುವ ಅಂತರವನ್ನು ಗುರುತಿಸುವುದರಲ್ಲಿ ವಸುಧೇಂದ್ರ ತೊಡಗಿರುವುದರಿಂದ, ಅದು ಸಮಕಾಲೀನ ಚರಿತ್ರೆಯ ಭಾಗವಾಗಿ ಯಶಸ್ವಿಯೆನಿಸಿರಬಹುದು.

ವಸುಧೇಂದ್ರ ಅವರ ಪ್ರಬಂಧ / ಕಥೆಗಳು (ಅಥವಾ ಕಥೆಗಳ ಮುಂಚೆ ಕೊಟ್ಟಿರುವ ಕಿರುಗತೆ, ಪುಟ್ಟ ಪ್ರಸಂಗಗಳು) ಬಂದು ಸ್ಥಿತ್ಯುತರದ ಸನ್ನಿವೇಶದಲ್ಲಿ ನಿರೂಪಿತಗೊಂಡವು. ಅವರ ಜನಪ್ರಿಯ ಪ್ರಬಂಧ ಸಂಕಲನ 'ನಮ್ಮಮ್ಮ ಅಂದ್ರೆ ನಂಗಿಷ್ಟ' ಪುಸ್ತಕವನ್ನು ಅವರು ಅರ್ಪಿಸಿರುವುದು, 'ಬಾಲ್ಯಕೊಟ್ಟ ಸಂಡೂರಿಗೆ, ಬದುಕು ಕೊಟ್ಟ ಬೆಂಗಳೂರು' – ಈ ಎರಡೂ ಪ್ರದೇಶಗಳೇ ಎರಡು ಭಿನ್ನ ಸಂವೇದನೆಗಳನ್ನು ಸೃಷ್ಟಿಸುತ್ತವೆ. ಬಾಲ್ಯದ ಅನುಭವಗಳು ತೋರಿಸುವ ಸಾಮಾಜಿಕ ಸ್ಥಿತಿಗತಿಗಳು ಬೇರೆ. ಬೆಂಗಳೂರು ಬದುಕಿನ ಅನುಭವಗಳು ತೋರಿಸುವ ಸಾಮಾಜಿಕ ಸ್ಥಿತಿಗತಿಗಳು ಬೇರೆ, ಬೆಂಗಳೂರಿನ ಬದುಕಿನ ಅನುಭವಗಳು ತೋರಿಸುವ ಪ್ರಪಂಚ ಬೇರೆ – ಈ ಭಿನ್ನ ಪ್ರಪಂಚಗಳನ್ನು ಕಂಡಹಾಗೇ ಬಣ್ಣಿಸುತ್ತ ಅವುಗಳನ್ನು ಕಥಾನಕಗಳಾಗಿಸುತ್ತಾರೆ ಲೇಖಕ. ಬಳ್ಳಾರಿಯ ಬಯಲು ಸೀಮೆಯ ಲೋಕಕ್ಕೂ, ಬೆಂಗಳೂರಿನ ಕಾರ್ಪೋರೇಟ್ ಸಂಸ್ಕೃತಿಯ ಲೋಕಕ್ಕೂ ವ್ಯತ್ಯಾಸಗಳಿವೆ. ಅವು ಒಂದಕ್ಕೊಂದು ಹೊಂದುವುದಿಲ್ಲ. ಸಂಸ್ಕೃತಿ ಇರಲಿ, ಹವಾಮಾನ ಕೂಡ ಹೊಂದುವುದಿಲ್ಲ. ಇದನ್ನು ಲೇಖಕ ವಸುಧೇಂದ್ರರು ಬಲ್ಲರು.

ಎರಡು ಭಿನ್ನಲೋಕಗಳ ಬದುಕು, ಸಂಸ್ಕೃತಿಗಳ ಕಂದರ ಕಾಣುವಂತೆಯೇ ಇದೆ. ಕಾರ್ಪೋರೇಟ್ ಜಗತ್ತಿನ ಅರ್ಥಶಾಸ್ತ್ರೀಯ ವ್ಯವಸ್ಥೆಯಿಂದ ಜೀವಂತವಿರುವ ಲೋಕ ಬೆಂಗಳೂರಿನದು. ಅಲ್ಲಿ ಪ್ರತಿಪಾದಿಸಲ್ಪಡುವ ಮೌಲಗಳೂ! ಭಿನ್ನ ಸ್ವರೂಪದವು. ಬಯಲು ಸೀಮೆಯ ಬದುಕು ಬಡತನದ್ದು ಅಥವಾ ಬಡತನಕ್ಕಿಂತ ಸ್ವಲ್ಪ ಮೇಲೆರಿದ ಮಧ್ಯಮ ವರ್ಗದ್ದು. ಇವರೆಡರ ಮಧ್ಯೆ ನಿಂತಿರುವ ಲೇಖಕ ಭಾವಾನಾತ್ಮಕ ಚೈತನ್ಯವನ್ನು ಪೂರೈಸಿಕೊಳ್ಳಲು ತನ್ನ ಬಾಲ್ಯ ಕಾಲವನ್ನು ನೆಚ್ಚಿಕೊಂಡಿದ್ದಾನೆ. ಹಣಕಾಸಿನ ಸೌಲಭ್ಯ ಮತ್ತಿತರ ಸುಖಗಳನ್ನು ಕೊಡುವ ಜಗತ್ತನ್ನು ಉಪಯೋಗಿಸಿಕೊಳ್ಳುತ್ತಲೇ ಅದರ ಬಗ್ಗೆ ಸಂಶಯಗಳನ್ನಿಟ್ಟುಕೊಂಡಿದ್ದಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಲೇಖಕ ವೈರುಧ್ಯಗಳನ್ನು ಗುರುತಿಸಿಕೊಂಡಿದ್ದಾನೆ. ಆದರೆ, ಆ ಜಗತ್ತುಗಳ ಮುಖಾಮುಖಿಯನ್ನು ತೀವ್ರವಾಗಿ ಗುರುತಿಸುವುದಿಲ್ಲ ಎನ್ನುವುದು.

ಈ ಹೊತ್ತಿಗೆ ಅತ್ಯಂತ ಜನಪ್ರಿಯ ಕಥೆಗಾರರಲ್ಲಿ ಒಬ್ಬರಾದ ವಸುದೇಂದ್ರರು ತಮ್ಮ ಸರಳ ಉತ್ತರ ಕರ್ನಾಟಕದ ಗ್ರಾಮೀಣ ಭಾಷೆಯ ಪ್ರಬಲವಾದ ಬಳಕೆಯ ಜೊತೆಗೆ ಓದುಗರ ಭಾವಾಲೋಕವನ್ನು ತಟ್ಟುವ, ಓದುಗರು ಭಾವಲೋಕದಲ್ಲಿ ವಿಹರಿಸುವಂತೆ ಮಾಡಿದ ವಿಶೇಷ ಶಕ್ತಿಯಿದೆ. ಅದೇ ಕಾರಣದಿಂದಲೋ ಏನೋ ಅಥವಾ ತಾಯಿ ಮಗನ ಸಂಬಂಧವನ್ನು ಸೂಕ್ಷ್ಮವಾಗಿ ವಿವೇಚಿಸಿದ್ದರ ಕಾರಂದಿಂದಲೂ ಇರಬಹುದು "ನಮ್ಮಮ್ಮ ಅಂದ್ರೆ ನಂಗಿಷ್ಟ" ಎನ್ನುವ

ಪ್ರಬಂಧ ಸಂಕಲನವು ಹತ್ತನೇ ಮುದ್ರಣಕ್ಕೆ ತಯಾರಾಗಿ ನಿಂತಿದೆ. ಇದೇ ರೀತಿಯಲ್ಲಿ ಇವರ ಕೃತಿಗಳನ್ನು ಬಿಸಿಬಿಸಿ ಕಜ್ಜಾಯದಂತೆ ಓದುಗರು ಸ್ವೀಕರಿಸಿದ್ದಾರೆ.

ವಸುದೇಂದ್ರರು ಸಾಹಿತ್ಯ ರಚಿಸಲು ಪ್ರೇರಣೆಯಾದ, ಪ್ರಭಾವ ಬೀರಿದ ಅಂಶಗಳು ಹೀಗಿವೆ; ಬಾಲ್ಯದಿಂದಲೂ ತಾಯಿ ಹೇಳುತ್ತಿದ್ದ ಕಥೆಗಳು, ಬದುಕಿನ ಅನುಭವಗಳು, ಹೆಚ್ಚು ಹೆಚ್ಚಾಗಿ ನೋಡಿದ ಪಾಶ್ಚಾತ್ಯ ಅಥವಾ ಆಂಗ್ಲ ಸಿನಿಮಾಗಳು – ಹೀಗೆ ಅಂತಹ ಸಿನಿಮಾಗಳನ್ನು ನೋಡುವುದರಿಂದ ಹೊಸತನ, ಹೊಸಹೊಳಪು, ಹೊಸ ನೋಟಗಳು ಬೀರಲು ಸಾಧ್ಯ ಎಂದೇ ಅವರು ನಂಬಿದ್ದಾರೆ. ಅದೇ ರೀತಿ ಕುವೆಂಪು, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಹಾಗೂ ಶಿವರಾಮ ಕಾರಂತರು ಅವರನ್ನು ಬಹಳಷ್ಟು ಪ್ರಭಾವಿಸಿದ್ದಾರೆ ಎನ್ನುತ್ತಾರೆ. ಕುವೆಂಪುರವರ ಕಲಾತ್ಮಕತೆ, ಮಾಸ್ತಿಯವರ ಧೈರ್ಯ, ಕಾರಂತರ ಅನುಭವಗಳನ್ನು ಓದಿದ ಇವರನ್ನೂ ಸಾಹಿತ್ಯ ರಚಿಸುವಂತೆ ಪ್ರೇರೇಪಿಸಿತು. ಬದುಕಿನ ಬಗೆಗಿನ ಪ್ರೀತಿ, ಕಾಡುವ ಮನುಷ್ಯ ಮನುಷ್ಯ ಸಂಬಂಧಗಳು ಇವರನ್ನು ಸದಾ ಕಾಡುವುದಿದೆಯಂತೆ. ಪರಿಸರ ಯಾವುದಾದರೂ ಸರಿ ಅಲ್ಲಿ ವಾಸಿಸುವ ಜನರೇ ಮುಖ್ಯರೆನಿಸುತ್ತಾರೆ ಅನ್ನುತ್ತಾರೆ. ಇನ್ನು ಇವರ ಕೃತಿಗಳಲ್ಲಿ ಸಾಮಾನ್ಯರಂತಹ ಸಾಮಾನ್ಯರೂ ಅಂದರೆ ತೀರಾ ಕಡೆಗಣಿಸಲ್ಪಟ್ಟವರೂ ಕೂಡಾ ಮುಖ್ಯರಾಗುತ್ತಾರಲ್ಲ. ಲೇಖಕನಿಗೆ 'ಸೂಕ್ಷ್ಮತೆ' ಇರಬೇಕು ಮತ್ತು ಮಕ್ಕಳ ರೀತಿಯಲ್ಲಿ ಬದುಕಬೇಕು ಮತ್ತು ಅಹಂಭಾವವನ್ನು ತೊರೆಯಬೇಕು ಎನ್ನುತ್ತಾರೆ.

ಇವರಲ್ಲಿ ಹುಟ್ಟುವ ಕಥೆ, ಪ್ರಬಂಧ, ಕಾದಂಬರಿಗಳ ವಸ್ತು ಬಹಳ ಹಿಂದಿನಿಂದಲೇ ಮನಸ್ಸಿನಲ್ಲಿ ಕಾಡುತ್ತಿರುತ್ತದೆ. ಅಮೂರ್ತ ರೂಪದಲ್ಲಿ ಬೆಳೆಯುತ್ತಾ ಸಾಗುತ್ತಿರುತ್ತದೆ. ವರ್ತಮಾನಕ್ಕೆ ಸಂವಾದಿಯಾಗಿ ಸಾಹಿತ್ಯ ರಚಿಸಬೇಕು ಎನ್ನುವ ಇವರು ಇತಿಹಾಸ ಉಳಿಸುವುದರಲ್ಲಿ ನಂಬಿಕೆಯನ್ನು ಹೊಂದಿಲ್ಲ. ತಮ್ಮ ಸಾಹಿತ್ಯದ ಮೂಲಕ ಓದುಗರನ್ನು ರಂಜಿಸುವುದಷ್ಟೇ ಅವರ ಉದ್ದೇಶವಲ್ಲ. ಹೊಸತನ್ನು ಹೇಳುವುದರ ಮೂಲಕ ಸಾರ್ವಕಾಲಿಕ ಮೌಲ್ಯಗಳನ್ನು ಪ್ರತಿಪಾದಿಸಬೇಕು ಎನ್ನುತ್ತಾರೆ. ಹಾಗೆಯೇ ಬರವಣಿಗೆಯಲ್ಲಿ ಸಂದರ್ಭಕ್ಕನುಸಾರವಾದ ಅಗತ್ಯವಾದ ಲಾಲಿತ್ಯ, ಅನುಭವ ಎಲ್ಲ ಬೇಕು ಎನ್ನುತ್ತಾರೆ. ಆದರೆ, ಅದರ ಹೆಸರಲ್ಲಿ ಲಾಲಿತ್ಯದ ಅತಿಯಾದ ಹೇರಿಕೆ ಅನುಭವಗಳ ಅನಗತ್ಯ ತುರುಕುವಿಕೆಯಿಂದ ಕೃತಿಯು ಜಡ್ಡು ಹಿಡಿಯುತ್ತದೆ ಎನ್ನುತ್ತ ಮುಗ್ಧತೆಯ ನಗುವನ್ನು ಬೀರುತ್ತಾರೆ. ಸಾಮರಸ್ಯದಿಂದ ಸಂಘರ್ಷವನ್ನು ದೂರ ಮಾಡಬೇಕು ಎನ್ನುತ್ತಾರೆ. ಇನ್ನು ಅವರ ಕೃತಿಗಳ ಬಗ್ಗೆ ಮಾತನಾಡುತ್ತಾ ಅವರಿಗೆ ನಿರೂಪಣೆಯ ತಂತ್ರಗಾರಿಕೆಯಲ್ಲಿ ಆಸಕ್ತಿಯೂ ಇಲ್ಲ ಮತ್ತು ನಂಬಿಕೆಯೂ

ಇಲ್ಲ ಎನ್ನುತ್ತಾರೆ. ಅನಿಸಿದ್ದನ್ನು ಬರೆಯುತ್ತಾ ಹೋಗಬೇಕು ಆಗಲೇ ಸಾಹಿತ್ಯ ಹೆಚ್ಚು ಆಪ್ತವಾಗುತ್ತದೆ ಎನ್ನುತ್ತಾರೆ ರಸಾನುಭವಿ ಕಥೆಗಾರರಾದ ವಸುದೇಂದ್ರರು.

ಒಟ್ಟಾರೆಯಾಗಿ ಈ ಕಾಲಘಟ್ಟದಲ್ಲಿ ಪ್ರಮುಖವಾಗಿ ವಿಭಿನ್ನ ಶೈಲಿಯಲ್ಲೇ ಬರೆದು ಓದುಗರನ್ನು ಹತ್ತಿರದಿಂದ ಆತ್ಮೀಯವಾಗಿ ತಲುಪಿರುವ ವಸುದೇಂದ್ರರು ನವನವೀನತೆಯನ್ನು ಯಶಸ್ವಿಯಾಗಿ ಅಳವಡಿಸಿಕೊಂಡಿದ್ದಾರೆ. ಅಷ್ಟೇ ಜನರನ್ನು ತಲುಪಿದ್ದಾರೆ. ಮೊದಲ ಓದಿನಲ್ಲಿ ನನ್ನನ್ನು ಗಾಢವಾಗಿ ಕಾಡಿ ಕಥೆಗಾರ ಎಂದರೆ, ವಸುದೇಂದ್ರ. ಈ ಕಾಣಕ್ಕಾಗಿ ಮತ್ತೇ ಅಂಗಡಿಗೆ ಹೋಗಿ ವಸುವಿನ ಎಲ್ಲಾ ಕೃತಿಗಳನ್ನು ಕೊಂಡು ತಂದು ಆಸಕ್ತಿಯಿಂದ ಓದಿದೆ. ನಮ್ಮಮ್ಮ ಅಂದ್ರೆ ನಂಗಿಷ್ಟ ಪ್ರಬಂಧಗಳಲ್ಲಿ ಕಾಣುವ ಲೇಖಕನ ಮುಗ್ಧ ಮನಸ್ಸು, ನಿರ್ಮಲ ಪ್ರೀತಿ ಹಾಗೂ ಹಂಪಿ ಎಕ್ಸ್‌ಪ್ರೆಸ್ ಕಥೆಗಳಲ್ಲಿ, ಎಲ್ಲಿಯೂ ಕಥೆಗಾರನ ವೈಯಕ್ತಿಕ ಹಿತಾಸಕ್ತಿಗಳು ಅಥವಾ ತೀಟೆ ತೆವಲುಗಳು ಮಧ್ಯೆ ಪ್ರವೇಶವಾಗದೆ ಪಾತ್ರಗಳು ಮತ್ತು ಸನ್ನಿವೇಶಗಳು ತನ್ನಷ್ಟಕ್ಕೆ ತಾನೆ ಸೃಷ್ಟಿಯಾಗಿರುವ ವೈಖರಿ ನಿಜಕ್ಕೂ ನನ್ನಲ್ಲಿ ವಸು ಬಗ್ಗೆ ಬೆರಗು ಮೂಡಿಸಿದವು. ವಸುದೇಂದ್ರನಲ್ಲಿ ತಾನು ಹುಟ್ಟಿ ಬೆಳೆದ ಸಂಡೂರು ಮತ್ತು ಬಳ್ಳಾರಿಯ ಚಿತ್ರಗಳನ್ನು ಕಥಾನಕಗಳ ಮೂಲಕ ಕಟ್ಟಿಕೊಡುವಾಗ ಕಾಣುವ ಪ್ರಬುದ್ಧ ಕಥೆಗಾರ, ನಗರ ಕೇಂದ್ರಿತ ವಸ್ತುಗಳುಳ್ಳ ಕಥೆಗಳಲ್ಲಿ ಕಾಣುವುದಿಲ್ಲ. ಆದರೆ, ತಾನು ಕಂಡುಂಡ ವರ್ತಮಾನದ ಬದುಕನ್ನು ರಾಗದ್ವೇಷವಿಲ್ಲದ, ನಿರ್ಲಿಪ್ತ ಮನಸ್ಸಿನಿಂದ ಕಟ್ಟಿಕೊಡುವ ವಸುದೇಂದ್ರ ಸಮಕಾಲೀನ ಕಥೆಗಾರರಿಗಿಂತ ಭಿನ್ನವಾಗುತ್ತಾರೆ.

ಓದುಗರ ಅನಿಸಿಕೆಗಳು:

ಒಬ್ಬ ಕಥೆಗಾರ ಅಥವಾ ಕಾದಂಬರಿಕಾರ, ಓದುಗರು ಮತ್ತು ವಿಮರ್ಶಕರನ್ನು ಮೀರಿ ಪರೀಕ್ಷೆಗೆ ಒಳಗಾಗಬೇಕಿರುವುದು ಕಾಲನ ತಕ್ಕಡಿಯಲ್ಲಿ ಮಾತ್ರ. ಯಾವೊಬ್ಬ ವಿಮರ್ಶಕ ಒಬ್ಬ ಲೇಖಕನನ್ನು ಸೃಷ್ಟಿಸಲಾರ, ಬದಲಾಗಿ ಕೇವಲ ಪರಿಚಯಿಸಬಲ್ಲ ಅಷ್ಟೇ. ಕನ್ನಡದ ಸಾಹಿತ್ಯ ಲೋಕದಲ್ಲಿ ತನಗೆ ಬೇಕಾದ ಬರಹಗಾರರ ಬೆನ್ನು ಕೆರೆಯುವ ಪ್ರವೃತ್ತಿ ಇಂದು ನೆನ್ನೆಯದಲ್ಲ. ಇದು ನವೋದಯ ಕಾಲದಲ್ಲಿ ಆರಂಭಗೊಂಡು, ನವ್ಯದ ಕಾಲದಲ್ಲಿ ಉತ್ತುಂಗಕ್ಕೇರಿತು. (ಬೇಂದ್ರೆ ಭಜನೆಯ ನೆಪದಲ್ಲಿ ಕುವೆಂಪು ಅವರನ್ನು ಒಂದೇ ಸಮನೆ ಜೀವನ ಪೂರ್ತಿ ಟೀಕಿಸಿದ ಕುರ್ತಕೋಟಿ ಎಂಬ ಮಹಾಶಯನ ವಿಮರ್ಶೆಯ ಬರಹಗಳನ್ನು ಗಮನಿಸಿದರೆ, ಭಟ್ಟಂಗಿತನ ಏನೂ ಎಂಬುದು ಅರ್ಥವಾಗುತ್ತದೆ). ಹಾಗೆ ನೋಡಿದರೆ, ವಸ್ತುನಿಷ್ಟ ವಿಮರ್ಶೆ ನಮಗೆ ಕನ್ನಡದಲ್ಲಿ ಗೋಚರವಾಗುವುದು ಜಿ.ಹೆಚ್. ನಾಯಕ, ಹೆಚ್.ಎಸ್. ರಾಘವೇಂದ್ರರಾವ್, ನರಹಳ್ಳಿ ಬಾಲಸುಬ್ರಮಣ್ಯಂ, ಲಂಕೇಶ್ ಮತ್ತು ಡಿ.ಆರ್. ನಾಗರಾಜ್ ಮುಂತಾದವರ ಬರಹಗಳಲ್ಲಿ ಮಾತ್ರ. ಇನ್ನುಳಿದ ಬಹುತೇಕ ಮಂದಿ ತಮ್ಮ ಇಡೀ ಜೀವಿತವನ್ನು ತಮಗೆ ಬೇಕಾದ ಲೇಖಕರ ಭಜನೆಯಲ್ಲಿ ಸವೆಸಿದ್ದಾರೆ. ಇಲ್ಲಿ ಯಾರೋ ಒಬ್ಬರು ವಸುಧೇಂದ್ರರನ್ನು ಹೊಗಳಿ ಅಟ್ಟಕ್ಕೇರಿಸಿದರು ಎಂದು ನೊಂದುಕೊಳ್ಳುವುದು ಅಥವಾ ವಸುಧೇಂದ್ರರನ್ನು ಟೀಕಿಸಿದರು ಎಂದು ವಿನಾಃ ಕಾರಣ ಫೇಸ್‌ಬುಕ್‌ನಲ್ಲಿ ಸಮರ್ಥಿಸಿಕೊಳ್ಳುವುದರಿಂದ, ಒಬ್ಬ ಲೇಖಕನ ಸ್ಥಾನಮಾನ ನಿರ್ಧಾರವಾಗುವುದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಈ ಫೇಸ್‌ಬುಕ್, ಬ್ಲಾಕ್ ಇತ್ಯಾದಿಗಳು ಹದಿಹರೆಯದವರ ಹಸ್ತಮೈಥುನದಂತೆ ಬರವಣಿಗೆಯ ಹಸ್ತಮೈಥುನದ ಒಂದು ಕ್ರಿಯೆ ಎಂಬುದನ್ನು ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು. (ಕೊನೆಯ ಮಾತು–ಇದು ಕನ್ನಡ ಕಥೆಗಳ ವಿಮರ್ಶೆಯಲ್ಲ. ನಾನು ಓದಿದ ಈ ತಲೆಮಾರಿನ ಬರಹಘಾರರ ಬಗೆಗಿನ ನನ್ನ ವೈಯಕ್ತಿಕ ಅನಿಸಿಕೆ ಮಾತ್ರ).

ನಮ್ಮ ನಡುವಿನ ಅಪರೂಪದ ಕಥೆಗಾರ ವಸುಧೇಂದ್ರ :

ಫೆಬ್ರವರಿಯಲ್ಲಿ ಮೇ ಫ್ಲವರ್ ಅಂಗಳದಲ್ಲಿ ನಮ್ಮ ನಡುವಿನ ಅಪರೂಪದ ಕಥೆಗಾರ ವಸುಧೇಂದ್ರರೊಡನೆ ಒಂದು ಮಾತು-ಕಥೆ ಕಾರ್ಯಕ್ರಮ ನಡೆಯಿತು. ಹಂಪಿ ಎಕ್ಸ್‌ಪ್ರೆಸ್ ಕೃತಿ ಮಾಸ್ತಿ ಕಥಾ ಪ್ರಶಸ್ತಿಯನ್ನು ಗಳಿಸಿರುವ ಈ ಸಂದರ್ಭದಲ್ಲಿ ಅಂದು ನಡೆದ ಮಾತುಕತೆಯಲ್ಲಿ ನೆನಪಿನಲ್ಲಿರುವ ಕೆಲವು ತುಣುಕುಗಳು ಇಲ್ಲಿವೆ.

ತಮ್ಮ ಕುಟುಂಬದಲ್ಲಿ ಸಾಹಿತ್ಯಿಕ ವಾತಾವರಣವಿಲ್ಲದಿದ್ದರೂ ಬಹುಶಃ ತಾವು ಕಥೆಗಾರರಾಗಿದ್ದಕ್ಕೆ ಸ್ಫೂರ್ತಿ ತಮ್ಮ ತಾಯಿ ಎನ್ನುತ್ತಾರೆ ವಸುಧೇಂದ್ರ. ಕಥೆ ಹೇಳುವುದು, ಬರೆಯುವುದು ಒಂದೇ ಉದ್ದೇಶದ ವಿಭಿನ್ನ ಅಭಿವ್ಯಕ್ತಿಗಳಷ್ಟೇ. ಚಿಕ್ಕಂದಿನಿಂದಲೂ ತಾಯಿಯಿಂದ ಕೇಳಿದ ಕಥೆಗಳು ತಾವು ಕಥೆಗಾರರಾಗಲು ಪೂರಕವಿರಬಹುದು. ತನ್ನ ಜೀವನದ ಅತಿ ಸಣ್ಣ ವಿಷಯವನ್ನೂ ಮಹತ್ವದ್ದೆಂಬಂತೆ ಅನೇಕ ರಂಜನೀಯ ವಿಶೇಷಣಗಗಳೊಂದಿಗೆ ಆಕೆ ಹೇಳುತ್ತಿದ್ದ ಪರಿ ಯಾವ ಕಥೆ / ಕಥೆಗಾರನಿಗೂ ಕಡಿಮೆಯಿರಲಿಲ್ಲ. ತಮ್ಮ ಸಾಫ್ಟ್‌ವೇರ್ ವೃತ್ತಿ ಜೀವನದಲ್ಲಿ ಪ್ರಪಂಚದ ಹಲವೆಡೆ ಪಯಣಿಸಿರುವ ಇವರು ಲಂಡನ್ನಲ್ಲಿದ್ದಾಗ ಅನೇಕ ಉತ್ತಮ ಚಲನಚಿತ್ರಗಳನ್ನು ನೋಡಿದರು. ಕಛೇರಿಯಲ್ಲಿ ನಿಗದಿತ ವೇಳೆಯಷ್ಟೇ ಕೆಲಸ ಮಾಡುವ ಪರಿಪಾಟವಿರುವ ಆ ದೇಶದಲ್ಲಿ ಅವರಿಗೆ ದೊರೆತ ವಿಪುಲ ವಿರಾಮ ಸಮಯ ಕಳೆಯಲು ಅವರು ರೂಢಿಸಿಕೊಂಡಿದ್ದು ಪ್ರಪಂಚದಲ್ಲೆಡೆಯ ಉತ್ತಮ ಚಲನಚಿತ್ರಗಳನ್ನು ನೋಡುವ ಹವ್ಯಾಸ. ಬಹುಶಃ ಆಗಲೇ ತಾವ್ಯಾಕೆ ಕಥೆ ಬರೆಯಬಾರದು ಅನ್ನಿಸಿದ್ದು. ಒಂದೇ ಸಮನೇ ಅನೇಕ ಕಥೆಗಳನ್ನು ಬರೆದರು. ಆದರೆ, ಸಾಹಿತ್ಯ ವಲಯದಲ್ಲಿ ಕಂಡು ಕೇಳಿರದ ಇವರ ಕಥೆಗಳನ್ನು ಪ್ರಕಾಶಿಸಲು ಯಾರೂ ಮುಂದೆ ಬರಲಿಲ್ಲ. ಈ ಕಥೆಗಳನ್ನು ಯಾರು ಓದುತ್ತಾರೆ ಹೋಗ್ರೀ ಎಂದು ಬಾಗಿಲು ತೋರಿಸಿದ್ದೂ ಇದೆ. ಆಗಲೇ ಅವರಿಗೆ ಹೊಳೆದದ್ದು ತಮ್ಮ ಕಥೆಗಳನ್ನು ತಾವೇ ಏಕೆ ಪ್ರಕಟಿಸಬಾರದೆಂದು. ಅಂತೆಯೇ ಧೈರ್ಯ ಮಾಡಿ ತಮ್ಮ ಕಥೆಗಳನ್ನು ತಾವೇ ಪ್ರಕಟಿಸಿದರು. ಉತ್ತರ ಕರ್ನಾಟಕದ ಸೊಗಡಿರುವ ಒಂದು ಸರಳ, ಚಂದವಾದ ಹೆಸರಿನ ಛಂದ ಪುಸ್ತಕ ಹುಟ್ಟಿದ್ದು ಹೀಗೆ. ಇದೇ ಸಮಯದಲ್ಲಿ ಅವರು ನೆನಪಿಸಿಕೊಳ್ಳುವದು ತಮ್ಮ ಕಥೆಗಳನ್ನು ಪ್ರಕಟಿಸಿ ಪ್ರೋತ್ಸಾಹಿಸಿದ ಕನ್ನಡಪ್ರಭ ಪತ್ರಿಕೆಯನ್ನು ಹೊಸ ಬರಹಗಾರರಿಗೆ ಎದುರಾಗುವ ಎಡರು ತೊಡರುಗಳನ್ನು ಕಣ್ಣಾರೆ ಕಂಡ ಫಲ ಹೊಸ ಬರಹಗಾರರನ್ನು ತಮ್ಮ ಛಂದ ಪುಸ್ತಕದ ಮೂಲಕ ಪ್ರೋತ್ಸಾಹಿಸಿದ್ದು.

ಈಗಷ್ಟೇ 5 ಯಶಸ್ವೀ ಸಂವತ್ಸರವನ್ನು ಕಂಡಿರುವ ಛಂದ ಪುಸ್ತಕ ಈಗ ಸಾಹಿತ್ಯ ವಲಯದಲ್ಲಿ ಮನೆ ಮಾತಾಗಿದೆ. ಸಾಹಿತ್ಯ ಸಮ್ಮೇಳನದ ಪುಸ್ತಕ ಮಳಿಗೆಗಳಲ್ಲಿ ತಾವೇ ಖುದ್ದು ಈ ಪುಸ್ತಕ ತೊಗೋಳ್ಳಿ, ಚೆನ್ನಾಗಿದೆ ಎಂದು ಪುಸ್ತಕ ಮಾರಿದ್ದೂ ಇದೆ. ಜೊತೆ ಜೊತೆಗೇ 'ವಸುಧೇಂದ್ರಾನಾ, ಮಡಿ ಮೈಲಿಗೆ ಏನೂ ಇರಲ್ಲ ಇವರ ಬರವಣಿಗೆಯಲ್ಲಿ' ಎಂಬ ಓದುಗರ ನುಡಿಗಳಿಗೆ ಪ್ರತ್ಯಕ್ಷ ಸಾಕ್ಷಿಯಾದದ್ದೂ ಇದೆ.

ಯಶವಂತ ಚಿತ್ತಾಲರು ಒಂದೆಡೆ ಹೇಳಿದ್ದಾರೆ. ಅಮ್ಮ, ನಮ್ಮ ಶಾಲೆಯಲ್ಲಿ ಇವತ್ತು ಏನಾಯ್ತು ಗೊತ್ತಾ? ಅನ್ನುವ ಮಗುವಿನ ಮಾತಿನಲ್ಲೂ ಒಂದು ಕಥೆಯಿದೆ ಎಂದು. ಅಂತಯೇ ಪ್ರತಿಯೊಬ್ಬರಲ್ಲೂ ಕಥೆ ಹೇಳುವ ಪ್ರತಿಭೆಯಿರುತ್ತದೆ ಎನ್ನುವ ವಸುಧೇಂದ್ರ ಕಥೆಗಳು ಓದುಗರಿಗೆ ಸುಲಭವಾಗಿ ಅರ್ಥವಾಗುವ ಹಾಗೆ ಸರಳವಾಗಿರಬೇಕು ಅನ್ನುತ್ತಾರೆ. ನಾನು ಬರೆಯುವುದೇ ಹೀಗೆ. ನಿಮ್ಮ ಬುದ್ಧಿಮತ್ತೆಗೆ ಸಾಧ್ಯವಾದರೆ ಅರ್ಥ ಮಾಡಿಕೊಳ್ಳಿ ಎನ್ನುವ ಧೋರಣೆ ಇವರದ್ದಲ್ಲ. ತಮ್ಮ ಛಂದ ಪುಸ್ತಕ ಮುಖೇನ ಅನೇಕ ಎಲೆಮರೆಯ ಬರಹಗಾರರನ್ನು ಪರಿಚಯಿಸಿದ್ದಾರೆ. ಇವರನ್ನು ನೀವೇ ಒಮ್ಮೆ ಕೇಳಿ ನೋಡಿ, ನಿಮ್ಮ ಪ್ರಕಾಶನದ ಯಾವ ಪುಸ್ತಕ ಚೆನ್ನಾಗಿದೆ ಎಂದು. ತಮ್ಮ ಪುಸ್ತಕಕ್ಕಿಂತ ಇನ್ನೆಲ್ಲರ ಪುಸ್ತಕಗಳೂ ತುಂಬಾ ಚೆನ್ನಾಗಿದೆ. ನನ್ನ ಪುಸ್ತಕ ಓದುವ ಮುನ್ನ ಅವನ್ನು ಓದಿ ಅನ್ನುವ ವಿನಮ್ರ ಮನಸ್ಸು ಅವರದು. ಕೋಟ್ಯಾಂತರ ಮಂದಿ ಕನ್ನಡಿಗರಿರುವ ನಾಡಿನಲ್ಲಿ ಯಾವುದೇ ಪುಸ್ತಕದ ಒಂದೆರಡು ಸಾವಿರ ಪ್ರತಿಗಳು ಮಾರಾಟವಾಗುವುದೇ ಒಂದು ಸಾಧನೆಯೆಂದು ಖುಷಿ ಪಡಬೇಕಾದ ಪರಿಸ್ಥಿತಿ ನಿಜಕ್ಕೂ ವಿಪರ್ಯಾಸವಲ್ಲವೇ ಎಂದು ಪ್ರಶ್ನಿಸುತ್ತಲೇ ಹೆಚ್ಚು ಹೆಚ್ಚು ಕನ್ನಡಿಗರು ಬರೆಯುವತ್ತ ಒಲವು ತೋರಿಸುತ್ತಿರುವುದು ಹೆಮ್ಮೆಯ ವಿಷಯ ಎಂದು ಸಂತಸಪಡುತ್ತಾರೆ. ಪುಸ್ತಕ ಮಾರಾಟದ ಸರಕಾಗಬಾರದು. ಬದಲಿಗೆ ಓದುಗನಿಗೆ ಪುಸ್ತಕದ ಬಗ್ಗೆ ಪ್ರೀತಿ ಹುಟ್ಟಿ ಓದುವ ಹವ್ಯಾಸ ಬೆಳೆಯಬೇಕೆಂಬುದು ಅವರ ಆಶಯ. ಯಾವುದೇ ಬರವಣಿಗೆಯನ್ನು ಸರಿ ತಪ್ಪುಗಳ ಚೌಕಟ್ಟಿನಲ್ಲಿ ನೋಡುವ ಮನೋಭಾವ ಇವರದ್ದಲ್ಲ. ಎಲ್ಲ ಬರವಣಿಗೆಯೂ ಲೇಖಕನ ಪ್ರತಿಭೆಯ, ಪರಿಶ್ರಮದ ಫಲಶ್ರುತಿ ಎಂಬ ಅಭಿಪ್ರಾಯ ಇವರದ್ದು. ಕಥೆಗಳು ಹುಟ್ಟುವುದು ನಾವು ನೋಡಿದ, ಬೆಳೆದು ಬಂದ ಪರಿಸರದಲ್ಲೇ ಎನ್ನುವ ಇವರು, ತಮ್ಮ ಕಥೆಗಳನ್ನು ಯಾವುದೇ ಜಾತಿ, ಪಂಥದೊಡನೆ ಗುರುತಿಸಿಕೊಳ್ಳಲು ನಯವಾಗಿಯೇ ನಿರಾಕರಿಸುತ್ತಾರೆ. ಒಬ್ಬ ಬುದ್ಧಿವಂತ ಆದರೆ ಕೆಟ್ಟ ಮನುಷ್ಯನಿಗಿಂತ, ಮುಗ್ಧ ಆದರೆ. ಒಳ್ಳೆಯ ವ್ಯಕ್ತಿಯ ಸ್ನೇಹ

ಒಡನಾಟವನ್ನು ತಾನು ಇಷ್ಟ ಪಡುವೆ ಎನ್ನುವ ಇವರು, ಕೆಟ್ಟದ್ದು ಯಾವ ರೂಪದಲ್ಲಿ ಬಂದರೂ ಅದು ಕೆಟ್ಟದ್ದೇ ಎಂದು ಖಡಾಖಂಡಿತವಾಗಿ ಹೇಳುತ್ತಾರೆ. ನಾವು ಪ್ರಪಂಚದ ಯಾವ ಮೂಲೆಯಲ್ಲೇ ಇರಲಿ, ಆ ನೆಲದ ಬಗ್ಗೆ ಪ್ರೀತಿ, ಅಭಿಮಾನವಿರಬೇಕೆ ಹೊರತು ಅಲ್ಲಿನ ಕುಂದುಕೊರತೆಗಳ ಬಗ್ಗೆ ಕೊರಗು, ತಿರಸ್ಕಾರ ಮನೋಭಾವ ಇರಬಾರದೆನ್ನುವ ವಸುಧೇಂದ್ರ ಬೆಂಗಳೂರಿನ ಅಂಕೆಯಿಲ್ಲದ ಟ್ರಾಫಿಕ್ ತನ್ನ ಸಾಹಿತ್ಯ ಕೃಷಿಗೆ ಪ್ರೋತ್ಸಾಹದಾಯಕವಾಗಿದೆ ಅನ್ನುತ್ತಾರೆ!

ವಸುಧೇಂದ್ರ ಕಥೆ ಬರೆಯಲು ಶುರು ಮಾಡಿದಾಗ ಬ್ಲಾಗ್ ಲಗ್ಗೆ ಇಲ್ಲದಿದ್ದು ಓದುಗರ ಪಾಲಿಗೆ ಒಳ್ಳೆಯದೇ ಆಯಿತು. ಇಲ್ಲವಾದರೆ ಅವರು ಛಂದ ಪುಸ್ತಕದ ಬದಲು ಛಂದವಾದ ಬ್ಲಾಗ್‌ನ ಒಡೆಯರಾಗುತ್ತಿದ್ದರೋ ಏನೋ ಎಷ್ಟೋ ಬಾರಿ ಅನಿಸಿದ್ದಿದೆ. ಅನೇಕ ಉತ್ತಮ ಬರಹಗಳು ಬ್ಲಾಗ್ ಲೋಕದ ಸೀಮಿತ ಓದುಗರನ್ನಷ್ಟೇ ತಲುಪಿ ನೇಪಥ್ಯಕ್ಕೆ ಸರಿಯುತ್ತಿವೆ ಎಂದು.

ವಸುಧೇಂದ್ರರ ಕೃತಿಗಳು:

ನಮ್ಮಮ್ಮ ಅಂದ್ರೆ ನಂಗಿಷ್ಟ
ಯುಗಾದಿ
ಇ–ಕಾಮರ್ಸ್
ಕೋತಿಗಳು ಸಾರ್ ಕೋತಿಗಳು
ಚೇಳು
ಮಿಥುನ (ಅನುವಾದಿತ ಕೃತಿ)
ಹಂಪಿ ಎಕ್ಸ್‌ಪ್ರೆಸ್

ವಸುಧೇಂದ್ರರ ಲೇಖನಿಯಲ್ಲಿ ಮತ್ತಷ್ಟು ಕೃತಿಗಳು ಮೂಡಿಬರಲಿ, ಮೇ ಫ್ಲವರ್ ಅಂಗಳದಲ್ಲಿ ಓದುಗರೊಬ್ಬರು ಆಶಿಸಿದಂತೆ ಕಾದಂಬರಿಗಳೂ ಮೂಡಿಬರಲಿ, ಪ್ರಶಸ್ತಿಗಳನ್ನು ಗೆಲ್ಲಲಿ ಎನ್ನುವುದು ಅವರ ಎಲ್ಲ ಓದುಗರ ಹೃತ್ಪೂರ್ವಕ ಹಾರೈಕೆ.

ಸಾಹಿತಿಯಾಗಿ ವಸುಧೇಂದ್ರ:

ಇವರಲ್ಲಿ ಹುಟ್ಟುವ ಕಥೆ, ಪ್ರಬಂಧ, ಕಾದಂಬರಿಗಳ ವಸ್ತು ಬಹಳ ಹಿಂದಿನಿಂದಲೇ ಮನಸ್ಸಿನಲ್ಲಿ ಕಾಡುತ್ತಿರುತ್ತದೆ. ಅಮೂರ್ತ ರೂಪದಲ್ಲಿ ಬೆಳೆಯುತ್ತಾ ಸಾಗುತ್ತಿರುತ್ತದೆ. ವರ್ತಮಾನಕ್ಕೆ ಸಂವಾದಿಯಾಗಿ ಸಾಹಿತ್ಯ ರಚಿಸಬೇಕು ಎನ್ನುವ ಇವರು ಇತಿಹಾಸ ಉಳಿಸುವುದರಲ್ಲಿ ನಂಬಿಕೆಯನ್ನು ಹೊಂದಿಲ್ಲ. ತಮ್ಮ ಸಾಹಿತ್ಯದ ಮೂಲಕ ಓದುಗರನ್ನು ರಂಜಿಸುವುದಷ್ಟೇ ಅವರ ಉದ್ದೇಶವಲ್ಲ. ಹೊಸತನ್ನು ಹೇಳುವುದರ ಮೂಲಕ ಸಾರ್ವಕಾಲಿಕ ಮೌಲ್ಯಗಳನ್ನು ಪ್ರತಿಪಾದಿಸಬೇಕು ಎನ್ನುತ್ತಾರೆ. ಹಾಗೆಯೇ ಬರವಣಿಗೆಯಲ್ಲಿ ಸಂದರ್ಭಕ್ಕನುಸಾರವಾದ ಅಗತ್ಯವಾದ ಲಾಲಿತ್ಯ, ಅನುಭವ ಎಲ್ಲ ಬೇಕು ಎನ್ನುತ್ತಾರೆ. ಆದರೆ, ಅದರ ಹೆಸರಲ್ಲಿ ಲಾಲಿತ್ಯದ ಅತಿಯಾದ ಹೇರಿಕೆ ಅನುಭವಗಳ ಅನಗತ್ಯ ತುರುಕುವಿಕೆಯಿಂದ ಕೃತಿಯು ಜಡ್ಡು ಹಿಡಿಯುತ್ತದೆ ಎನ್ನುತ್ತ ಮುಗ್ಧತೆಯ ನಗುವನ್ನು ಬೀರುತ್ತಾರೆ. ಸಾಮರಸ್ಯದಿಂದ ಸಂಘರ್ಷವನ್ನು ದೂರ ಮಾಡಬೇಕು ಎನ್ನುತ್ತಾರೆ. ಇನ್ನು ಅವರ ಕೃತಿಗಳ ಬಗ್ಗೆ ಮಾತನಾಡುತ್ತಾ ಅವರಿಗೆ ನಿರೂಪಣೆಯ ತಂತ್ರಗಾರಿಕೆಯಲ್ಲಿ ಆಸಕ್ತಿಯೂ ಇಲ್ಲ ಮತ್ತು ನಂಬಿಕೆಯೂ ಇಲ್ಲ ಎನ್ನುತ್ತಾರೆ. ಅನಿಸಿದ್ದನ್ನು ಬರೆಯುತ್ತಾ ಹೋಗಬೇಕು ಆಗಲೇ ಸಾಹಿತ್ಯ ಹೆಚ್ಚು ಆಪ್ತವಾಗುತ್ತದೆ ಎನ್ನುತ್ತಾರೆ ರಸಾನುಭವಿ ಕಥೆಗಾರರಾದ ವಸುದೇಂದ್ರರು

ಕೆಲಸದ ಒತ್ತಡದ ನಡುವೆಯೂ ಸಿಕ್ಕ ಸಮಯದಲ್ಲೇ ಸಾಹಿತ್ಯ ರಚನಾಕ್ರಿಯೆಯಲ್ಲಿ ತಮ್ಮನ್ನು ತಅವು ತೊಡಗಿಸಿಕೊಳ್ಳುವ ಇವರು ಈಗಂತೂ ತಮ್ಮ ಸಮಯವನ್ನು ಸಾಹಿತ್ಯಕ್ಕಾಗಿಯೇ ಮುಡಿಪಾಗಿಟ್ಟಿದ್ದಾರೆ. ಏಕೆಂದರೆ, ತಮ್ಮ ಸಾಫ್ಟ್‌ವೇರ್ ಕೆಲಸದಿಂದ ಸ್ವಲ್ಪ ಕಾಲದವರೆಗೆ ದೂರ ಬಂದಿದ್ದಾರೆ. ಕುಟುಂಬದಲ್ಲಿ ಯಾವುದೇ ಸಾಹಿತ್ಯಿಕ ವಾತಾವರಣದಿಂದ ಹಿನ್ನೆಲೆಯಿಲ್ಲದಿದ್ದರೂ ಬಾಲ್ಯದಿಂದ ಇಂದಿನವರೆಗಿನ ಜೀವನಾನುಭವ ಮೇಲಾಗಿ ಅವರ ತಾಯಿ ದಿನವೂ ಹೇಳುತ್ತಿದ್ದ ಕಥೆಗಳು ಅವರನ್ನು ಕಥೆ, ಪ್ರಬಂಧಗಳನ್ನು ರಚಿಸುವಂತೆ ಪ್ರೇರೇಪಿಸಿತು. ಈ ಹೊತ್ತಿಗೆ ಅತ್ಯಂತ ಜನಪ್ರಿಯ ಕಥೆಗಾರರಲ್ಲಿ ಒಬ್ಬರಾದ ವಸುದೇಂದ್ರರು ತಮ್ಮ ಸರಳ ಉತ್ತರ ಕರ್ನಾಟಕದ ಗ್ರಾಮೀಣ ಭಾಷೆಯ ಪ್ರಬಲವಾದ ಬಳಕೆಯ ಜೊತೆಗೆ ಓದುಗರ ಭಾವಾಲೋಕವನ್ನು ತಟ್ಟುವ, ಓದುಗರು ಭಾವಲೋಕದಲ್ಲಿ ವಿಹರಿಸುವಂತೆ ಮಾಡಿದ ವಿಶೇಷ ಶಕ್ತಿಯಿದೆ. ಅದೇ ಕಾರಣದಿಂದಲೋ ಏನೋ ಅಥವಾ ತಾಯಿ ಮಗನ ಸಂಬಂಧವನ್ನು ಸೂಕ್ಷ್ಮವಾಗಿ ವಿವೇಚಿಸಿದ್ದದರ ಕಾರಂದಿಂದಲೂ ಇರಬಹುದು "ನಮ್ಮಮ್ಮ ಅಂದ್ರೆ ನಂಗಿಷ್ಟ" ಎನ್ನುವ ಪ್ರಬಂಧ ಸಂಕಲನವು ಹತ್ತನೇ ಮುದ್ರಣಕ್ಕೆ ತಯಾರಾಗಿ ನಿಂತಿದೆ. ಇದೇ ರೀತಿಯಲ್ಲಿ ಇವರ ಕೃತಿಗಳನ್ನು ಬಿಸಿಬಿಸಿ ಕಜ್ಜಾಯದಂತೆ ಓದುಗರು

ಸ್ವೀಕರಿಸಿದ್ದಾರೆ. ಅಂದಹಾಗೆ ವಸುದೇಂದ್ರ ಚಂದ್ರ ಅವರು ಮಾತಿಗೆ ಸಿಕ್ಕಿದ್ದು ಈ ಬಾರಿಯ ಆಳ್ವಾಸ್ ನುಡಿಸಿರಿಯಲ್ಲಿ. ಅವರು ಅಲ್ಲಿ "ಕಥಾಸಮಯ": ಕಾರ್ಯಕ್ರಮದಲ್ಲಿ ತಮ್ಮ ಕಥೆಯನ್ನು ವಾಚಿಸಲು ಬಂದಿದ್ದರು. ಹಾಗೆಯೇ ನನಗೆ ಮಾತಿಗೆ ಸಿಕ್ಕಿದ್ದು. ನಾನು ಅವರ ಸುಮಾರು ಒಂದು ಘಂಟೆಗಳ ಅವಧಿಯನ್ನು ತಿಂದದ್ದು. ಇವೆಲ್ಲ ಈ ಸಂದರ್ಶನ ಸ್ವರೂಪದ ಲೇಖನಕ್ಕೆ ಸಾಕ್ಷಿಯಾಯಿತು. ಸಣ್ಣ ಪ್ರಶ್ನೆಗಳಿಂದ ಆರಂಭವಾದ ಸಂವಾದದಲ್ಲಿ ಘಂಟೆ ಹೋದದ್ದೇ ತಿಳಿಯಲ್ಲ. ಆಪ್ತತೆಯೂ ಗಟ್ಟಿಗೊಳ್ಳುತ್ತಾ ಹೋದದ್ದೂ ಗೋಚರವಾಗಲಿಲ್ಲ. ಅದಕ್ಕೆಲ್ಲಾ ಒಂದು ವೇದಿಕೆ ಕಲ್ಪಿಸಿಕೊಟ್ಟವರು ಮತ್ತೊಬ್ಬ ಕಥೆಗಾರ–ಕಾದಂಬರಿಕಾರ ಅನುಬೆಳ್ಳೆ ನಾಮಾಂಕಿತ ರಾಘವೇಂದ್ರ ಬಿ. ರಾವ್. ವಸುದೇಂದ್ರರು ಸಾಹಿತ್ಯ ರಚಿಸಲು ಪ್ರೇರಣೆಯಾದ, ಪ್ರಭಾವ ಬೀರಿದ ಅಂಶಗಳು ಹೀಗಿವೆ: ಬಾಲ್ಯದಿಂದಲೂ ತಾಯಿ ಹೇಳುತ್ತಿದ್ದ ಕಥೆಗಳು, ಬದುಕಿನ ಅನುಭವಗಳು, ಹೆಚ್ಚು ಹೆಚ್ಚಾಗಿ ನೋಡಿದ ಪಾಶ್ಚಾತ್ಯ ಅಥವಾ ಆಂಗ್ಲ ಸಿನಿಮಾಗಳು – ಹೀಗೆ ಅಂತಹ ಸಿನಿಮಾಗಳನ್ನು ನೋಡುವುದರಿಂದ ಹೊಸತನ, ಹೊಸಹೊಳಪು, ಹೊಸ ನೋಟಗಳು ಬೀರಲು ಸಾಧ್ಯ ಎಂದೇ ಅವರು ನಂಬಿದ್ದಾರೆ. ಅದೇ ರೀತಿ ಕುವೆಂಪು, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಹಾಗೂ ಶಿವರಾಮ ಕಾರಂತರು ಅವರನ್ನು ಬಹಳಷ್ಟು ಪ್ರಭಾವಿಸಿದ್ದಾರೆ ಎನ್ನುತ್ತಾರೆ. ಕುವೆಂಪುರವರ ಕಲಾತ್ಮಕತೆ, ಮಾಸ್ತಿಯವರ ಧೈರ್ಯ, ಕಾರಂತರ ಅನುಭವಗಳನ್ನು ಓದಿದ ಇವರನ್ನೂ ಸಾಹಿತ್ಯ ರಚಿಸುವಂತೆ ಪ್ರೇರೇಪಿಸಿತು. ಬದುಕಿನ ಬಗೆಗಿನ ಪ್ರೀತಿ, ಕಾಡುವ ಮನುಷ್ಯ ಮನುಷ್ಯ ಸಂಬಂಧಗಳು ಇವರನ್ನು ಸದಾ ಕಾಡುವುದಿದೆಯಂತೆ. ಪರಿಸರ ಯಾವುದಾದರೂ ಸರಿ ಅಲ್ಲಿ ವಾಸಿಸುವ ಜನರೇ ಮುಖ್ಯರೆನಿಸುತ್ತಾರೆ ಅನ್ನುತ್ತಾರೆ. ಇನ್ನು ಇವರ ಕೃತಿಗಳಲ್ಲಿ ಸಾಮಾನ್ಯರಂತಹ ಸಾಮಾನ್ಯರೂ ಅಂದರೆ ತೀರಾ ಕಡೆಗಣಿಸಲ್ಪಟ್ಟವರೂ ಕೂಡಾ ಮುಖ್ಯರಾಗುತ್ತಾರಲ್ಲ. ಲೇಖಕನಿಗೆ 'ಸೂಕ್ಷ್ಮತೆ' ಇರಬೇಕು ಮತ್ತು ಮಕ್ಕಳ ರೀತಿಯಲ್ಲಿ ಬದುಕಬೇಕು ಮತ್ತು ಅಹಂಭಾವವನ್ನು ತೊರೆಯಬೇಕು ಎನ್ನುತ್ತಾರೆ. ಇನ್ನು ಇವರ ಕೃತಿಗಳಲ್ಲಿ ಸಾಮಾನ್ಯರಂತಹ ಸಾಮಾನ್ಯರೂ ಅಂದರೆ ತೀರಾ ಕಡೆಗಣಿಸಲ್ಪಟ್ಟವರೂ ಕೂಡಾ ಮುಖ್ಯರಾಗುತ್ತಾರಲ್ಲ. ಲೇಖಕನಿಗೆ 'ಸೂಕ್ಷ್ಮತೆ' ಇರಬೇಕು ಮತ್ತು ಮಕ್ಕಳ ರೀತಿಯಲ್ಲಿ ಬದುಕಬೇಕು ಮತ್ತು ಅಹಂಭಾವವನ್ನು ತೊರೆಯಬೇಕು ಎನ್ನುತ್ತಾರೆ.

ಕಥೆಗಳು ಬೆಳೆದು ಬಂದ ಪರಿಸರದಲ್ಲೇ ಹುಟ್ಟುತ್ತದೆ ಎನ್ನುತ್ತ 'ಪುಸ್ತಕ ಮಾರಾಟದ ಸೊಗಡಾಗಬಾರದು' ಎಂಬ ಎಚ್ಚರಿಕೆಯನ್ನು ನೀಡುತ್ತಾರೆ. ಕನ್ನಡದಲ್ಲಿ ಉತ್ತಮವಾದ ಹೊಸ ಜಾಯಮಾನದ ನವೀನ ಶೈಲಿಯ ಹಲವಾರು ಉತ್ತಮ ಬರಹಗಾರರು ಬರೆಯುತ್ತಾರೆ. ಅದು

ಒಳ್ಳೆಯ ಬೆಳವಣಿಗೆ ಆದರೆ ಮುದ್ರಣ ಸಂಸ್ಥೆಗಳು ಯಥೇಚ್ಚವಾಗಿ ಪುಸ್ತಕಗಳನ್ನು ಪ್ರಕಟಿಸುವ ಭರಾಟೆಯಲ್ಲಿ ಉತ್ತಮ ಗದ್ಯ ಕೃತಿಗಳು ಹೊರಹೊಮ್ಮುತ್ತಿಲ್ಲವಲ್ಲ? ಎಂಬ ಪ್ರಶ್ನೆಗೆ ಅವರು ಹೇಳುವ ಉತ್ತರ ಬಹಳ ಗಂಭೀರವಾದದ್ದು ಮತ್ತು ಆಲೋಚನಾರ್ಹವಾದದು- "ಸರಕಾರಗಳು ಮೊದಲು ಪುಸ್ತಕಗಳನ್ನು ಕೊಂಡುಕೊಳ್ಳುವುದನ್ನು ತಾತ್ಕಾಲಿಕವಾಗಿಯಾದರೂ ನಿಲ್ಲಿಸಬೇಕು" ಆಗಲೇ ಗಂಭೀರವಾದ ಗದ್ಯ ಉದಯಿಸಲು ಸಾಧ್ಯ ಎನ್ನುತ್ತಾರೆ. ಇನ್ನು ನಮ್ಮ ಶಿಕ್ಷಣ ವ್ಯವಸ್ಥೆಯ ಬಗ್ಗೆ ಸ್ವಲ್ಪ ಬೇಸರದಲ್ಲಿಯೇ ಪ್ರಾಥಮಿಕ ಹಂತದಿಂದಲೇ ಸಾಹಿತ್ಯದ ಪ್ರೀತಿಯನ್ನು ಬೆಳೆಸಬೇಕು, ಸಾಹಿತ್ಯದಿಂದ ಶಿಕ್ಷಣವನ್ನು ಕಲಿಸಬೇಕು ಎನ್ನುತ್ತಾರೆ. ಅಂತೆಯೇ ಪಾಶ್ಚಾತ್ಯರು ಹೆಚ್ಚು ಹೆಚ್ಚು ಸಾಹಿತ್ಯವನ್ನು ಓದುತ್ತಾರೆ. ಅಲ್ಲಿನ ಸರಕಾರ ಆ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಕೈಗೊಳ್ಳುತ್ತವೆ. ಗ್ರಂಥಾಲಯಗಳು ಅದೇ ಕೆಲಸವನ್ನು ಮಾಡುತ್ತವೆ. ಇಲ್ಲೂ (ನಮ್ಮ ದೇಶದಲ್ಲೂ) ಅಂತಹದ್ದೇ ಹಲವಾರು ಬದಲಾವಣೆಗಳನ್ನು ಸಾಧ್ಯವಾಗಿಸಬೇಕು ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಜಾಗತೀಕರಣದ ಈ ಸಂದರ್ಭವನ್ನು ಹೇಗೆ ಸದ್ಬಳಕೆ ಮಾಡಿಕೊಳ್ಳಬೇಕೆಂಬುದು ಅವರ ಅಭಿಪ್ರಾಯ. ಹಾಗೇಯೇ ಇಂದಿನ ತಲೆಮಾರಿನ ಬರಹಗಾರರಿಗೆ ಏನಾದರೂ ಸಲಹೆ ಸೂಚನೆಗಳಿವೆಯಾ? ಎಂದು ಕೇಳಿದರೆ ನಾನು ಹೊಸ ತಲೆಮಾರಿನವನೇ, ನನಗೂ ಹೆಚ್ಚೇನು ವಯಸ್ಸಾಗಿಲ್ಲ ಎನ್ನುತ್ತಾ ಮುಗ್ಧತೆಯ ಮುಕ್ತ ನಗುವನ್ನು ಬೀರುತ್ತಾರೆ. ಇವರ ಬಗ್ಗೆ ಇನ್ನೊಂದು ಸ್ವಾರಸ್ಯಕರ ಸಂಗತಿಯೊಂದನ್ನು ತಿಳಿಸಬೇಕು. ಇವರು ಬರಹವನ್ನು ಆರಂಭಿಸಿದಾಗ ಇಂತಹ ಬರಹಗಳನ್ನು ಯಾರು ಪ್ರಕಟಿಸುತ್ತಾರೆ ಹೋಗ್ರಿ? ಎಂದವರೇ ಹೆಚ್ಚು. ಆಗಲೇ ಹುಟ್ಟಿಕೊಂಡಿದ್ದು "ಛಂದ ಪ್ರಕಾಶನ". ಈ ಹೊತ್ತಿನಲ್ಲಿ ಒಂದು ಉತ್ತಮ ಪ್ರಕಾಶನ ಸಂಸ್ಥೆಯೂ ಹೌದು. ಹಾಗೆಯೇ ಯುವ ಬರಹಗಾರರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ, ಸ್ಪರ್ಧೆ ನಡೆಸಿ ಆಯ್ಕೆಯಾದ ಪುಸ್ತಕವನ್ನು "ಛಂದ ಪ್ರಕಾಶನ"ದ ಮೂಲಕವೇ ಪ್ರಕಟಿಸುತ್ತಾರೆ. ಛಂದ ಪ್ರಕಾಶನವು ಓದುಗರನ್ನು - ಓದನ್ನು ಪ್ರೋತ್ಸಾಹಿಸುವ, ಬೆಳೆಸುವ ಉದ್ದೇಶದಿಂದ ಒಂದು ಮಹತ್ವದ ಹೆಜ್ಜೆಯನ್ನು ಇಟ್ಟಿದೆ. ಅದೆಂದರೆ ಈ ಪ್ರಕಾಶನದ ಪುಸ್ತಕ ಬೇಕೆಂದರೆ ಛಂದ ಪ್ರಕಾಶನದ ಕಛೇರಿಗೆ ಕರೆ ಮಾಡಿದರಾಯ್ತು. ಅವರೇ ಬೇಕಾದ ಪುಸ್ತಕವನ್ನು ಮನೆಬಾಗಿಲಿನ ತನಕವೂ ತಲುಪಿಸುತ್ತಾರೆ. ಗಾಬರಿಬೇಕಿಲ್ಲ. ನೀವು ಅವರಿಗೆ ಅಂದ ಹಾಗೆ ಅವರು ಮೊದಲು ಕಥೆ ಬರೆದದ್ದು ಒಂಬತ್ತನೇ ತರಗತಿಯಲ್ಲಿ ಅದು ಪ್ರಕಟವೂ ಆಗಿತ್ತು. ಆದರೆ, ಆ ಕಥೆ ನಿಮಗ್ಯಾರಿಗೂ, ಎಲ್ಲೂ ಸಿಗೋಲ್ಲಾ ಕಣೋ ಅನ್ನುತ್ತಾರೆ. ಹೀಗೆಯೇ ಎಲ್ಲರೂ ಹೆಚ್ಚು ಹೆಚ್ಚು ಓದಬೇಕು. ಏನೇ ಬರೆಯಬೇಕಾದರೂ ಜೀವನದಲ್ಲಿ ಮಾಡಬೇಕಾದ್ರೂ ಒಂದು ಸುಂದರವಾದ

ಛಂದ ಲಯ ಇರಬೇಕು ಎನ್ನುತ್ತಾರೆ. ಛಂದ ಎಂದರೆ ಪ್ರೀತಿ ಎನ್ನುವ ಅರ್ಥವೇ ಹೊರತು ಬೇರೆನಲ್ಲ ಎಂದು ನಗುತ್ತಾರೆ. ಮತ್ತು ನಿರ್ಲಿಪ್ತತೆಯ, ನಿರಾಳ ಭಾವವನ್ನು ತಾಳುತ್ತಾರೆ. ಈ ಎಲ್ಲಾ ಆಪ್ತತೆ ಮತ್ತು ಬಹಳ ಸ್ಪಷ್ಟವಾದ ಚಿಂತನಾಶೀಲ ಆಲೋಚನೆಗಳಿಂದ ಬಹಳ ಮುಖ್ಯರೆನಿಸುತ್ತಾರೆ. ಒಟ್ಟಾರೆಯಾಗಿ ಈ ಕಾಲಘಟ್ಟದಲ್ಲಿ ಪ್ರಮುಖವಾಗಿ ವಿಭಿನ್ನ ಶೈಲಿಯಲ್ಲೇ ಬರೆದು ಓದುಗರನ್ನು ಹತ್ತಿರದಿಂದ ಆತ್ಮೀಯವಾಗಿ ತಲುಪಿರುವ ವಸುದೇಂದ್ರರು ನವನವೀನತೆಯನ್ನು ಯಶಸ್ವಿಯಾಗಿ ಅಳವಡಿಸಿಕೊಂಡಿದ್ದಾರೆ. ಅಷ್ಟೇ ಜನರನ್ನು ತಲುಪಿದ್ದಾರೆ. ಅವರ ಕೃತಿಯ ಬಗ್ಗೆ ಓದುಗರು ಹಂಚಿಕೊಳ್ಳುವ ಭಾವನೆಗಳು ಬಹಳ ಇಷ್ಟವಾಗುತ್ತವೆ ಎನ್ನುತ್ತಾರೆ. ಈಗಾಗಲೇ ಅವರ ಹಲವು ಕೃತಿಗಳು ರಂಗರೂಪದಲ್ಲೂ ಪ್ರದರ್ಶಿತವಾಗಿವೆ. ಅದೂ ಇವರಿಗೆ ಮತ್ತಷ್ಟು ಯಶಸ್ಸನ್ನು ದೊರಕಿಸಿದೆ. ಈ ಬಗ್ಗೆ ಅವರಿಗೆ ಸಂತೋಷವಿದೆ. ಈಗ ಒಂದು ಚಲನಚಿತ್ರಕ್ಕೆ ಸ್ಕ್ರಿಪ್ಟ್ ಕೂಡಾ ತಯಾರಿಸುವ ಪ್ರಕ್ರಿಯೆಯಲ್ಲಿದ್ದಾರೆ. ಮತ್ತು ಅವರ ಮನಸ್ಸು ಮಾತ್ರ ಕಥೆ ಕಟ್ಟುವತ್ತ ಚಿಂತಿಸುತ್ತಿದೆ.

ಇಂದು ನಮ್ಮ ನಡುವೆ ಇರುವ ಬಹುಪಾಲು ಮಂದಿ ಪ್ರಗತಿವಾದಿಗಳು ಪುರೋಗಾಮಿಗಳು ಸ್ತ್ರೀವಾದಿಗಳಲ್ಲಿ ಭಾರತದ ಸ್ವತಂತ್ರಾ ನಂತರದ ಪೀಳಿಗೆಯವರೇ ಜಾಸ್ತಿ (ಸುಮಾರು ಅರವತ್ತರಿಂದ ಅರವತ್ತೈದರ ವಯೋಮಾನದವರು). ನನ್ನ ಅನುಭವದ ಪ್ರಕಾರವೇ ಹೇಳುವುದಾದರೆ ಈಗ್ಗೆ ಅರವತ್ತು ವರ್ಷಗಳ ಹಿಂದೆ (ಮತ್ತು ಅವರುಗಳೇ ಹೇಳಿದಂತೆ ಅದಕ್ಕೂ ಹಿಂದೆ ಅವರ ಚಿಕ್ಕ ವಯಸ್ಸಿನಲ್ಲಿ ಅವರು ನೋಡಿದಂತೆ) ನನ್ನ ಅಜ್ಜಿ ಮತ್ತು ತಾಯಿ ಆ ಮೂರು ದಿನಗಳು ಹಳ್ಳಿಯಲ್ಲಿನ ವಿಶಾಲವಾದ ದೊಡ್ಡ ಮನೆಯಲ್ಲಿ ಅದಕ್ಕೆಂದೇ ಮೀಸಲಾದ ಒಂದು ಕೋಣೆಯಲ್ಲಿರುತ್ತಿದ್ದರು. ಅದು ನಿಜ. ಇಂದು ಬ್ರಾಹ್ಮಣರಲ್ಲೂ ಸಹ ಯಾರೂ ಹಿಂದಿನಂತೆ ಆ ಮೈಲಿಗೆಯ ಮೂರು ದಿನಗಳಲ್ಲಿ ಅಸ್ಪೃಶ್ಯರಾಗಿ ಇರುತ್ತಿಲ್ಲ. ಇದಕ್ಕೆ ಬದಲಾದ ಸಾಮಾಜಿಕ ಜೀವನದ ರೀತಿಗಳೇ ಕಾರಣ. ಶಿಕ್ಷಣಕ್ಕಾಗಿ ಉದ್ಯೋಗಕ್ಕಾಗಿ ಹಳ್ಳಿಗಳನ್ನು ಬಿಟ್ಟು ಪಟ್ಟಣ ಸೇರಿದ ಮೇಲೆ ನಂತರ ಮದುವೆ ಸಂಸಾರ ಮಕ್ಕಳು ಈ ಚಕ್ರ ತಿರುಗಬೇಕಾದರೆ ಗಂಡ ಹೆಂಡತಿ ಇಬ್ಬರೂ ದುಡಿಯಲೇ ಬೇಕಾದ ಪರಿಸ್ಥಿತಿ ಅನಿವಾರ್ಯ. ಒಂದು ಕಡೆ ದೇವಸ್ಥಾನಗಳನ್ನು ಶೋಷಣೆಯ ಕೇಂದ್ರಗಳೆಂದು ಟೀಕಿಸುವುದು ಮತ್ತೊಂದೆಡೆ ಅಲ್ಲಿ ಮಹಿಳೆಯರಿಗೆ ಸೂಕ್ತ ಮೀಸಲಾತಿ ಇಲ್ಲವೆಂದು ವಾದಿಸುವುದು! ಇದೊಂದು ತರಹದ ವಿಚಿತ್ರ ವಿತಂಡವಾದ. ನನ್ನ ಅಭಿಪ್ರಾಯವೆಂದರೆ ಋತುಸ್ರಾವದ ದಿನಗಳಲ್ಲಿ ಮಹಿಳೆ ದೇವಸ್ಥಾನಕ್ಕೆ ಹೋಗುವುದು ಬಿಡುವುದು ಆಕೆಯ ಸ್ವಂತ ವಿಚಾರ. ಹೋದರೆ ಯಾರು ತಡೆಯುತ್ತಾರೆ. ಹೋಗಲಿ ಬೇಡವೆಂದು ಹೇಳಿದವರು ಯಾರು? ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನವೆಂದರೆ ಅದು

ನೇರವಾಗಿ ಸರ್ಕಾರದ ಹಿಡಿತಕ್ಕೆ ಬರುತ್ತದೆ. ಅದಕ್ಕೆಂದೇ ಸರ್ಕಾರದಲ್ಲಿ ಪ್ರತ್ಯೇಕ ಸಚಿವರು ಇದ್ದಾರೆ. ಅಲ್ಲಿ ಸರ್ಕಾರದ್ದೇ ಕೊನೆಯ ಮಾತು. ಪ್ರಗತಿಗಾಮಿಗಳು ಸರ್ಕಾರದ ಮೇಲೆ ಒತ್ತಡ ತಂದು ಮಹಿಳಾ ಪುರೋಹಿತರನ್ನು ನೇಮಿಸುವ ನಿಟ್ಟಿನಲ್ಲಿ ಮತ್ತು ಮಹಿಳೆಯರಿಗೂ ಪ್ರಸಾದವನ್ನು ತಯಾರಿಸುವ ಅನುಮತಿ ಕೊಡಿಸುವತ್ತ ಕ್ರಾಂತಿಕಾರಿ ಹೆಜ್ಜೆ ಹಾಕಲು ಇಂದಿನಿಂದಲೇ ಪ್ರಾರಂಭಿಸಬಹುದಲ್ಲವೇ? ಯಾವುದಾದರೊಂದು ಮೇಲ್ಜಾತಿ ಸರ್ಕಾರದ ಯಾವುದೇ ಧನ ಸಹಾಯವಿಲ್ಲದೆ ಕೇವಲ ತನ್ನವರಿಗೆಂದೇ ಒಂದು ದೇವಸ್ಥಾನವನ್ನು ಕಟ್ಟಿಕೊಂಡಿದ್ದರೆ ಅಲ್ಲಿ ಇತರೆ ಜಾತಿಯ ಗಂಡಸರಿಗೆ ಮತ್ತು ಹೆಂಗಸರಿಗೆ ಪ್ರವೇಶವಿಲ್ಲ ಎಂದಾದರೆ ಸಾಂವಿಧಾನಿಕ ನಿಯಮಗಳಿಂದ ನ್ಯಾಯಾಂಗ ವ್ಯವಸ್ಥೆಯಡಿಯಲ್ಲಿ ಅದನ್ನು ಪ್ರಶ್ನಿಸುವ ಎಲ್ಲಾ ಹಕ್ಕುಗಳು ಭಾರತೀಯರಿಗಿದೆ. ಈ ನೆಲದ ಕಾನೂನನ್ನು ಪಾಲಿಸಲೇಬೇಕಾಗಿರುವುದು ಅದರ ಪ್ರಜೆಗಳ ಕರ್ತವ್ಯ.

ಮೋಹನಸ್ವಾಮಿ ಎನ್ನುವ ಮಿಥ್ಯೆಯೂ ನಿಜವೂ

"ಹದಿನೆಂಟು ವರ್ಷಕ್ಕೆ ಆಗಬೇಕಿದ್ದ ವಿಮೋಚನೆ ನಲವತ್ತೈದನೇ ವಯಸ್ಸಿಗೆ ಆಯ್ತು. ನನ್ನಂತೆ ಇನ್ನೊಂದು ಮಗು ಕಷ್ಟಪಡಬಾರದು. ಕೆಲವು ಮಕ್ಕಳು ತಮ್ಮ ಸಂಕಟಗಳನ್ನು ಯಾರೊಂದಿಗೂ ಹೇಳಿಕೊಳ್ಳಲು ಸಾಧ್ಯವಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಹಾಗಾಗಬಾರದು". ಕಥೆಗಾರ ವಸುದೇಂದ್ರ ನಿಟ್ಟುಸಿರು ಬಿಡುತ್ತ ಇಡ್ಲಿಯ ತುಣುಕೊಂದನ್ನು ಬಾಯಿಗೆ ಇಟ್ಟುಕೊಂಡರು. ಬೆಂಗಳೂರಿನ ಗಾಂಧಿಬಜಾರಿನ 'ಆನಂದ ಭವನ್' ಹೊಟೇಲ್‌ನಲ್ಲಿ ಹರಟೆಯ ಹುಮ್ಮಸ್ಸಿನಲ್ಲಿ ಕುಳಿತ ಅವರು, ಮೂರು ದಶಕಗಳ ಕಾಲ ಅದುಮಿರಿಸಿಕೊಂಡಿದ್ದ ತಮ್ಮ ಸಂಕಟವನ್ನು ಹೇಳಿಕೊಳ್ಳುತ್ತಿದ್ದರು. ಪಿಂಗಾಣಿ ತಟ್ಟೆಯಲ್ಲಿದ್ದ ಬಿದಿಗೆ ಚಂದ್ರಮನಂಥ ಎರಡು ಇಡ್ಲಿಗಳಲ್ಲಿ ಒಂದು ಮುಗಿಯುವ ವೇಳೆಗೆ ಒಂದು ತಾಸು ಉರುಳೀತ್ತು. ಕಥೆಗಳೊಳಗಿನ ಕಥೆಗಾರನ ಬದುಕು ತೆರೆದುಕೊಂಡ ಕ್ಷಣವದು. 'ನಮ್ಮ ಹರಟೆ ಗಂಭೀರವಾಗುತ್ತಿದೆ' ಎನ್ನತ್ತಲೇ ವಸುದೇಂದ್ರ ತಮ್ಮ ಬದುಕಿನ ಕೆಲವು ಸಂಗತಿಗಳನ್ನು ಹೇಳಿಕೊಳ್ಳತೊಡಗಿದರು. ಚಿಕ್ಕಂದಿನಲ್ಲಿ ಏನೋ ಅನಿಸಿದ್ದನ್ನು ಗೀಚಿಕೊಂಡು, ಕನ್ನಡ-ತೆಲುಗು ಸಿನಿಮಾಗಳನ್ನು ನೋಡಿಕೊಂಡಿದ್ದ ಬಳ್ಳಾರಿಯ ಹುಡುಗ ವಸುದೇಂದ್ರ ಬರವಣಿಗೆಯನ್ನು ಗಂಭೀರವಾಗಿ ಹಚ್ಚಿಕೊಂಡಿದ್ದು ಕೊಚ್ಚಿನ್‌ನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾಗ, 1996ರ ಸುಮಯವದು. ತನ್ನದಲ್ಲದ ನಾಡಿನಲ್ಲಿ ಯಾರಾದರೂ ಅನುಭವಿಸುವ

ಒಂಟಿತನ ಅವರನ್ನೂ ಕಾಡುತ್ತಿತ್ತು. ಆ ಒಂಟಿತನದಿಂದ ಹೊರಬರಲು ಹಾಗೂ 'ಕಳೆದುಹೋಗುತ್ತಿದ್ದೇನೆ' ಎಂದು ತನ್ನೊಳಗೆ ಬಲಿಯುತ್ತಿದ್ದ ಭಾವಕ್ಕೆ ಉತ್ತರದ ರೂಪದಲ್ಲಿ ಅವರಿಗೆ ಕಾಣಿಸಿದ್ದು ಬರವಣಿಗೆ. ಸುಮಾರು ಒಂದೂವರೆ ತಿಂಗಳ ಕಾಲ ಪ್ರತಿದಿನ ಬೆಳಿಗ್ಗೆ ಐದರಿಂದ ಏಳು ಗಂಟೆಯವರೆಗೆ ವ್ರತದಂತೆ ಬರೆದರು. ಹಾಗೆ ಬರೆದದ್ದು 'ಮನೀಷ' ಸಂಕಲನದ ಕಥೆಗಳನ್ನು. ಕಥೆಯ ಯಾವ ತಂತ್ರಗಳನ್ನೂ ಅರಿಯದ ತರುಣನೊಬ್ಬ ತನ್ನಷ್ಟಕ್ಕೆ ತಾನು ಹಾಡಿಕೊಂಡ ಸಹಜವಾದ ಕಥೆಗಳಂತೆ 'ಮನೀಷೆ'ಯ ರಚನೆಗಳು ಹೊರಹೊಮ್ಮಿದವು. ಪ್ರಕಾಶಕರೊಬ್ಬರಿಗೆ ದುಡ್ಡು ಕೊಟ್ಟು 'ಮನೀಷೆ'ಯನ್ನು ಪ್ರಕಟಿಸುವ ಸಾಹಸಕ್ಕೂ ವಸುದೇಂದ್ರ ಮುಂದಾದರು. ಆದರೆ, ಸಂಕಲನದ ಕಥೆಗಳನ್ನು ಮನೆಯಲ್ಲಿಟ್ಟುಕೊಂಡಿದ್ದೇ ಬಂತು. ಆ ನಡುವೆ ಉದ್ಯೋಗ ನಿಮಿತ್ತ ಇಂಗ್ಲೆಂಡ್‌ಗೆ ಹೋಗಬೇಕಾಯಿತು. ಅಲ್ಲಿದ್ದ ಮೂರು ನಾಲ್ಕು ವರ್ಷಗಳು ವಸುದೇಂದ್ರ ಅವರ ಪಾಲಿಗೆ ಬರವಣಿಗೆಯ ಸುಗ್ಗಿಕಾಲ.

'ಯುಗಾದಿ' ಸಂಕಲನದ ಕಥೆಗಳು, ತೆಲುಗು ಕಥೆಗಳ ಕನ್ನಡ ಅನುವಾದ 'ಮಿಥುನ' ಹಾಗೂ 'ಕೋತಿಗಳು ಸಾರ್ ಕೋತಿಗಳು' ಸಂಕಲನದ ಪ್ರಬಂಧಗಳು ರೂಪುಗೊಂಡಿದ್ದು ಅಲ್ಲಿಯೇ. ಮತ್ತೆ ಬೆಂಗಳೂರಿಗೆ ಬಂದ ಮೇಲೆ ಬರೆದುದನ್ನು ಪ್ರಕಟಿಸುವ ಹುಕಿ ಶುರುವಾಯಿತು. ಆದರೆ, ಜನಪ್ರಿಯನಲ್ಲದ ಬರಹಗಾರನನ್ನು ಯಾವ ಪ್ರಕಾಶಕ ಮೂಸಬೇಕು? ಆಗ ಬೆಂಬಲಕ್ಕೆ ಬಂದದ್ದು ಪತ್ರಕರ್ತ ಅಪಾಲ. ಖಜಿಟಲ್ ಮಾಧ್ಯಮದ ಬಗ್ಗೆ ಕುತೂಹಲ ಹೊಂದಿದ್ದ ಅಪಾರ, 'ನಿನ್ನ ಪುಸ್ತಕಗಳನ್ನು ನೀನೇ ಪ್ರಕಟಿಸು. ಪುಸ್ತಕ ವಿನ್ಯಾಸ ನಾನು ಮಾಡಿಕೊಡುತ್ತೇನೆ' ಎಂದು ಹುರಿದುಂಬಿಸಿದರು. ವಸುದೇಂದ್ರ ಕೊಂಚ ಅಳುಕು ಮತ್ತು ಸಂಕೋಚದಿಂದ ಪ್ರಕಟಣೆಯ ಕೆಲಸದಲ್ಲಿ ತೊಡಗಿಕೊಂಡರು. ಫಲಿತಾಂಶ ಅವರ ನಿರೀಕ್ಷೆಗೆ ಮೀರಿದ್ದಾಗಿತ್ತು. "ನನ್ನ ಪುಸ್ತಕಗಳಿಗೆ ಸಿಕ್ಕ ಪ್ರತಿಕ್ರಿಯೆಯಿಂದ ಉತ್ತೇಜಿತನಾಗಿ ಬೇರೆಯವರ ಪುಸ್ತಕಗಳನ್ನೂ ಪ್ರಕಟಿಸತೊಡಗಿದೆ. ಯುವ ಕಥೆಗಾರರ ಚೊಚ್ಚಲ ಕಥಾ ಸಂಕಲನಗಳಿಗೆ 'ಛಂದ ಪ್ರಶಸ್ತಿ' ಆರಂಭಿಸಿದೆ. ಎರಡು ಸಾವಿರ ರೂಪಾಯಿಯಿಂದ ಆರಂಭವಾದ ಪ್ರಶಸ್ತಿ ಈಗ ಇಪ್ಪತ್ತು ಸಾವಿರ ರೂಪಾಯಿಗೆ ಮುಟ್ಟಿದೆ" ಎಂದು 'ಛಂದ'ದ ಕ್ಷಣಗಳನ್ನು ವಸುದೇಂದ್ರ ಮೆಲುಕು ಹಾಕಿದರು. ಈಗ ಕನ್ನಡದ ಜನಪ್ರಿಯ ಬರಹಗಾರರಲ್ಲಿ ಒಬ್ಬರಾಗಿರುವ ವಸುದೇಂದ್ರ 'ಬರೆಯುವುದು ತಮ್ಮ ಸಾಮಾಜಿಕ ಜವಾಬ್ದಾರಿ" ಎಂದು ನಂಬಿದ್ದಾರೆ. "ಬರವಣಿಗೆ ನನಗೆ ದೇವರು ನೀಡಿರುವ ಕೌಶಲ, ಬರೆಯದೆ ಹೋದರೆ ನನಗೆ ದೊರೆತ ವರವನ್ನು ಅವಮಾನಿಸಿದಂತೆ' ಎನ್ನು ನಿಲುವು ಅವರದು. ಅಂದಹಾಗೆ ಸಾಹಿತ್ಯದ ಜೊತೆಗೆ

ವಸುದೇಂದ್ರರ ಮತ್ತೊಂದು ವ್ಯಸನ ಸಿನಿಮಾ. ಈ ಸಿನಿಮಾಕ್ಕೆ ಅವರು ಮರುಳಾದುದು ಹೇಗೆ? ನೆನಪು ಗಾಂಧಿ ಬಜಾರ್‌ನಿಂದ ಇಂಗ್ಲೆಂಡ್‌ಗೆ ಹೊರಳಿತು. "ಇಂಗ್ಲೆಂಡಿನಲ್ಲಿ ಇದ್ದಾಗ ದಿನಕ್ಕೆ ಮೂರು ಸಿನಿಮಾ ನೋಡುತ್ತಿದ್ದೆ. ವಾರಾಂತ್ಯದಲ್ಲಿ ನಾಲ್ಕೈದು ಸಿನಿಮಾ ನೋಡಿರುವುದೂ ಇದೆ. ನನ್ನ ಇಂಗ್ಲೀಷ್ ಅಷ್ಟೇನೂ ಚೆನ್ನಾಗಿರಲಿಲ್ಲ. ಇಂಗ್ಲೀಷ್ ಪುಸ್ತಕಗಳನ್ನು ಓದುವುದು ಹಿತವಾದ ಅನುಭವ ಅನಿಸುತ್ತಿರಲಿಲ್ಲ. ಆಗ ಸ್ನೇಹಿತರಂತೆ ಕಾಣಿಸಿದ್ದು ಸಿನಿಮಾಗಳು! 'ಬ್ರಿಟಿಷ್ ಲೈಬ್ರರಿ'ಗಳು ಸಿನಿಮಾ ಡಿವಿಡಿಗಳನ್ನು ಹಾಗೂ ಪುಸ್ತಕಗಳನ್ನು ಉಚಿತವಾಗಿ (ಶುಲ್ಕ ವಿಧಿಸಿದರೂ ಅದು ತೀರಾ ಕಡಿಮೆ) ವಿತರಿಸುತ್ತವೆ. ಅದರ ಉಪಯೋಗವನ್ನು ಚೆನ್ನಾಗಿ ಬಳಸಿಕೊಂಡೆ. ಸಬ್ ಟೈಟಲ್‌ಗಳ ಮೂಲಕ ಸಿನಿಮಾ ಅನುಭವಿಸುವುದು ಕಷ್ಟವೆನ್ನಿಸಲಿಲ್ಲ. ಸಿನಿಮಾಗಳಲ್ಲಿನ ಸೈಲೆನ್ಸ್ ಕೂಡ ಇಷ್ಟವಾಗತೊಡಗಿತು. ಸಿನಿಮಾಗಳ ನಾಟಕೀಯ ಗುಣ ನನ್ನ ಮೇಲೆ ಪರಿಣಾಮ ಬೀರಿದೆ. ಕಥೆ ಬರೆಯುವುದು ಹೇಗೆ, ಪಾತ್ರಗಳನ್ನು ಚಿತ್ರಿಸುವುದು ಹೇಗೆ ಎನ್ನುವುದನ್ನು ಸಿನಿಮಾ ನೋಡಿ ಕಲಿತೆ' ಎಂದರು (ತಮ್ಮ ವಿದ್ಯಾರ್ಥಿಗಳಿಗೆ ಅವರು 'ಸಿನಿಮಾ ನೋಡಿ' ಎಂದು ಶಿಫಾರಸು ಮಾಡುತ್ತಾರಂತೆ).

'ಮೋಹನಸ್ವಾಮಿ' ಕಥಾಸಂಕಲನ ಕನ್ನಡ ಸಾಹಿತ್ಯಲೋಕಕ್ಕೆ 'ಸಲಿಂಗಿ'ಗಳ ಜಗತ್ತನ್ನು ಪರಿಚಯಿಸಿದ ಕೃತಿ. ಈ ಕೃತಿಗೆ ಏನು ಪ್ರೇರಣೆ? 'ಮೋಹನಸ್ವಾಮಿ' ಕಥೆಗಳನ್ನು ಓದುಗರು ಹೇಗೆ ಸ್ವೀಕರಿಸಿದರು? ಪ್ರಶ್ನೆಗಳಲ್ಲಿನ ಹಿಂಜರಿಕೆಯನ್ನು ನಿವಾರಿಸುವಂತೆ – "ಮೋಹನಸ್ವಾಮಿ ನನ್ನದೇ ಬದುಕಿನ ಕಥೆ. ಆ ಸಂಕಲನದ ಕಥೆಗಳಲ್ಲಿ ನನ್ನ ಬದುಕು ಹಾಗೂ ಕಲ್ಪನೆ ಎರಡೂ ಇದೆ. ನಾನು ಗೇ ಎನ್ನುವುದರಲ್ಲಿ ಯಾವುದೇ ಮುಚ್ಚುಮರೆ ಇಲ್ಲ. ಆದರೆ ಅದನ್ನು ಒಪ್ಪಿಕೊಳ್ಳುವುದು ತುಂಬಾ ತಡವಾಯಿತು. ವಿಷಯವನ್ನು ಮುಚ್ಚಿಟ್ಟುಕೊಂಡ ಕಾರಣದಿಂದಲೇ ಖಿನ್ನತೆಗೆ ಒಳಗಾದೆ" ಎಂದರು ವಸುದೇಂದ್ರ. "ಹದಿಮೂರನೆ ವಯಸ್ಸಿನ ವೇಳೆಗಾಗಲೇ ನನ್ನ ದೇಹದ ಭಾಷೆ ನನಗೆ ಅರ್ಥವಾಯಿತು. ಆದರೆ, ನನ್ನದಲ್ಲದ ತಪ್ಪಿಗಾಗಿ ದೀರ್ಘ ಕಾಲ ಶಿಕ್ಷೆ ಅನುಭವಿಸಿದೆ. ಆ ತಳಮಳದಿಂದ ಹೊರಬರುವುದು ಸಾವು ಬದುಕಿನ ಪ್ರಶ್ನೆ ಅನಿಸಿತು. ಇ.ಎಂ. ಫಾಸ್ಟರ್ ಕೂಡ ಇಂತಹುದೇ ಸಂಕಟ ಅನುಭವಿಸಿದ್ದ. ಅವನು ಕಾದಂಬರಿಯೊಂದರ ಮೂಲಕ ತನ್ನ ಸಾವಿರ ನಂತರ 'ತಾನು ಗೇ' ಎನ್ನುವ ವಿಷಯ ಪ್ರಕಟಗೊಳಿಸಿದ. ಆದರೆ, ನಾನು ಸತ್ತ ನಂತರ ಸತ್ಯ ಬಯಲಾಗುವುದು ಬೇಕಿರಲಿಲ್ಲ. ಸತ್ಯ ಹೇಳಿಕೊಳ್ಳಲಿಕ್ಕೆ ಬರವಣಿಗೆಯೊಂದೇ ದಾರಿ ಎನ್ನಿಸಿತು. ಈ ರೀತಿ 'ಮೋಹನಸ್ವಾಮಿ' ಕಥೆಗಳು ನನ್ನಿಂದ ಬರೆಸಿಕೊಂಡವು. ನನ್ನ ಸಂಕಲನಕ್ಕೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು. ಸಾಹಿತ್ಯ ವಿಮರ್ಶಕರೂ ಸೇರಿದಂತೆ ಗಂಡಸರೆಲ್ಲ ಮೌನವಾಗಿದ್ದರು. ಅವರಿಗೇನೋ ಕಸಿವಿಸಿ.

ಮಾಧ್ಯಮಗಳು ಕೂಡ ಮೌನವಾಗಿದ್ದವು. ಆದರೆ, ಮಹಿಳೆಯರಿಂದ ಬಂದ ಪ್ರತಿಕ್ರಿಯೆಗಳು ಉತ್ತೇಜಕವಾಗಿದ್ದವು. ಪತ್ರಿಕೆಗಳಲ್ಲಿ ವಿಮರ್ಶೆಗಳು ಪ್ರಕಟವಾಗದಿದ್ದರೂ ಬ್ಲಾಗ್‌ಗಳಲ್ಲಿ ಹದಿನೈದು ಬರಹಗಳು ಪ್ರಕಟವಾದವು. ಅವುಗಳಲ್ಲಿ ಶೇ 99 ಬರಹಗಳನ್ನು ಬರೆದದ್ದು ಮಹಿಳೆಯರೇ" ಎಂದರು.

"ಮೋಹನಸ್ವಾಮಿ ಮೂರು ಮುದ್ರಣಗಳನ್ನು ಕಂಡಿದೆ. ಈಗ ಅದರ ಇಂಗ್ಲಿಷ್ ಅವೃತ್ತಿ (ಅನುವಾದ: ರಶ್ಮಿ ತೇರದಾಳ) ಕೂಡ 'ಹಾರ್ಪರ್ ಕಾಲಿನ್ಸ್'ನಿಂದ ಪ್ರಕಟಣೆಗೆ ಸಿದ್ಧವಾಗಿದೆ. ಇದೆಲ್ಲ ಸಾಹಿತ್ಯಲೋಕದ ಮಾತಾಯಿತು. ಇದರಾಚೆಗೆ, 'ಮೋಹನಸ್ವಾಮಿ' ಪುಸ್ತಕದ ಮೂಲಕ ಕರ್ನಾಟಕದ 'ಗೇ' ಸಮುದಾಯ ನನ್ನೊಂದಿಗೆ ಮಾತನಾಡತೊಡಗಿತು. ಅವರ ಬಗ್ಗೆ ಆವರೆಗೆ ಕನ್ನಡದಲ್ಲಿ ಯಾರೂ ಬರೆದಿರಲಿಲ್ಲ. ಇಂಗ್ಲಿಷ್ ಗೊತ್ತಿಲ್ಲದವರಿಗೆ ತಾವು ಅನುಭವಿಸುತ್ತಿರುವ ಯಾತನೆಗೆ ಉತ್ತರ ಕಂಡುಕೊಳ್ಳುವುದು ಸುಲಭವಾಗಿರಲಿಲ್ಲ. ಅಂಥ ಜನರೆಲ್ಲ ನನ್ನೊಂದಿಗೆ ಮಾತನಾಡತೊಡಗಿದರು. ಫೋನ್ ಮೂಲಕ, ಭೇಟಿಯಾಗಿ ತಮ್ಮ ಕಥೆಗಳನ್ನು ಹೇಳಿಕೊಳ್ಳತೊಡಗಿದರು. 'ನನ್ನ ಮಗನಲ್ಲಿ ಇಂಥ ಲಕ್ಷಣಗಳಿವೆ. ಇದನ್ನು ಗಂಡನಿಗೆ ಹೇಳಿಲ್ಲ. ಈಗ ನಾನು ಏನು ಮಾಡಲಿ?' ಎಂದು ತಾಯಂದಿರು ಕೇಳಿದ್ದಾರೆ. 18 ರಂದ 65 ರ ವಯೋಮಾನದವರೆಗಿನ ಜನರ ಮಾತುಗಳಿಗೆ ಕೇಳಿಸಿಕೊಂಡೆ.

ಆ ವೇಳೆಗೆ 'ಆಪ್ತಸಲಹೆ'ಗೆ (ಕೌನ್ಸೆಲಿಂಗ್) ಸಂಬಂಧಿಸಿದ ಕೋರ್ಸ್ ಒಂದನ್ನು ನಾನು ಮಾಡಿದ್ದರಿಂದ, ಎಲ್ಲವನ್ನೂ ಕೇಳಿಸಿಕೊಳ್ಳುವ ಶಕ್ತಿ ನನಗೆ ಬಂದಿತ್ತು" ಎನ್ನುವ ವಸುಧೇಂದ್ರ, ತಮ್ಮ 'ಮೋಹನಸ್ವಾಮಿ' ಕೃತಿ ಒಂದು ಬಗೆಯ ಸಾಮಾಜಿಕ ಚಳವಳಿ ಎಂದೇ ನಂಬಿದ್ದಾರೆ.

ಮೋಹನಸ್ವಾಮಿ ಎನ್ನುವ ಹೆಸರು ಆಕರ್ಷಕವಾಗಿದೆ ಅಲ್ಲವೇ? ಈ ಹೆಸರಿನ ಹಿಂದೆಯೂ ಒಂದು ಸ್ವಾರಸ್ಯಕರ ಕಥೆ ಇದೆ. ಆನ್‌ಲೈನ್‌ನಲ್ಲಿ ಡೇಟಿಂಗ್ ಮಾಡುವವರು ಸೂಡೊ ನೇಮ್ (ಗುಪ್ತ ನಾಮ, ಸುಳ್ಳು ಹೆಸರು) ಬಳಸುವುದು ಸಹಜ. ಅದೇ ರೀತಿ ವಸುಧೇಂದ್ರ ಅವರು ರೂಪಿಸಿಕೊಂಡ ಸುಳ್ಳು ಹೆಸರು 'ಮೋಹನಸ್ವಾಮಿ'. ಈ ಹೆಸರಿನಲ್ಲಿ ಆನ್‌ಲೈನ್‌ನಲ್ಲಿ ವ್ಯವಹರಿಸುತ್ತಿದ್ದ ಅವರು – ಪುಸ್ತಕ ಬಂದ ಮೇಲೆ 'ಮೋಹನಸ್ವಾಮಿ' ಹೆಸರಿನ ಅಕೌಂಟ್ ಅನ್ನು ಅಳಿಸಿಹಾಕಿದ್ದಾರಂತೆ.

'ಮೋಹನಸ್ವಾಮಿ' ಕೃತಿಯ ಬಗ್ಗೆ ವಿಮರ್ಶಕರು ತಳೆದ ಮೌನ ವಸುಧೇಂದ್ರ ಅವರಿಗೆ ನೋವು ತಂದಿದೆ. "ನಮ್ಮ ವಿಮರ್ಶಕರು ಅಲ್ಪಸಂಖ್ಯಾತರ ಪರವಾಗಿ ಇರಬೇಕು ಎಂದು ಘೋಷಣೆಗಳನ್ನು ಹೊರಡಿಸುತ್ತಾರೆ. ಆದರೆ, ಅವರು ತಾವು ಪ್ರೀತಿಸುವ ಅಲ್ಪಸಂಖ್ಯಾತರನ್ನಷ್ಟೇ ಗೌರವಿಸುತ್ತಾರೆ. ಆದರೆ, ನಾವು ಕೂಡ ಅಲ್ಪಸಂಖ್ಯಾತರು. ನಾವು ಅವರಿಗೆ ಬೇಡ. ಈ ಪೂರ್ವಗ್ರಹ ಧೋರಣೆ ಸಿಟ್ಟು – ಬೇಸರ ತರಿಸುತ್ತೆ" ಎನ್ನುವಾಗ ಅವರ ಮಾತಿನಲ್ಲಿ ಬೇಸರ ಇಣುಕುತ್ತಿತ್ತು.

ಕಥೆ, ಸಿನಿಮಾ, ಮೋಹನಸ್ವಾಮಿ – ಹೀಗೆ, ಮಾತು ಒಂದು ಹಂತ ಮುಟ್ಟುವ ವೇಳೆಗೆ ಎರಡು ತಾಸುಗಳು ಕಳೆದಿದ್ದವು. ಅಕ್ಕಪಕ್ಕದ ಟೇಬಲ್‌ಗಳಲ್ಲಿನ ತಿನಿಸು, ಕಲರವಗಳು ಬದಲಾಗುತ್ತಿದ್ದರೂ ನಮ್ಮ ಮೇಜಿನ ಲೆಕ್ಕಾಚಾರ ಬೇರೆಯದೇ ಆಗಿತ್ತು ಎರಡು ಇಡ್ಲಿ, ಎರಡು ತಾಸು ಎನ್ನುವ ಸಮೀಕರಣವದು.

'ಕಾಪಿ ನನಗೆ ಇಷ್ಟ' ಎಂದು ಮಾತುಕತೆಯ ಆರಂಭದಲ್ಲೇ ವಸುಧೇಂದ್ರ ಹೇಳಿದ್ದರು. ಆ ಇಷ್ಟವಾದ ಕಾಫಿ ಬಂದುದು ಕೊನೆಯಲ್ಲಿ! ಹಬೆಯಾಡುವ ಕಾಫಿಯನ್ನು ಆಘ್ರಾಣಿಸುತ್ತ, ತಮ್ಮ ಮತ್ತೊಂದು ವ್ಯಸನವಾದ ಪ್ರವಾಸದ ಬಗ್ಗೆ ಅವರು ಮಾತನಾಡತೊಡಗಿದರು. "ಪ್ರವಾಸ ನನಗಿಷ್ಟ. ವಿಶೇಷವಾಗಿ ಚಾರಣ. ಟ್ರೆಕ್ಕಿಂಗ್ ನಮ್ಮ ಅಹಂಕಾರ ಕಡಿಮೆ ಮಾಡುತ್ತದೆ.

ಚಾರಣದ ಸಂದರ್ಭದಲ್ಲಿ ನಾನು ಅಲ್ಪ ಅನ್ನಿಸುತ್ತದೆ. ಅದರಲ್ಲೂ ಹಿಮಾಲಯದ ಸರಣಿಯ ಚಾರಣಗಳು ನಾವೊಂದು ಹುಳು ಎನ್ನುವ ಭಾವನೆ ಉಂಟುಮಾಡುತ್ತವೆ. ಇಂಥ ಭಾವನೆ ಬದುಕಿಗೆ ಆಗಾಗ ಬೇಕು. ಚಾರಣದ ಸಂದರ್ಭದಲ್ಲಿ ಹೊಸ ಸ್ನೇಹಿತರು ದೊರೆಯುತ್ತಾರೆ. ಅಂದಹಾಗೆ, ಚಾರಣಕ್ಕೆ ಬರುವವರು ಸಾಮಾನ್ಯವಾಗಿ ಭ್ರಷ್ಟರಲ್ಲ. ಅವರು ಜೀವನಪ್ರೀತಿ ಉಳ್ಳವರು. ನನ್ನಂಥವರಿಗೆ ಒಂಟಿತನ ಹಾಗೂ ಆರೋಗ್ಯದ ಬಗೆಗಿನ ಕಾಳಜಿ ಕೂಡ ಚಾರಣಕ್ಕೆ ಹೋಗಲು ಪ್ರೇರಣೆ ನೀಡುತ್ತದೆ. ಒಂಟಿಯಾಗಿ ಇರುವವರಿಗೆ ಆರೋಗ್ಯದ ಬಗ್ಗೆ ಆತಂಕ ಕಾಡುತ್ತಿರುತ್ತದೆ. ಈ ಅಸುರಕ್ಷತೆ ಕೂಡ ಅವರು ಚಾರಣದಂಥ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಒಂದು ಕಾರಣ" ಎಂದರು.

"ನಾನು ಟೀವಿ ನೋಡುವುದಿಲ್ಲ. ಅಡುಗೆ ಮಾಡಲು ಬರುತ್ತೆ, ಆದರೆ ಮಾಡಿಕೊಳ್ಳುವುದಿಲ್ಲ. ಅಡುಗೆಯವರನ್ನು ಅವಲಂಬಿಸಿದ್ದೇನೆ. ಆ ಸಮಯವನ್ನೆಲ್ಲ ಓದು–ಬರವಣಿಗೆಗೆ ಬಳಸುವ ಪ್ರಯತ್ನ ನನ್ನದು. ಆದರೆ, ಆರೋಗ್ಯಕ್ಕೆ ಅಗತ್ಯವಾದ ನಡಿಗೆ ಮತ್ತು ಯೋಗಾಭ್ಯಾಸ ತಪ್ಪಿಸುವುದಿಲ್ಲ. ಉಳಿದಂತೆ

ಪ್ರವಾಸ, ಕೌನ್ಸೆಲಿಂಗ್, ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಬೋಧನೆ ಹಾಗೂ ಸಿನಿಮಾ ಸಖ್ಯ ಇದ್ದೇ ಇದೆ" ಎಂದು ತಮ್ಮ ದಿನಚರಿ ಹೇಳಿಕೊಂಡರು.

ಮಾಹಿತಿ ತಂತ್ರಜ್ಞಾನ ಸಂಸ್ಥೆಯೊಂದರಲ್ಲಿ ದೊಡ್ಡ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವಸುಧೇಂದ್ರ ಥಗ ಪೂರ್ಣ ಪ್ರಮಾಣದ ಬರಹಗಾರರು. ತನ್ನಿಷ್ಟದ ಕೆಲಸ ಮಾಡುತ್ತ ಓಡಾಡಿಕೊಂಡಿರುವುದು ಅವರಿಗಿಷ್ಟ.

"ನನ್ನ ಪುಸ್ತಕಗಳಿಂದ ಬರುವ ವರಮಾನ ನನ್ನೊಬ್ಬನ ಬದುಕಿಗೆ ಸಾಕೆನ್ನಿಸುತ್ತದೆ. ಕುಟುಂಬ ಇದ್ದರೆ ಬರವಣಿಗೆಯನ್ನೇ ನೆಚ್ಚಿಕೊಂಡು ಬದುಕುವುದು ಕಷ್ಟ. ಕನ್ನಡದ ಪುಸ್ತಕ ಮಾರುಕಟ್ಟೆ ಅಷ್ಟೊಂದು ದೊಡ್ಡದಾಗಿಲ್ಲ" ಎನ್ನುವ ಲೆಕ್ಕಾಚಾರ ಅವರದು.

ನಮ್ಮ ಎರಡು ತಾಸುಗಳ ಠಿಕಾಣಿಯನ್ನು ಸಹಿಸಿಕೊಂಡ ಮಾಣಿಗೆ ಧನ್ಯವಾದ ಹೇಳುತ್ತ, ಹೋಟಲ್‌ನಿಂದ ಹೊರಬೀಳುವ ಮುನ್ನ ಕೇಳಿದ "ನೀವು ಎಡವಾ ಬಲವಾ? ಸಹಿಷ್ಣುವಾ ಅಸಹಿಷ್ಣುವಾ?" ಎನ್ನುವ ಪ್ರಶ್ನೆಗೆ ವಸುಧೇಂದ್ರ ಥಟ್ ಎಂದು ಉತ್ತರಿಸಿದರು.

"ನಾನು ಎಡವೂ ಅಲ್ಲ ಬಲವೂ ಅಲ್ಲ. ಸಹಿಷ್ಣುವೂ ಅಲ್ಲ ಅಸಹಿಷ್ಣುವೂ ಅಲ್ಲ. ಎರಡು ಗುಂಪುಗಳದೂ ಅತಿರೇಕ. ಅವರ ನಡವಳಿಕೆಗಳಲ್ಲಿ ಗುಂಪುಗಾರಿಗೆ, ಭ್ರಷ್ಟತೆ ಕಾಣಿಸುತ್ತಿದೆ. ಬಹಿಷ್ಕಾರದಿಂದ ನಾವು ಬೆಳೆಯುವುದಿಲ್ಲ; ಸ್ವೀಕಾರದಿಂದಷ್ಟೇ ಬೆಳವಣಿಗೆ ಸಾಧ್ಯ. 'ಧಾರವಾಡ ಸಾಹಿತ್ಯ ಸಂಭ್ರಮ'ಕ್ಕೆ ವಿರೋಧ ವ್ಯಕ್ತಪಡಿಸಿದವರು ಕಲ್ಬುರ್ಗಿ ಅವರನ್ನು ವಿರೋಧಿಸಿದ್ದರು. ಆಗ ಅವರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಮುಖ್ಯವೆನ್ನಿಸಲಿಲ್ಲ. ಆಗ ಕಲ್ಬುರ್ಗಿ ಅವರನ್ನು ವಿರೋಧಿಸಿದವರು ಈಗ ಅವರ ಫೋಟೊ ಇಟ್ಟುಕೊಂಡು ಪ್ರಶಸ್ತಿಗಳನ್ನು ವಾಪಸ್ ಮಾಡುತ್ತಿದ್ದಾರೆ. ಪ್ರಶಸ್ತಿ ಹಿಂತಿರುಗಿಸುತ್ತಿರುವ ಲೇಖಕರ ಬಗ್ಗೆ ನನಗೆ ಅಪಾರ ಗೌರವವಿದೆ. ಆದರೆ ಅವರ ದ್ವಂದ್ವ ನಿಲುವನ್ನು ಹೇಗೆ ಒಪ್ಪುವುದು?" ಎಂದರು.

ಹೋಟೆಲ್‌ನಿಂದ ಹೊರಬಂದು ಕಾರು ಹತ್ತುವ ಮುನ್ನ ವಸುಧೇಂದ್ರ ಹೇಳಿದರು "ಈವರೆಗೆ ನಾನು ಬರೆದಿರುವುದು ತುಂಬಾ ಕಡಿಮೆ. ಹೆಚ್ಚು ಬರೆಯಬೇಕಿದೆ. ಕಾದಂಬರಿ ಜಗತ್ತು ನನ್ನನ್ನು ಕರೀತಿದೆ. ಈ ನಿಟ್ಟಿನಲ್ಲಿ ಕುವೆಂಪು ನನಗೆ ಮಾದರಿ, ಬೃಹತ್ತಾದ ಮಹತ್ತಾದ ಒಂದೆರಡು ಕಾದಂಬರಿ ಬರೆಯುವ ಆಸೆ ಇದೆ. ಅದಕ್ಕಾಗಿ ತಯಾರಿಯೂ ನಡೆಸಿದ್ದೇನೆ. ನಾನು ಬಳ್ಳಾರಿಯವನಾದ್ದರಿಂದ ವಿಜಯನಗರದ ಇತಿಹಾಸವನ್ನು ಕಾದಂಬರಿ ರಚನೆಗೆ ಬಳಸಿಕೊಳ್ಳಬಹುದಾ ಎಂದು ಯೋಚಿಸುತ್ತಿರುವೆ".

ಗಾಂಧಿಬಜಾರಿನ ಮುಖ್ಯ ರಸ್ತೆಯಿಂದ ವಸುಧೇಂದ್ರ ಕಾರು ಮರೆಯಾಗುವಾಗ ಕಾಣಿಸಿದ್ದು ಅವರ ಫಳಫಳ ಹೊಳೆಯುವ ಬೋಳುತಲೆ. ಹೊಸ ಕೇಶವಿನ್ಯಾಸದ ಕುರಿತ ಪ್ರಶ್ನೆಯೊಂದು ಹಾಗೆಯೇ ಉಳಿಯಿತು.

ಅಡಿಟಿಪ್ಪಣಿ:

1. ಅಂತರ ಜಾಲ ಮಾಹಿತಿ : https://en.wikipedia.org/wiki/Vasudhendra
2. ಪ್ರಜಾವಾಣಿಯ ಲೇಖನ ಬರಗಳು
3. ದೀಪಾವಳಿ ಸಂಚಿಕೆ ಲೇಖನ

ಅನುಬಂಧ:

ಆಕಾರಗ್ರಂಥಗಳು:

5. ವಸುಧೇಂದ್ರ – ಮನೀಷೆ (ಕಥಾ ಸಂಕಲನ)
ಛಂದ ಪುಸ್ತಕ ಪ್ರಕಾಶನ
ಮುದ್ರಣ 1998

6. ವಸುಧೇಂದ್ರ – ಯುಗಾದಿ (ಕಥಾ ಸಂಕಲನ)
ಛಂದ ಪುಸ್ತಕ ಪ್ರಕಾಶನ
ಮುದ್ರಣ 2004

7. ವಸುಧೇಂದ್ರ – ಚೇಳು (ಕಥಾ ಸಂಕಲನ)
ಛಂದ ಪುಸ್ತಕ ಪ್ರಕಾಶನ
ಮುದ್ರಣ 2006

8. ವಸುಧೇಂದ್ರ – ಹಂಪಿ ಎಕ್ಸ್‌ಪ್ರೆಸ್(ಕಥಾ ಸಂಕಲನ)
ಛಂದ ಪುಸ್ತಕ ಪ್ರಕಾಶನ
ಮುದ್ರಣ 2011

9. ವಸುಧೇಂದ್ರ – ಮಿಥುನ ಶ್ರೀರಮಣರ ತೆಲುಗು ಅನುವಾದಿತ
ಛಂದ ಪುಸ್ತಕ ಪ್ರಕಾಶನ
(ಕಥಾ ಸಂಕಲನ) ಮುದ್ರಣ 2004

ಪರಾಮರ್ಶನ ಗ್ರಂಥಗಳು:

1. ಮ. ಮಹೇಶನ್ — ಜಾಗತೀಕರಣ ದಕ್ಷಿಣದ ದೃಷ್ಠಿಯಲ್ಲಿ
   ನವಕರ್ನಾಟಕ ಪ್ರಕಾಶನ ,ಮುದ್ರಣ 2002
2. ಡಾ.ಕರೀಗೌಡ ಬೀಚನಹಳ್ಳಿ — ಶತಮಾನದ ಸಣ್ಣಕಥೆಗಳ ಸಮೀಕ್ಷೆ
   ಕನ್ನಡ ಸಾಹಿತ್ಯ ಅಕಾಡೆಮಿ ಮುದ್ರಣ 2003
3. ಡಾ. ಗಿರಡ್ಡಿಗೋವಿಂದರಾಜು — ಕಲ್ಪಿತ ವಾಸ್ತವ ಕನ್ನಡ ಸಣ್ಣಕತೆ
   ಸಾಹಿತ್ಯ ಪ್ರಕಾಶನ ಮುದ್ರಣ 2009
4. ನರಹಳ್ಳಿ ಬಾಲಸುಬ್ರಮಣ್ಯ — ನೆಲಸಂಸ್ಕೃತಿ (ವಿಮರ್ಶಾ ಕೃತಿ)
   ಸಾಹಿತ್ಯ ಪ್ರಕಾಶನ ಮುದ್ರಣ
5. ಡಾ. ಗಿರಡ್ಡಿಗೋವಿಂದರಾಜು — ಸಣ್ಣಕತೆಯ ಹೊಸ ಒಲವು
   ಸಾಹಿತ್ಯ ಭಂಡಾರ ಹುಬ್ಬಳಿ ಮುದ್ರಣ 1965
6. ಕುವೆಂಪು ಕೃತಿ ವಿಮರ್ಶೆ — ಮೈ.ವಿ.ವಿ

ಮಾಹಿತಿ ತಂತ್ರಜ್ಞಾನ ಇತರೆ ದಾಖಲೆಗಳು:

1. https://en.wikipedia.org/wiki/Vasudhendra
2. http://kannada.oneindia.com/literature/people/2009/0410-vasudhendra-chanda-pustaka-publication.html
3. http://www.goodreads.com/author/show/6923755.Vasudhendra
4. http://www.goodreads.com/book/show/26838758-mohanaswamy
5. ಪ್ರಜಾವಾಣಿಯ ಲೇಖನ ಬರಗಳು